

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 10 ಮಂಗಳವಾರ 2023

ಸಂಪುಟ: 44 | ಸಂಚಿಕೆ: 175 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕಾವೇರಿ ಜಲವಿವಾದಕ್ಕೆ ಇಲ್ಲೊಂದು ಶಾಶ್ವತ ಪರಿಹಾರವಿದೆ...!

ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಕೊರತೆ ನೀಗಲು ಲಿಂಗನಮಕ್ಕಿ ಅಣೆಕಟ್ಟೆಯಿಂದ ಶಿವನಸಮುದ್ರದವರೆಗೆ ಭೂಗತ ಸುರಂಗ ನಿರ್ಮಿಸಿದರೆ ವಿವಾದಕ್ಕೆ ತೆರೆ ಎಳೆಯಬಹುದು



ವಿ.ಆರ್.ವೇಣುಗೋಪಾಲ್
ಬಿಇ (ಸಿವಿಲ್)

ಮೈಸೂರು,ಅ.9–ಕೆಆರ್‌ಎಸ್ ಅಣೆಕಟ್ಟು ನಿರ್ಮಾಣ ಸಂದರ್ಭದಲ್ಲಿ ಎರಡು ರಾಜ್ಯಗಳ ನಡುವಿನ ಒಪ್ಪಂದದಂತೆ ಕರ್ನಾಟಕವು ಪ್ರತಿವರ್ಷ ತಮಿಳುನಾಡಿಗೆ 177 ಟಿಎಂಸಿ (ಸಾವಿರ ಮಿಲಿಯನ್ ಘನ ಅಡಿ) ನೀರು ಹರಿಸಬೇಕು. ಮಳೆಯ ಕೊರತೆ ಎದುರಾದಾಗ ಮತ್ತು ತಮಿಳುನಾಡಿಗೆ ನೀರು ಬಿಟ್ಟಾಗ ಕೆಆರ್‌ಎಸ್ ಜಲಾಶಯ ಶೀಘ್ರವೇ ಬರಿದಾಗುತ್ತದೆ. ಇದರಿಂದ ಕರ್ನಾಟಕದಲ್ಲಿ ರೈತರು ಸಂಕಷ್ಟಕ್ಕೀಡಾಗಿ, ಪ್ರತಿಭಟನೆಗೆ ಮುಂದಾಗುತ್ತಾರೆ.

ಪೂರ್ವಕ್ಕೆ ಹರಿಯುವ ಕಾವೇರಿ ನದಿಯಲ್ಲಿ ಮಾಮೂಲಿಯಾಗಿ ನೀರಿನ



ಲಿಂಗನಮಕ್ಕಿ ಅಣೆಕಟ್ಟೆಯ ಸಂಗ್ರಹ ಚಿತ್ರ

ಕೊರತೆ ಇದ್ದರೆ, ಕರ್ನಾಟಕದಲ್ಲಿ ಪಶ್ಚಿಮಕ್ಕೆ ಹರಿಯುವ ಹಲವು ನದಿಗಳ ನೀರು ಸುಮ್ಮನೆ ಸಮುದ್ರಕ್ಕೆ ಹರಿಯುತ್ತಿದೆ. ಅಂತಹ ನದಿಗಳಲ್ಲಿ ಶರಾವತಿಯೂ ಒಂದು. ಮಲೆ



ಶಿವನಸಮುದ್ರದ ಜಲಪಾತ ಸಂಗ್ರಹ ಚಿತ್ರ

ನಾಡು ಭಾಗದ ಶಿವಮೊಗ್ಗ ಜಿಲ್ಲೆಯಲ್ಲಿ ಅತೀ ಹೆಚ್ಚು ಮಳೆಯಾಗುತ್ತದೆ. ಈ ಮಳೆ ನೀರನ್ನು ಲಿಂಗನಮಕ್ಕಿ ಅಣೆಕಟ್ಟೆಯಲ್ಲಿ ಶೇಖರಿಸಿ ಜಲವಿದ್ಯುತ್ ಉತ್ಪಾದನೆ ಪ್ರಕ್ರಿಯೆ

> ಲಿಂಗನಮಕ್ಕಿ ಅಣೆಕಟ್ಟೆಯ ನೀರಿನ ಸಂಗ್ರಹ ಸಾಮರ್ಥ್ಯ 152 ಟಿಎಂಸಿ ಇದ್ದು, ವರ್ಷಕ್ಕೆ ಹಲವು ಬಾರಿ ತುಂಬಿ ಬರಿದಾಗುತ್ತದೆ. ಈ ಅಣೆಕಟ್ಟೆಯಲ್ಲಿ ಒಮ್ಮೆಗೆ ಭರ್ತಿಯಾಗುವ ನೀರನ್ನು ಸಮುದ್ರಕ್ಕೆ ಬಿಡುವುದನ್ನು ತಪ್ಪಿಸಿ, ತಮಿಳುನಾಡಿಗೆ ಪೂರೈಸಿದರೆ, ಕರ್ನಾಟಕವು ತನ್ನ ಎಲ್ಲಾ ನೀರನ್ನು ಕೆಆರ್‌ಎಸ್ ಅಣೆಕಟ್ಟೆಯಲ್ಲೇ ಉಳಿಸಿಕೊಳ್ಳಬಹುದು.

ಪೂರ್ಣಗೊಂಡ ಬಳಿಕ ಹೆಚ್ಚಿನ ಪ್ರಮಾಣದ ನೀರನ್ನು ಶರಾವತಿ ನದಿಗೆ ಬಿಡಲಾಗುತ್ತದೆ. ಶರಾವತಿ ನದಿಯಲ್ಲಿನ ಈ ನೀರು ಸುಮ್ಮನೆ ವ್ಯರ್ಥವಾಗಿ ಅರಬ್ಬಿ ▶ 9ನೇ ಪುಟಕ್ಕೆ

ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ

ರಾಷ್ಟ್ರವ್ಯಾಪಿ ಜಾತಿಗಣತಿ ಗ್ಯಾರಂಟಿ

■ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ನಿರ್ಣಯ ■ ಬಿಹಾರದ ಜಾತಿಗಣತಿ ಬಗ್ಗೆ ಸ್ವಾಗತ

ನವದೆಹಲಿ, ಅ. 9–ದೇಶದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರತಿ 10 ವರ್ಷಗಳಿಗೊಮ್ಮೆ ನಡೆಸುವ ಜನಗಣತಿಯ ಭಾಗವಾಗಿ 2021ರಲ್ಲಿ ನಡೆಸಬೇಕಾಗಿದ್ದ ರಾಷ್ಟ್ರವ್ಯಾಪಿ ಜಾತಿಗಣತಿ ನಡೆಸಲಿರುವುದಾಗಿ ನವದೆಹಲಿಯಲ್ಲಿ ಇಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ (ಸಿಡಬ್ಲ್ಯೂಸಿ)ಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಬಿಹಾರ ಸರ್ಕಾರ ಜಾತಿಗಣತಿ ವರದಿ ಬಿಡುಗಡೆ ಮಾಡಿರುವುದನ್ನು ಸಿಡಬ್ಲ್ಯೂಸಿ ಸ್ವಾಗತಿಸಿದ್ದು, ವರದಿಯ ಅಂಕಿ–ಅಂಶಗಳಿಂದ ವಿವಿಧ ಜಾತಿಗಳ ಜನಸಂಖ್ಯೆ ಪ್ರಮಾಣ ಹಾಗೂ ಪ್ರಾತಿನಿಧ್ಯದ ನಡುವೆ ಭಾರಿ ಅಂತರವಿರುವುದು ಬಹಿರಂಗ



ಗೊಂಡಿದ್ದು, ಸಾಮಾಜಿಕ ನ್ಯಾಯ ಖಾತರಿಪಡಿಸಲು ಕೈಗೊಳ್ಳಬೇಕಾದ ತುರ್ತು ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿಯನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರ ಶೀಘ್ರದಲ್ಲೇ ಜಾರಿಗೆ ತರಲಿದೆ. ಅದರಲ್ಲಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ದೊರಕಿಸಿಕೊಡುವುದು ಹಾಗೂ ಮೋದಿ ಸರ್ಕಾರ ಅನಗತ್ಯವಾಗಿ ಹೇರಿರುವ ಜನಗಣತಿ ಮತ್ತು ಕ್ಷೇತ್ರ ವಿಂಗಡಣೆಯ ಅಡಚಣೆಯನ್ನು ನಿವಾರಿಸಲಾಗುವುದು ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ. ಜನಸಂಖ್ಯೆ ಆಧರಿಸಿ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪಂಗಡದವರಿಗೆ ಮೀಸಲಾತಿ ಸೌಲಭ್ಯ ಒದಗಿಸಲು ಅನುವಾಗುವಂತೆ ಶಾಸನ ರಚನೆಯ ಮೂಲಕ ಮೀಸಲಾತಿಗೆ ಇರುವ ಶೇ. 50ರ ಮಿತಿಯನ್ನು ತೆಗೆದು ಹಾಕಲಾಗುವುದು. ಕೇಂದ್ರ ಸರ್ಕಾರ ಕೆಲವು ▶ 9ನೇ ಪುಟಕ್ಕೆ

ಮುಂಗಾರು ವೈಫಲ್ಯ ಹಿನ್ನೆಲೆ

ಸಣ್ಣ, ಅತೀ ಸಣ್ಣ ರೈತರ ಸಾಲ ಮನ್ನಾಕ್ಕೆ ಚಿಂತನೆ

■ ಸಹಕಾರ ಸಚಿವ ಕೆ.ಎನ್.ರಾಜಣ್ಣ ಇಂಗಿತ
■ ಬಡ್ಡಿ ರಹಿತ ಸಾಲ ನೀಡುವ ಬಗ್ಗೆಯೂ ಪರಿಶೀಲನೆ

ಬೆಂಗಳೂರು, ಅ.9(ಕೆಎಂಶಿ)–ಮುಂಗಾರು ಮಳೆ ವೈಫಲ್ಯದಿಂದ ಕಂಗಾಲಾಗಿರುವ ರೈತರ ಬೆಳೆ ಸಾಲದಲ್ಲಿ ಕೆಲವು ದಿಟ್ಟ ತೀರ್ಮಾನಗಳನ್ನು ಸರ್ಕಾರ ಕೈಗೊಳ್ಳಲಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಬಹುತೇಕ ಭಾಗ ಬರಕ್ಕೆ ತುತ್ತಾಗಿದ್ದು, ಈಗಾಗಲೇ 215ಕ್ಕೂ ಹೆಚ್ಚು ತಾಲೂಕುಗಳನ್ನು ಬರವೆಂದು ಘೋಷಿಸಲಾಗಿದೆ. ಉಳಿದ ತಾಲೂಕುಗಳು ಅದೇ ಸ್ಥಿತಿಯಲ್ಲಿವೆ. ಕೇಂದ್ರದ ತಂಡ ಈಗಾಗಲೇ ಬರಪೀಡಿತ ಪ್ರದೇಶಗಳಲ್ಲಿ ಖುದ್ದು ಅಧ್ಯಯನ ನಡೆಸಿ ದೆಹಲಿಗೆ ಮರಳಿದೆ. ತಂಡ ನೀಡುವ ವರದಿ ಆಧರಿಸಿ ಕೇಂದ್ರ ಸರ್ಕಾರ ಯಾವ ತೀರ್ಮಾನ ಕೈಗೊಳ್ಳುತ್ತದೆಯೋ ಅದರ ಆಧಾರದ ಮೇಲೆ ನಾವು ಕೆಲವು ರೈತಪರ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ.



ಸಣ್ಣ ಮತ್ತು ಅತೀ ಸಣ್ಣ ರೈತರ ಸಾಲ ಮನ್ನಾ ಮಾಡುವುದು, ಹೆಚ್ಚು ರೈತರಿಗೆ ಬಡ್ಡಿ ರಹಿತ ಸಾಲ ನೀಡುವ ಬಗ್ಗೆ ನಂತರ ದಿನಗಳಲ್ಲಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು. ಕೃಷಿ ಮತ್ತು ಕಂದಾಯ ಇಲಾಖೆ ಈಗಾಗಲೇ ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ಕಲ್ಪಿಸಲು ಯೋಜನೆ ರೂಪಿಸುತ್ತಿದೆ. ನಮ್ಮ ಇಲಾಖೆಯಿಂದ ಸಣ್ಣ ಹಿಡುವಳಿದಾರರಿಗೆ ಸಹಾಯಹಸ್ತ ನೀಡಬೇಕು ಎಂದರೆ ನಾವು ಹಿಂದೆ ಸರಿಯುವುದಿಲ್ಲ. ರೈತರಿಗೆ ಶೂನ್ಯ ಬಡ್ಡಿದರದಲ್ಲಿ




ಸಾಲ ನೀಡಲಾಗುತ್ತಿದೆ. ಮುಂಗಾರು ಮಳೆ ವೈಫಲ್ಯದಿಂದ ಬೆಳೆ ನಷ್ಟವಾಗಿ ರೈತರು ಸಂಕಷ್ಟದಲ್ಲಿದ್ದಾರೆ. ಈ ವಿಚಾರವನ್ನು ಕೇಂದ್ರದ ಬರ ಅಧ್ಯಯನ ತಂಡಕ್ಕೂ ಮನವರಿಕೆ ಮಾಡಿಕೊಡಲಾಗಿದೆ ಎಂದು ಅವರು ಹೇಳಿದರು. ಸಹಕಾರಿ ಸಂಸ್ಥೆಗಳಲ್ಲಿನ ಅವ್ಯವಹಾರ ತಡೆ ಹಾಗೂ ಠೇವಣಿದಾರರ ಹಿತ ಕಾಪಾಡುವ ನಿಟ್ಟಿನಲ್ಲಿ ರಚಿಸಲಾಗಿರುವ ಮಾಜಿ ಉಪ ಮುಖ್ಯಮಂತ್ರಿ ▶ 9ನೇ ಪುಟಕ್ಕೆ

ಪ್ಯಾಲೆಸ್ಟೈನ್ ಬೆಂಬಲಿಸಿ ಕಾಂಗ್ರೆಸ್ ನಿರ್ಣಯ

ನವದೆಹಲಿ, ಅ.9–ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ಮೂಲದ ಹಮಾಸ್ ಉಗ್ರರ ನಡುವಿನ ಯುದ್ಧದಲ್ಲಿ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಇಸ್ರೇಲ್‌ಗೆ ಬೆಂಬಲ ಸೂಚಿಸಿದ್ದರೆ, ಸಿಡಬ್ಲ್ಯೂಸಿ ಸಭೆಯಲ್ಲಿ ಕಾಂಗ್ರೆಸ್ ಪ್ಯಾಲೆಸ್ಟೈನ್‌ಗೆ ಬೆಂಬಲಿಸಿ ನಿರ್ಣಯ ಕೈಗೊಂಡಿದೆ. ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಯುದ್ಧದ ಬಗ್ಗೆ ಆತಂಕ ವ್ಯಕ್ತಪಡಿಸಿದ ಸಿಡಬ್ಲ್ಯೂಸಿ ಸಭೆ ಕದನ ವಿರಾಮಕ್ಕೆ ಒತ್ತಾಯಿಸಿದೆ. ಮಧ್ಯ ಪ್ರಾಚ್ಯದಲ್ಲಿ ಭುಗಿಲೆದ್ದ ಯುದ್ಧ ಮತ್ತು ಸಾವಿರಕ್ಕೂ ಹೆಚ್ಚು ಜನರ ಪ್ರಾಣಹಾನಿ ಬಗ್ಗೆ ಸಿಡಬ್ಲ್ಯೂಸಿ ದುಃಖ ವ್ಯಕ್ತಪಡಿಸುತ್ತದೆ. ▶ 9ನೇ ಪುಟಕ್ಕೆ





ಡಿಸಿಎಂ ಡಿ.ಕೆ.ಶಿವಕುಮಾರ್‌ದು ಬರೀ ಉತ್ತರನ ಪೌರುಷ...!

● ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡರ ವ್ಯಂಗ್ಯೋಕ್ತಿ ● ಹರಸಾಹಸ ಮಾಡಿ ಪಕ್ಷ ಅಧಿಕಾರಕ್ಕೆ ತಂದು ಸಿದ್ದರಾಮಯ್ಯರಿಗೆ ಸಿಎಂ ಸ್ಥಾನ ಬಿಟ್ಟುಕೊಟ್ಟರು ● ಮುಂದಿನ ಐದು ವರ್ಷ ಸಿದ್ದರಾಮಯ್ಯರೇ ಮುಖ್ಯಮಂತ್ರಿ ಅಂತಾರೆ; ಡಿಕೆಶಿಗೆ $2^1/_2$ ವರ್ಷ ಸಿಎಂ ಸ್ಥಾನ ಸಿಗುತ್ತಾ?

ಬೆಂಗಳೂರು, ಅ.9(ಕೆಎಂಶಿ)–ಕೆಪಿಸಿಸಿ



ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪರರ ಮುಂದೆ ತೋರಿಸುವ ಪೌರುಷವನ್ನು ತಮ್ಮ ಪಕ್ಷದ ಮುಖಂಡರಲ್ಲಿ ತೋರಿಸಿದರೆ ಮುಖ್ಯಮಂತ್ರಿಯಾಗಬಹುದು ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಕುಮಾರ್ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ತಂತ್ರಗಾರಿಕೆ ಬಳಸಿ ಪಕ್ಷ ಅಧಿಕಾರಕ್ಕೆ ತಂದರೂ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟಿದ್ದೇ ಲಾಭ ಎಂದು ವ್ಯಂಗ್ಯವಾಡಿದರು. ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯುವುದಾಗಿ ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರು ಹೇಳುತ್ತಿದ್ದಾರೆ. ಆದರೆ, ಡಿ.ಕೆ.ಶಿವಕುಮಾರ್ ಅವರು ಎರಡೂವರೆ ವರ್ಷ ಮುಖ್ಯಮಂತ್ರಿಯಾಗುವುದಾಗಿ ಹೇಳುವ ಎದೆಗಾರಿಕೆ ತೋರುತ್ತಿಲ್ಲ. ಏನಿದ್ದರೂ ಉತ್ತರನ ಪೌರುಷವಿದ್ದಂತೆ ಎಂದು ವಾಗ್ದಾಳಿ ನಡೆಸಿದರು. ಉಪ ಮುಖ್ಯಮಂತ್ರಿಯಾಗಿದ್ದರೂ ಅವರ ಪಕ್ಷದ ಸಚಿವ ರಾಜಣ್ಣ ಮೂರು ಉಪ ಮುಖ್ಯಮಂತ್ರಿ ಆಗಬೇಕು ಎನ್ನುತ್ತಾರೆ. ಮತ್ತೊಬ್ಬ ಮಾಜಿ ಸಚಿವರಾದ ರಾಯರೆಡ್ಡಿ ಆರು ಡಿಸಿಎಂ ಆಗಲಿ ಎನ್ನುತ್ತಾರೆ. ಇನ್ನು ಸಿದ್ದರಾಮಯ್ಯ ಬೆಂಬಲಿಗರು 5 ವರ್ಷ ▶ 9ನೇ ಪುಟಕ್ಕೆ

ಮಹಿಷ ದಸರಾ ದಿನವೇ ಚಲೋ ಚಾಮುಂಡಿಬೆಟ್ಟ

● ಸಂಸದ ಪ್ರತಾಪ್ ಸಿಂಹ ಘೋಷಣೆ ● ಕನಿಷ್ಠ ಐದು ಸಾವಿರ ಮಂದಿ ಭಾಗಿ ● ಅನಿವಾರ್ಯವಾದರೆ ಸಂಘರ್ಷಕ್ಕೂ ಸಿದ್ಧ ● ತಾಯಿಗೆ ಅವಮಾನಿಸಿದರೆ ಸುಮ್ಮನಿರಕ್ಕಾಗಲ್ಲ ● ಮುಖ್ಯಮಂತ್ರಿ ಸಿದ್ದರಾಮಯ್ಯ ಮೌನಕ್ಕೆ ಸಿಂಹ ಸಿಡಿಮಿಡಿ

ಮೈಸೂರು,ಅ.9(ಪಿಎಂ)–ಮಹಿಷ ದಸರಾ ವಿರೋಧಿಸಿ ಬಿಜೆಪಿ ವತಿಯಿಂದ ಹಮ್ಮಿಕೊಂಡಿರುವ ಚಲೋ ಚಾಮುಂಡಿಬೆಟ್ಟ ಜಾಥಾವು ಅ.13ರ ಬೆಳಗ್ಗೆ 8ಕ್ಕೆ ಆರಂಭವಾಗಲಿದ್ದು, ಈ ಹೋರಾಟದಲ್ಲಿ ಕನಿಷ್ಠ 5 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಚಲೋ ಚಾಮುಂಡಿಬೆಟ್ಟ ಹೋರಾಟದ ಪೋಸ್ಟರ್ ಬಿಡುಗಡೆ ಮಾಡಿ ಅವರು ಮಾತನಾಡಿದರು. ಬೆಟ್ಟದ ತಾವರೆಕಟ್ಟೆಯಿಂದ ಜಾಥಾ ಪ್ರಾರಂಭ ಮಾಡಲಿದ್ದೇವೆ. ಸಾಕಷ್ಟು ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಖುದ್ದಾಗಿ ಕರೆ ಮಾಡಿ ಹೋರಾಟದಲ್ಲಿ ಭಾಗವಹಿಸುವುದಾಗಿ ತಿಳಿಸಿದ್ದಾರೆ. ಅಂದು ಚಾಮುಂಡಿಗೆ ಪೂಜೆ ಸಲ್ಲಿಸುತ್ತೇವೆ. ಹಾಗೆಯೇ ಮಹಿಷಾನ ಪ್ರತಿಮೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿ ವೇಳೆ ಚಲೋ ಚಾಮುಂಡಿಬೆಟ್ಟ ಹೋರಾಟದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಬಳಿ ಕುಳಿತು ಯಾವುದೇ ಕಾರಣಕ್ಕೂ ಅಲ್ಲಿ ಅಪಚಾರ ಮಾಡಲು ಬಿಡುವುದಿಲ್ಲ ಎಂದರು.


ಅಂಬೇಡ್ಕರ್ ಪ್ರತಿಮೆಗೆ ಅಪಮಾನ ಮಾಡಿದ್ದರು: ಮಹಿಷಾ ದಸರಾ ಸಮಿತಿಯವರು 50 ವರ್ಷಗಳಿಂದ ಆಚರಣೆ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ನಾನು ಆಹ್ವಾನ ಪತ್ರಿಕೆ ಸಹ ನೋಡಿದ್ದು, ಅದರಲ್ಲಿ ಉದ್ಘಾಟನೆಯನ್ನು ▶ 6ನೇ ಪುಟಕ್ಕೆ

ಮೈಸೂರು ಅರಮನೆ ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆ

● ಸ್ಟ್ರಾಂಗ್‌ರೂಮ್‌ನಲ್ಲಿದ್ದ ಬಿಡಿಭಾಗಗಳು ● ಕನ್ನಡಿತೊಟ್ಟಿಯಲ್ಲಿ ಬೆಳ್ಳಿಯ ಭದ್ರಾಸನ ಜೋಡಣೆ ● ಖಾಸಗಿ ದರ್ಬಾರ್‌ಗೆ ಭರದ ಸಿದ್ಧತೆ

ಮೈಸೂರು,ಅ.9(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವದ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಧಾರ್ಮಿಕ ಆಚರಣೆಯಲ್ಲಿ ಪ್ರಮುಖ ಆಕರ್ಷಣೆ ಖಾಸಗಿ ದರ್ಬಾರ್‌ಗೆ ಸೋಮವಾರ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಬಿಗಿ ಭದ್ರತೆ ನಡುವೆಯಲ್ಲಿ ಸಿಂಹಾಸನ ಹಾಗೂ ಕನ್ನಡಿತೊಟ್ಟಿಯಲ್ಲಿ ಬೆಳ್ಳಿಯ ಭದ್ರಾಸನ ಜೋಡಣೆ ಮಾಡಲಾಯಿತು. ಪ್ರಸಕ್ತ ಸಾಲಿನ ಖಾಸಗಿ ದರ್ಬಾರ್ ಅ.15ರಿಂದ ಆರಂಭವಾಗಲಿದ್ದು, ಅದೇ ದಿನ ಅರಮನೆಯಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಖಾಸಗಿ ದರ್ಬಾರ್ ಹಾಗೂ ಇನ್ನಿತರ ಧಾರ್ಮಿಕ ಕಾರ್ಯ ಆರಂಭಿಸಲಿದ್ದಾರೆ.

ನವರಾತ್ರಿ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ವಿವಿಧ ಪೂಜಾ ಕಾರ್ಯದಲ್ಲಿ ಪಾಲ್ಗೊಳ್ಳಲಿದ್ದು, ಅದರಲ್ಲಿ ಖಾಸಗಿ ದರ್ಬಾರ್ ಪ್ರಮುಖ ಆಚರಣೆ. ಈ ಹಿನ್ನೆಲೆಯಲ್ಲಿ ಸೋಮವಾರ ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿಯ ಕಣ್ಗಾವಲಿನಲ್ಲಿ ನೆಲಮಾಳಿಗೆಯಲ್ಲಿರುವ ಸ್ಟ್ರಾಂಗ್‌ರೂಮ್‌ನಿಂದ ರತ್ನಖಚಿತ ಸಿಂಹಾಸನ ಹಾಗೂ ಬೆಳ್ಳಿಯ ಭದ್ರಾಸನವನ್ನು ತಂದು ಜೋಡಣೆ



ಮೊಟಕಾಯ್ತು ಗೆಜ್ಜಗಳ್ಳಿ ಸಂಪ್ರದಾಯ

ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಖಾಸಗಿ ದರ್ಬಾರ್ ನಡೆಸುವಾಗ ನಂಜನಗೂಡು ತಾಲೂಕಿನ ಗೆಜ್ಜಗಳ್ಳಿ ಗ್ರಾಮದ ಕೆಲವರಿಂದ ಸಾಂಪ್ರದಾಯಿಕವಾಗಿ ಸಿಂಹಾಸನ ಜೋಡಣೆ ಕಾರ್ಯ ನಡೆಸಲಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಗೆಜ್ಜಗಳ್ಳಿ ಗ್ರಾಮಸ್ಥರಿಂದ ಸಿಂಹಾಸನ ಜೋಡಣಾ ಕಾರ್ಯಕ್ಕೆ ತಿಲಾಂಜಲಿ ನೀಡಲಾಗಿದ್ದು, ಕಳೆದ ಕೆಲವು ವರ್ಷಗಳಿಂದ ಅರಮನೆಯ ಸಿಬ್ಬಂದಿಗಳೇ ಸಿಂಹಾಸನ ಹಾಗೂ ಭದ್ರಾಸನ ಜೋಡಣಾ ಕಾರ್ಯ ನಡೆಸುತ್ತಿದ್ದಾರೆ.

ಮಾಡಿ, ಖಾಸಗಿ ದರ್ಬಾರ್‌ಗೆ ಪೂರ್ವ ಸಿದ್ಧತಾ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಹೋಮ, ಪೂಜೆ: ಭಾದ್ರಪದ ಮಾಸ, ಕೃಷ್ಣಪಕ್ಷದ ದಶಮಿ ದಿನವಾದ ಇಂದು ಬೆಳಗ್ಗೆ 7.15ರಿಂದ ದರ್ಬಾರ್ ಹಾಲ್ ಬಳಿ ಅರಮನೆಯ ಪುರೋಹಿತರಿಂದ ನವಗ್ರಹ ಪೂಜೆ, ಗಣಪತಿ ಹೋಮ, ಚಾಮುಂಡಿ ಪೂಜೆ, ಶಾಂತಿ ಹೋಮ ಸೇರಿದಂತೆ ವಿವಿಧ ▶ 10ನೇ ಪುಟಕ್ಕೆ

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 100.92 ಅಡಿ	ಇಂದಿನ ಮಟ್ಟ 2,276.52 ಅಡಿ	ಇಂದಿನ ಮಟ್ಟ 2,856.35 ಅಡಿ
ಹಿಂದಿನ ವರ್ಷದ ಮಟ್ಟ 123.62 ಅಡಿ	ಹಿಂದಿನ ವರ್ಷದ ಮಟ್ಟ 2,281.94 ಅಡಿ	ಹಿಂದಿನ ವರ್ಷದ ಮಟ್ಟ 2,853.38 ಅಡಿ
ನಿನ್ನೆಯ ಮಟ್ಟ 101.20 ಅಡಿ	ನಿನ್ನೆಯ ಮಟ್ಟ 2,276.65 ಅಡಿ	ನಿನ್ನೆಯ ಮಟ್ಟ 2,856.09 ಅಡಿ
ಇಂದಿನ ಒಳಹರಿವು 3,503 ಕ್ಯೂಸೆಕ್	ಇಂದಿನ ಒಳಹರಿವು 1,261 ಕ್ಯೂಸೆಕ್	ಇಂದಿನ ಒಳಹರಿವು 2,202 ಕ್ಯೂಸೆಕ್
ಇಂದಿನ ಹೊರಹರಿವು 5,973 ಕ್ಯೂಸೆಕ್	ಇಂದಿನ ಹೊರಹರಿವು 2,000 ಕ್ಯೂಸೆಕ್	ಇಂದಿನ ಹೊರಹರಿವು 1,150 ಕ್ಯೂಸೆಕ್




ದಸರಾ ಚಲನಚಿತ್ರೋತ್ಸವದಲ್ಲಿ 112 ಸಿನಿಮಾಗಳು ಪ್ರದರ್ಶನ

ಕಾಂತಾರ, ಪೊಮ್ಮಲೆ ಕೊಡಗು, ಇವತ್ತೆ ಲಾಸ್ಟ್ ನಾಳೆಯಿಂದ ಎಣ್ಣೆ ಹೊಡೆಯಲ್ಲ ಹೈಲೈಟ್ ಸಿನಿಮಾಗಳು

ಮೈಸೂರು, ಅ.9(ಬಿಎಲ್‌ಯು)– ಈ ಬಾರಿಯ ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ದಸರಾ ಚಲನ ಚಿತ್ರೋತ್ಸವದಲ್ಲಿ ಒಟ್ಟು 112 ಸಿನಿಮಾಗಳು ಪ್ರದರ್ಶನಗೊಳ್ಳಲಿವೆ.

ಅಕ್ಟೋಬರ್ 16 ರಿಂದ 22 ರವರೆಗೆ ಮೈಸೂರಿನ ಡಿಆರ್‌ಸಿ ಹಾಗೂ ಐನಾಕ್ಸ್ ಮಲ್ಟಿಪ್ಲೆಕ್ಸ್‌ನಲ್ಲಿ ಪ್ರತಿದಿನ ಸಿನಿಮಾ ಪ್ರದರ್ಶನವಾಗಲಿದ್ದು, ರಾಷ್ಟ್ರ ಪ್ರಶಸ್ತಿ ಪಡೆದ ಹಲವು ಸಿನಿಮಾಗಳ ಮೂಲಕ ಸಿನಿ ರಸಿಕರಿಗೆ ಉತ್ತಮ ಮನೋರಂಜನೆ ನೀಡುವ ವ್ಯವಸ್ಥೆ ಮಾಡಲಾಗಿದೆ.







ಒಟ್ಟು 30 ಕನ್ನಡ ಸಿನಿಮಾಗಳು ಪ್ರದರ್ಶನವಾಗಲಿವೆ. ಆಚಾರ ಅಂಡ್ ಕೋ, ಬ್ಯಾಂಗ್, 19.20.21, ಬನಾರಸ್, ಡೇರ್ ಡೆವಿಲ್, ಧರಣಿ ಮಂಡಲ ಮಧ್ಯದೊಳಗೆ, ಗಂಧದ ಗುಡಿ, ಗುರು ಶಿಷ್ಯರು, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ, ಕಾಂತಾರ, ಕೌಸಲ್ಯ ಸುಪ್ರಜಾರಾಮ, ಕ್ರಾಂತಿ, ಲವ್ 360, ಲಕ್ಕಿ ಮ್ಯಾನ್, ಮಾನ್ಸೂನ್ ರಾಗ, ಆರ್ಕೆಸ್ಟ್ರಾ ಮೈಸೂರು, ಪದವಿ ಪೂರ್ವ, ರಾಣ, ರಾಘವೇಂದ್ರ ಸ್ಟೋರ್, ಸಪ್ತ ಸಾಗರ ದಾಚೆ ಎಲ್ಲೊ, ಶಿವಾಜಿ ಸುರತ್ಕಲ್ 2, ಸಿರಿ ಲಂಬೋದರ ವಿವಾಹ, ಟೇಲ್ಸ್ ಆಫ್ ಮಹಾನಗರ, ತಿಮ್ಮಯ್ಯ ಅಂಡ್ ತಿಮ್ಮಯ್ಯ, ತೋತಾಪುರಿ, ಟೋಬಿ, ತ್ರಿಬಲ್ ರೈಡಿಂಗ್, ವೇದ, ವೀರಂ ಸಿನಿಮಾಗಳು ಪ್ರದರ್ಶನಗೊಳ್ಳಲಿವೆ.

ಭಾರತೀಯ ಚಿತ್ರ ವಿಭಾಗದಲ್ಲಿ 38 ಸಿನಿಮಾ ಪ್ರದರ್ಶನವಾಗಲಿದೆ. ಆದಿವಾಸಿ, ಆಲ್ ಇಂಡಿಯಾ ರೇಡಿಯೊ, ಅಂತರ್ಮುಖಿ, ಭಾರತದ ಪ್ರಜೆಗಳಾದ ನಾವು, ಬ್ರಹ್ಮ ಕಮಲ, ಹಕ್ಕಿಗಳ ಕನಸು, ಹಕ್ಕಿನ ನಲೆದ ಹಾಡು, ಹೆಣ್ಣು ಭ್ರೂಣ, ಇನ್, ಕಾಮಧೇನು, ಕನಕ ಮಾರ್ಗ, ಕನ್ನಡಿ, ಕಾಸಿನ ಸರ, ಕೌಡಿಕಳಿ, ಕಿಡಿಗಳು, ಕೋಳಿ ಎಸ್ರು, ಕೊನೆಯ ನಿಲ್ದಾಣ, ಕೊರಮ್ಮ, ಕ್ರಾಂತಿವೀರ, ಕುಬುಸು, ಮನುಷ್ಯರು ಸಾರ್ ಮನುಷ್ಯರು, ಮಠ, ಮಾವು ಬೇವು, ನಾನು ಕುಸುಮ, ಒಡನಾಡಿ, ಪಂಡಿತ್ ರಾಜೀವ್ ತಾರಾನಾಥ್, ಪಥೇರ್ ಪಂಚಾಲಿ, ಫೋಟೋ, ಪೊಮ್ಮಲೆ ಕೊಡಗು, ರಂಗ ಪ್ರವೇಶ, ಋತುಮತಿ, ಸಂಸ್ಕಾರ, ಸಿಫಂಗ್, ಸಿಂಗ್ನಲ್ ಮ್ಯಾನ್, ತನುಜಾ, ದಿ ಗಾರ್ಡ್, ತಂಬುರ ಹಾಗೂ ಯದ್ಭಾವಂತದ್ಭವತಿ ಸಿನಿಮಾಗಳು ತೆರೆ ಮೇಲೆ ಮೂಡಿ ಬರಲಿದೆ.

ವಿಶ್ವ ಚಿತ್ರ ಅಥವಾ ವರ್ಲ್ಡ್ ಫಿಲಂ ವಿಭಾಗದಲ್ಲಿ 18 ಸಿನಿಮಾಗಳು ಪ್ರದರ್ಶನವಾಗಲಿವೆ. ಅಟ್ ವಾರ್, ಬ್ಯಾಟಲ್ ಶಿಪ್ ಪೊಟೆಂಪ್ಕಿನ್, ಬ್ರೆತ್ ಲೆಸ್, ಬ್ರೋಕರ್, ಇಟ್ ಮಸ್ಟ್ ಬಿ ಹೆವನ್, ರೀಡೌಟಬಲ್, ಲೈಲಾಸ್ ಬ್ರದರ್ಸ್, ಲೇ ಮಿಸರಬಲ್, ಲವ್ ಲೈಫ್, ನೋ ಬೇರ್ಸ್, ದಿ ಗಲ್ಫಿ, ದಿ ಆರ್ಫನೇಜ್, ದಟ್ರುತ್, ದ ವೇಲ್, ದಿ ವಿಸ್ಲರ್ಸ್, ಟ್ರಯಾಂಗಲ್ ಆಫ್ ಸ್ಯಾಡ್ನೆಸ್, ವೈಲ್ಡ್ ಸ್ಟ್ರಾಬೆರೀಸ್ ಹಾಗೂ ಎಂಗ್ ಅಹ್ಮದ್ ಸಿನಿಮಾಗಳು ದಸರಾ ಚಲನ ಚಿತ್ರೋತ್ಸವದಲ್ಲಿ ಪ್ರದರ್ಶನವಾಗಲಿವೆ.

ರೆಟ್ರೋಸ್ಪೆಕ್ಟಿವ್ ವಿಭಾಗದಲ್ಲಿ ಹೈ ಅಂಡ್ ಲೊ, ಇಕಿರು, ರಶೋಮನ್, ರೆಡ್ ಬಿಯರ್ಡ್, ಸವೆನ್ ಸಮುರಾಯ್, ಹಾಗೂ ಯೊಜಿಂಬೊ ಸಿನಿಮಾ ತೆರೆ ಮೇಲೆ ಪ್ರದರ್ಶನ ವಾಗುತ್ತದೆ.

ಕಿರು ಚಿತ್ರ ಅಥವಾ ಶಾರ್ಟ್ ಫಿಲಂ ವಿಭಾಗದಲ್ಲಿ 22 ಸಿನಿಮಾಗಳು ಪ್ರದರ್ಶನವಾಗಲಿವೆ. ಇದರಲ್ಲಿ 10 ನಿಮಿಷ, ಅಮ್ಮ, ಅರುಣೋದಯ, ಅಸಲಿ, ದಾರಿದೀಪ, ಎಚ್ಚರಿಕೆ, ಗ್ಲಾಸ್ ಉಚಿತ ಕ್ಯಾಶ್ ಖಚಿತ, ಘಮ ಘಮ, ಉ...!, ಇವತ್ತೆ ಲಾಸ್ಟ್ ನಾಳೆಯಿಂದ ಎಣ್ಣೆ ಹೊಡೆಯಲ್ಲ, ಜಲಜ, ಲಾಕ್, ಮುತ್ತಯ್ಯ ನಿ ಯಾರು?, ಪರಿವರ್ತನೆ, ಪರ್ಸ್ಪೆಕ್ಟಿವ್, ರಕ್ಷಕಿ, ದಿ ಲಾಸ್ಟ್ ಕನ್ನಡಿಗ, ಟುಡೆ, ತ್ರಿಶಂಕು, ಅನ್ನೋನ್ ಹಾಗೂ ಉಯಿಲು ಎಂಬ ಸಿನಿಮಾಗಳು ಪ್ರದರ್ಶನವಾಗಲಿವೆ.

ಒಟ್ಟಾರೆ 7 ದಿನಗಳ ಕಾಲ ಹಲವು ಭಾಷೆಯ ಹಲವು ಸಿನಿಮಾಗಳು ಪ್ರದರ್ಶನಗೊಳ್ಳಲಿದ್ದು, ಸಿನಿ ರಸಿಕರಿಗೆ ರಸದೌತಣವನ್ನು ಉಣಬಡಿಸಲಾಗುತ್ತದೆ.

ಅ.14, ಅಂಬೇಡ್ಕರ್ ಧಮ್ಮ ದೀಕ್ಷಾ ದಿನಾಚರಣೆ



ಮೈಸೂರು: ಮೈಸೂರಿನ ವಿಜಯ ನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧವಿಹಾರ ದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ ಅ.14ರಂದು ಬೆಳಿಗ್ಗೆ 11 ಗಂಟೆಗೆ 'ಬಾಬಾ ಸಾಹೇಬ್ ಅಂಬೇಡ್ಕರ್ ಧಮ್ಮ ದೀಕ್ಷಾ ದಿನಾಚರಣೆ'ಯನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಬೌದ್ಧ ಭಿಕ್ಕುಗಳು ಪ್ರಾರ್ಥನೆ ನೆರವೇರಿಸಲಿದ್ದಾರೆ. ನಂತರ ಭಗವಾನ್ ಬುದ್ಧರಿಗೆ ಹಾಗೂ ಬಾಬಾ ಸಾಹೇಬರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಗುವುದು. ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್.ಭಗವಾನ್, ಕರ್ನಾಟಕ ಬುದ್ಧ ಧರ್ಮ ಸಮಿತಿ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ, ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ, ಸಹ ಕಾರ್ಯದರ್ಶಿ ಎಚ್.ಶಿವರಾಜ್, ಬೆಂಗಳೂರಿನ ಕ್ರಿಸ್ತು ಜಯಂತಿ ಕಾಲೇಜಿನ ಪ್ರಾಧ್ಯಾಪಕ ಡಾ.ಕುಪ್ಪನಹಳ್ಳಿ ಎಂ.ಭೈರಪ್ಪ, ಸಮಿತಿಯ ಪದಾಧಿಕಾರಿಗಳು, ದಲಿತ ಸಂಘಟನೆಗಳ ಮುಖಂಡರು, ಸಂಶೋಧಕರು ಕಾರ್ಯಕ್ರಮದಲ್ಲಿ ಭಾಗ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.




ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ಮುಖ್ಯ ರಸ್ತೆಯಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ಪ್ರಾರ್ಥನಾ ಮಂದಿರದ ಉದ್ಘಾಟನಾ ಸಮಾರಂಭದಲ್ಲಿ ಹಿಂದಿನ ಪ್ರಧಾನ ಅರ್ಚಕರಾದ ಕೃಷ್ಣಭಟ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶಾಸಕರಾದ ತನ್ವೀರ್ ಸೇಠ್, ಡಾ.ಅಜಯ್‌ಸಿಂಗ್, ಮಾಜಿ ಮೇಯರ್ ಆರೀಫ್ ಹುಸೇನ್, ದೇವಸ್ಥಾನದ ಗೌರವಾಧ್ಯಕ್ಷ ಎಂ.ಬಿ. ಮಧುಸೂದನ್‌ಸಿಂಗ್, ಅಧ್ಯಕ್ಷ ಕುಬೇರ್‌ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ಸಿಟಿಜನ್ ಕಾನ್ವೆಂಟ್ ವಿದ್ಯಾರ್ಥಿ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಶಿಪ್‌ಗೆ ಆಯ್ಕೆ



ಮೈಸೂರು: ಇತ್ತೀಚೆಗೆ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನಲ್ಲಿ ನಡೆದ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಶಿಪ್‌ನಲ್ಲಿ ಮೈಸೂರಿನ ಉದಯಗಿರಿಯ ಸಿಟಿಜನ್ ಕಾನ್ವೆಂಟ್‌ನ 9ನೇ ತರಗತಿಯ ವಿದ್ಯಾರ್ಥಿ ಮಹಮ್ಮದ್ ಮವೀಯ ಖುರೇಷಿ 92 ಕೆಜಿ ವಿಭಾಗದಲ್ಲಿ (ಗ್ರೀಕೋ–ರೋಮನ್) ಚಿನ್ನದ ಪದಕ ಮತ್ತು 10ನೇ ತರಗತಿ ವಿದ್ಯಾರ್ಥಿ ಅಬ್ದುಲ್ ರಹಮಾನ್ ಷರೀಫ್ 110 ಕೆಜಿ ವಿಭಾಗದಲ್ಲಿ (ಗ್ರೀಕೊ–ರೋಮನ್) ಬೆಳ್ಳಿ ಪದಕ ಗೆದ್ದಿದ್ದಾರೆ. ಅಕ್ಟೋಬರ್ ಎರಡನೇ ವಾರದಲ್ಲಿ ಮಧ್ಯ ಪ್ರದೇಶದಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಶಿಪ್ 2023–24ಕ್ಕೆ ಮೊಹಮ್ಮದ್ ಮವೀಯಾ ಖುರೇಷಿ ಆಯ್ಕೆಯಾಗಿದ್ದಾರೆ. ಬಾಗಲಕೋಟೆ ಜಿಲ್ಲೆಯ ತಹಸೀಲ್ದಾರ್ ವಿನೋದ ಲಕ್ಷ್ಮಣ ಹತ್ತಳ್ಳಿ, ಮಹಮ್ಮದ್ ಮಾವೀಯ ಖುರೇಶಿ, ದೈಹಿಕ ಶಿಕ್ಷಕ ನಾಗೇಂದ್ರ ಪ್ರಸಾದ್, ಸಂಯೋಜಕ ಅಬ್ದುಲ್ ಮುಹೀಬ್ ಅಕಾಡೆಮಿಕ್, ಅಬ್ದುಲ್ ರಹಮಾನ್ ಷರೀಫ್, ಫಜಲ್ ಅನ್ಸಾರಿ, ಕುಸ್ತಿ ತರಬೇತುದಾರ ರಾಜೇಂದ್ರಪ್ರಸಾದ್ ಅಸಂಗ್ ಇನ್ನಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಜಾತಿ ಗಣತಿ ವರದಿ ಬಿಡುಗಡೆಗೆ ಆಗ್ರಹ



ಮೈಸೂರು,ಅ.9–ಜಾತಿ ಗಣತಿ ವರದಿ ಬಿಡುಗಡೆ ಮಾಡುವಂತೆ ಅಹಿಂದ ವರ್ಗಗಳ ವೇದಿಕೆ ರಾಜ್ಯಾಧ್ಯಕ್ಷ ಎನ್.ಬಸವ ರಾಜು ಒತ್ತಾಯಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮ ದವರೊಂದಿಗೆ ಮಾತನಾಡುತ್ತ, ಜಾತಿ ಗಣತಿಗೆ ಸಂಬಂಧಿಸಿದಂತೆ ದೇಶದಲ್ಲಿ ಚರ್ಚೆಗಳು ಪ್ರಾರಂಭವಾಗಿವೆ. ವರದಿ ಬಿಡುಗಡೆ ಮಾಡುವುದರಿಂದ ತುಳಿತಕ್ಕೊಳಪಟ್ಟವರಿಗೆ, ಸಾಮಾಜಿಕ ಅಸಮಾನತೆಯಿಂದ ನೊಂದವರಿಗೆ ಸಮಾನ ಅವಕಾಶಗಳು ಸಿಗುವ ಸಾಧ್ಯತೆ ಇದೆ. ಸರ್ಕಾರಕ್ಕೂ ಒಂದು ಅಧಿಕೃತ ಸ್ಪಷ್ಟತೆ ದೊರೆಯುತ್ತದೆ ಎಂದರು.

ಇಂದಿಗೂ ಸಮಾಜದಲ್ಲಿ ಸಾಮಾಜಿಕ ಅಸಮಾನತೆಯನ್ನು ನಾವು ಕಾಣಬಹುದಾಗಿದ್ದು, ವರದಿ ಬಿಡುಗಡೆ ಮಾಡುವುದರಿಂದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಯಾವ ಜಾತಿಯ ಜನರ ಪರಿಸ್ಥಿತಿ ಹೇಗಿದೆ. ಅವರ ಬದುಕಿನ ಸ್ಥಿತಿಗತಿ ಏನು? ಸಮಾನ ಮತ್ತು ಘನತೆಯ ಬದುಕಿಗಾಗಿ ಸರ್ಕಾರ ಅವರಿಗೆ ಯಾವ ರೀತಿಯಲ್ಲಿ ನೆರವಾಗಬಹುದು? ಜನರ ಹಕ್ಕುಗಳು ಮತ್ತು ಅವಕಾಶಗಳು ಅವರಿಗೆ ಸರಿಯಾದ ರೀತಿಯಲ್ಲಿ ಹಂಚಿಕೆ ಆಗಿದೆಯಾ ಎಂಬುದನ್ನು ತಿಳಿದುಕೊಳ್ಳಬಹುದು. ಇದರಿಂದ ಸರ್ಕಾರ ಕೂಡಲೇ ವರದಿ ಬಿಡುಗಡೆ ಮಾಡಬೇಕೆಂದು ಅವರು ಒತ್ತಾಯಿಸಿದರು.

ನಿಧನ



ನಾಸಿರ್ ಅಹಮದ್ ಖಾನ್

ಮೈಸೂರು,ಅ.9–ಮೈಸೂರಿನ ಉದಯಗಿರಿಯ ಸೈಯದ್ ಅಬ್ದುಲ್ ರೆಹಮಾನ್ ರಸ್ತೆ ನಿವಾಸಿ ನಾಸಿರ್ ಅಹಮದ್ ಖಾನ್ (53) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ, 7 ಮಂದಿ ಸಹೋದರರು, ಓರ್ವ ಸಹೋದರಿ, ಅಪಾರ ಬಂಧು ವರ್ಗ ಅಗಲಿ ದ್ದಾರೆ. ಅಂತ್ಯಕ್ರಿಯೆ ಮೈಸೂರಿನ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.2ರಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗರಾಜಪ್ಪ



ತಿ.ನರಸೀಪುರ: ತಾಲೂಕಿನ ಉಕ್ಕಲಗೆರೆಯ ಪತ್ರ ಬರಹಗಾರರಾದ ರವಿಶಂಕರ್ ಮತ್ತು ಗೌರಿಶಂಕರ್ ಅವರ ತಂದೆ ನಾಗರಾಜಪ್ಪ(75) ಅವರು ಸೋಮವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಸ್ವಗ್ರಾಮ ಉಕ್ಕಲಗೆರೆಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಶ್ರಮ ಶಾಲೆಗಳಿಗೆ ಕ್ಷೀರಭಾಗ್ಯ ವಿಸ್ತರಿಸಿ

ಮೈಮುಲ್‌ನಿಂದ ಮುಖ್ಯಮಂತ್ರಿಗೆ ಮನವಿ



ಮೈಸೂರು, ಅ.9– ಆಶ್ರಮ ಶಾಲೆಯ ಮಕ್ಕಳಿಗೂ ಕ್ಷೀರಭಾಗ್ಯ ಯೋಜನೆಯನ್ನು ವಿಸ್ತರಿಸುವುದರ ಜೊತೆಗೆ ಸರ್ಕಾರಿ ಸಮಾರಂಭಗಳಿಗೆ ನಂದಿನಿ ಉತ್ಪನ್ನಗಳನ್ನು ಖರೀದಿಸುವಂತೆ ಆದೇಶಿಸಬೇಕೆಂದು ಮೈಮುಲ್ ಅಧ್ಯಕ್ಷ ಪ್ರಸನ್ನಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.

ಮೈಸೂರಿನ ಮುಖ್ಯಮಂತ್ರಿಗಳ ನಿವಾಸದಲ್ಲಿ ಮೈಮುಲ್ ನಿರ್ದೇಶಕ ಬಿ.ಗುರುಸ್ವಾಮಿ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮೈಮುಲ್‌ಗೆ ಬರುವ ಆದಾಯ ಕಡಿಮೆಯಾಗಿದ್ದು, ರೈತರಿಗೆ ಕೊಡುವ ಹಣದಲ್ಲಿ 1 ರೂಪಾಯಿಯನ್ನು ಕಡಿಮೆ ಮಾಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ನಿಮ್ಮಲ್ಲಿ ಹೊರಗುತ್ತಿಗೆ ಕೆಲಸದವರನ್ನು ಹೆಚ್ಚಾಗಿ ತೆಗೆದುಕೊಂಡಿರುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ರೈತರಿಗೆ ಕೊಡುವ ಹಣವನ್ನು ನಿಲ್ಲಿಸಲು ಆಗುವುದಿಲ್ಲ ಇದಕ್ಕೆ ಸಂಬಂಧಿಸಿದಂತೆ ಕೆ.ಎಂ.ಎಫ್.ನವರೊಂದಿಗೆ ಮಾತನಾಡುತ್ತೇನೆ. ರಾಜ್ಯದ ಎಲ್ಲಾ ಆಶ್ರಮಶಾಲೆ ಮಕ್ಕಳಿಗೆ ಹಾಲು ಕೊಡಲು ಕ್ರಮಕೈಗೊಳ್ಳಬೇಕೆಂದು ಸೂಚಿಸಿದರು. ಮೈಮುಲ್ ಹಾಗೂ ಬೇರೆ ಬೇರೆ ಡೈರಿಗಳಿಗೆ ಸಂಬಂಧಿಸಿದಂತೆ ಹಾಲಿನ ದರಗಳ ಬಗ್ಗೆ ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯಕುಮಾರ್ ಅವರಿಂದ ಮಾಹಿತಿ ಪಡೆದರು.

ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಡಿ.ರವಿಶಂಕರ್, ಕೆ.ಹರೀಶ್‌ಗೌಡ, ನಿರ್ದೇಶಕರಾದ ಬಿ.ಗುರುಸ್ವಾಮಿ, ಕೆ.ಜಿ.ಮಹೇಶ್, ಎ.ಟಿ. ಸೋಮಶೇಖರ್, ಉಮಾಶಂಕರ್, ಕುಮಾರ್, ಈರೇಗೌಡ, ದಾಕ್ಷಾಯಿಣಿ, ಲೀಲಾ ನಾಗರಾಜು, ಚೆಲುವರಾಜು, ಓಂ ಪ್ರಕಾಶ್, ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿಗಳಾದ ಎಂ.ರಾಮಯ್ಯ, ಬಿ.ಶಿವಸ್ವಾಮಿ, ಕೆ.ಎನ್. ವಿಜಯ್ ಹಾಜರಿದ್ದರು.

ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಬಿಪಿಎಲ್ ಕಾರ್ಡ್ ಉಳ್ಳವರಿಗೆ ಉಚಿತ ಕಿಡ್ನಿ ಕಸಿ

ಮೈಸೂರು, ಅ.9(ಬಿಎಲ್‌ಯು)– ಆರೋಗ್ಯ ಕರ್ನಾಟಕ ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವ ರೋಗಿಗಳಿಗೆ ಉಚಿತವಾಗಿ ಕಿಡ್ನಿ ಕಸಿ ಮಾಡಲಾಗುತ್ತಿದೆ ಎಂದು ಮೈಸೂರಿನ ಸಿಗ್ಮಾ ಆಸ್ಪತ್ರೆಯ ಕಿಡ್ನಿ ಕಸಿ ಚಿಕಿತ್ಸಾ ತಂಡದ ಮುಖ್ಯಸ್ಥ ಡಾ.ಕೆ.ಎಂ.ಮಾದಪ್ಪ ತಿಳಿಸಿದರು.



ಮೈಸೂರಿನ ಸರಸ್ವತಿಪುರಂನ ಸಿಗ್ಮಾ ಆಸ್ಪತ್ರೆಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವ 15 ರೋಗಿಗಳಿಗೆ ಈಗಾಗಲೇ ಕಿಡ್ನಿ ಕಸಿ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದರು.

ಆರೋಗ್ಯ ಕರ್ನಾಟಕ ಆಯುಷ್ಮಾನ್ ಭಾರತ್ ಯೋಜನೆಯಡಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆ ಸೇರಿದಂತೆ ಎಲ್ಲಾ ಔಷಧಿಗಳನ್ನು ಸಂಪೂರ್ಣವಾಗಿ ಉಚಿತವಾಗಿ ನೀಡಲಾಗುವುದು. ಮೈಸೂರು ಸೇರಿದಂತೆ ಕರ್ನಾಟಕದ ಯಾವುದೇ ಸ್ಥಳದ ಜನರು ಇದರ ಪ್ರಯೋಜನ ಪಡೆಯಬಹುದು ಎಂದು ಡಾ.ಮಾದಪ್ಪ ತಿಳಿಸಿದರು.

ಯಾವುದೇ ಉಚಿತ ಯೋಜನೆ ಇಲ್ಲದೆ ಹಣ ಕೊಟ್ಟು ಕಿಡ್ನಿ ಕಸಿ ಮಾಡಿಸಿಕೊಳ್ಳಲು 4.50 ಲಕ್ಷ ವೆಚ್ಚವಾಗುತ್ತದೆ. ಆದರೆ ಈ ಯೋಜನೆಯಲ್ಲಿ ಕಿಡ್ನಿ ಕಸಿ ಮಾಡಿದರೆ ಸರ್ಕಾರ ಅದರ ವೆಚ್ಚ ಭರಿಸುತ್ತದೆ. ಆರೋಗ್ಯ ಇಲಾಖೆ ನಿಗದಿ ಮಾಡಿರುವ ಹಣವನ್ನು ರೋಗಿ ಪರವಾಗಿ ಸರ್ಕಾರ ಆಸ್ಪತ್ರೆಗೆ ನೀಡಲಿದೆ ಎಂದರು.

ಆದರೆ ಈ ಯೋಜನೆಯಲ್ಲಿ ಕೂಡ ಕಿಡ್ನಿ ದಾನ ಮಾಡುವವರನ್ನು ರೋಗಿಯೇ ಕರೆತರಬೇಕು ಎಂದು ಡಾ.ಮಾದಪ್ಪ ಸ್ಪಷ್ಟಪಡಿಸಿದರು. ಮೈಸೂರಿನಲ್ಲಿ ಸಾವಿರಾರು ಜನರು ಕಿಡ್ನಿ ವೈಫಲ್ಯತೆಯಿಂದ ಬಳಲುತ್ತಿದ್ದಾರೆ. ಈಗ ಬಿಪಿಎಲ್ ಕಾರ್ಡ್ ಹೊಂದಿರುವವರು ಆರೋಗ್ಯ ಕರ್ನಾಟಕ ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಉಚಿತ ಶಸ್ತ್ರಚಿಕಿತ್ಸೆ ಮೂಲಕ ಕಿಡ್ನಿ ಕಸಿ ಮಾಡಿಕೊಳ್ಳಬಹುದು ಎಂದರು.

ಆಸ್ಪತ್ರೆ ವೈದ್ಯರಾದ ಡಾ.ಅನಿಕೇತ್ ಪ್ರಭಾಕರ್, ಡಾ.ಸೋಮಣ್ಣ, ಡಾ.ರಾಜೇಶ್ವರಿ ಮಾದಪ್ಪ ಹಾಗೂ ಜ್ಞಾನಶಂಕರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅ.15ರಂದು ವಧು–ವರರ ಮುಖಾಮುಖಿ ಸಮಾವೇಶ

ಮೈಸೂರು, ಅ. 9– ಮೈಸೂರು ಜೆಎಸ್‌ಎಸ್ ವಿವಾಹ ವೇದಿಕೆ ಆಶ್ರಯದಲ್ಲಿ ಅ.15ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ವಧು–ವರರ ಮುಖಾಮುಖಿ ಸಮಾವೇಶವನ್ನು ಏರ್ಪಡಿಸಲಾಗಿದೆ. ಜೆಎಸ್‌ಎಸ್ ವಿವಾಹ ವೇದಿಕೆಯಲ್ಲಿ ನೋಂದಾಯಿಸಿಕೊಂಡವರಿಗೆ ಮಾತ್ರ ಪ್ರವೇಶವಿರುತ್ತದೆ. ಸಮಾವೇಶ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯಲಿದೆ. ಆಸಕ್ತರು ಸಮಾವೇಶದಲ್ಲಿ ಭಾಗವಹಿಸಿ ಈ ಅವಕಾಶ ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.0821–2430322, ಮೊ. 96110706674 ಸಂಪರ್ಕಿಸಬಹುದು.

ಶುಂಠಿಯಲ್ಲಿ ವಿನೂತನ ತಂತ್ರಜ್ಞಾನ ಬಳಕೆ ಸಂಬಂಧ ರೈತರಿಗೆ ಮಾಹಿತಿ

ಮೈಸೂರು, ಅ. 9– ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಅಡಿಯಲ್ಲಿ ಬರುವ ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ, ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆ, ಮೈಸೂರು ಅಧ್ಯಾಯ ಸಂಯುಕ್ತಾಶ್ರಯದಲ್ಲಿ ಮಹಾ ವಿದ್ಯಾಲಯದ ಆವರಣದಲ್ಲಿ ಶುಂಠಿ ಕೃಷಿಯ ನೂತನ ಮತ್ತು ಸುಧಾರಿತ ತಂತ್ರಜ್ಞಾನಗಳು ಕುರಿತು ಆಯೋಜಿಸಿದ್ದ ರೈತರ ತರಬೇತಿ, ಸಂವಾದ ಹಾಗೂ ವಸ್ತುಪ್ರದರ್ಶನ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳ 140ಕ್ಕೂ ಹೆಚ್ಚು ರೈತರು ಮಾಹಿತಿ ಪಡೆದುಕೊಂಡರು.

ಮೈಸೂರು ತೋಟಗಾರಿಕೆ ಮಹಾವಿದ್ಯಾಲಯ ವಿಸ್ತರಣಾ ಶಿಕ್ಷಣ ಘಟಕದ ವಿಸ್ತರಣಾ ಮುಂದಾಳು ಡಾ.ತನ್ವೀರ್ ಅಹ್ಮದ್ ಪ್ರಾಸ್ತಾವಿಕವಾಗಿ ಮಾತನಾಡಿ, ಬೆಳೆ ಬೆಳೆಯುವ ಮೊದಲಿನ ಮಾರುಕಟ್ಟೆ ಬೆಲೆಗಿಂತ ಫಸಲು ಕಟಾವಿಗೆ ಬರುವ ಸಮಯದಲ್ಲಿ ಇರುವ ಮಾರುಕಟ್ಟೆ ಬೆಲೆಯನ್ನು ಪರಿಗಣಿಸಿ ಯಾವ ಬೆಳೆ ಬೆಳೆಯಬೇಕು ಎಂದು ನಿರ್ಧಾರ ಕೈಗೊಳ್ಳುವುದು ಇಂದಿನ ದಿನಗಳಲ್ಲಿ ಸೂಕ್ತ ಎಂದರು.




ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರಿನ ಕೃಷಿ ತಂತ್ರಜ್ಞರ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯ ಡಾ.ವಸಂತಕುಮಾರ ತಿಮ್ಮಾಪುರ ಮಾತನಾಡಿ, ಕೃಷಿ ಸಂಬಂಧಿತ ಮಾಹಿತಿಯನ್ನು ಉಚಿತವಾಗಿ ರೈತರಿಗೆ ತಲುಪಿಸಲು ಈ ತರಬೇತಿಯನ್ನು ಹಮ್ಮಿಕೊಂಡಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸುತ್ತಾ ಮಹಾವಿದ್ಯಾಲಯದ ವಿಸ್ತರಣಾ ಕಾರ್ಯಕ್ರಮಗಳನ್ನು ಪ್ರಶಂಸಿಸಿ ಅಭಿನಂದಿಸಿದರು. ಶುಂಠಿ ಬೆಳೆ ಕುರಿತು ತಮ್ಮ ಜ್ಞಾನ ಹಾಗೂ ಅನುಭವವನ್ನು ರೈತರೊಂದಿಗೆ ಹಂಚಿಕೊಂಡರು.

ಶುಂಠಿ ಬೆಳೆಯಲು ಸಾಕಷ್ಟು ಅಂಶಗಳನ್ನು ಪರಿಗಣಿಸಬೇಕು ಹಾಗೂ ಸರಿಯಾದ ಬೇಸಾಯ ಕ್ರಮಗಳನ್ನು ನಿರ್ವಹಿಸಿದಲ್ಲಿ ಮಾತ್ರ ಉತ್ತಮ ಇಳುವರಿ ಪಡೆಯಬಹುದು. ರೈತರು ತಮಗೆ ಅವಶ್ಯಕತೆ ಇರುವ ವಿಷಯ ಹಾಗೂ ಸಮಸ್ಯೆಗಳಿಗೆ ಪರಿಹಾರವನ್ನು ಮಹಾವಿದ್ಯಾಲಯದ ವಿಜ್ಞಾನಿಗಳನ್ನು ಸಂಪರ್ಕಿಸಿ ಪಡೆಯಬಹುದು ಎಂದು ಡಾ. ವಿಷ್ಣುವರ್ಧನ್, ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ವ್ಯಕ್ತಪಡಿಸಿದರು.

ತಾಂತ್ರಿಕ ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಡಾ.ಹರೀಶ್, ಬಿ.ಎಸ್., ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರು ಇವರು ಶುಂಠಿಯಲ್ಲಿನ ವಿನೂತನ ತಂತ್ರಜ್ಞಾನ, ತಳಿಗಳ ಆಯ್ಕೆ, ಸುಧಾರಿತ ಬೇಸಾಯ ಪದ್ಧತಿಗಳು, ಮಣ್ಣು, ನೀರು ಹಾಗೂ ಗೊಬ್ಬರ ಪರೀಕ್ಷೆಯ ಮಹತ್ವ ಕುರಿತು ರೈತರಿಗೆ ಮಾಹಿತಿ ನೀಡಿದರು. ಮುಂದುವರೆದು, ಶುಂಠಿ ಕೃಷಿಯಲ್ಲಿ ಸಮಗ್ರ ರೋಗ ನಿರ್ವಹಣೆ, ಸಮಗ್ರ ಕೀಟ ನಿರ್ವಹಣೆ ಹಾಗೂ ಜೈವಿಕ ಗೊಬ್ಬರಗಳ ಬಳಕೆ ಕುರಿತು ಡಾ.ಸುದರ್ಶನ್, ಜಿ.ಕೆ., ಡಾ.ಮುತ್ತುರಾಜು, ಜಿ.ಪಿ. ಹಾಗೂ ಡಾ. ಮಂಜುನಾಥ್ ಜಿ. ಕ್ರಮವಾಗಿ ಮಾಹಿತಿ ನೀಡಿದರು.

ನಂತರ ರೈತರು ವಿಜ್ಞಾನಿಗಳೊಂದಿಗೆ ಚರ್ಚೆ ಹಾಗೂ ವಿಷಯ ವಿನಿಮಯ ನಡೆಯಿತು. ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಶುಂಠಿ ಬೆಳೆಯ ನೂತನ ತಂತ್ರಜ್ಞಾನಗಳ ವಸ್ತುಪ್ರದರ್ಶನವನ್ನು ರೈತರು ವೀಕ್ಷಿಸಿ ವಿಷಯವನ್ನು ಪ್ರಾಯೋಗಿಕವಾಗಿ ಅರ್ಥೈಸಿಕೊಳ್ಳಲು ಡಾ.ಮಮತಾಲಕ್ಷ್ಮಿ ಎನ್ ಹಾಗೂ ಡಾ. ಸಿದ್ದಪ್ಪ ಸಹಕರಿಸಿ ಹೆಚ್ಚಿನ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ರವೀಂದ್ರ, ಕಾರ್ಯಕಾರಿ ಸಮಿತಿ ಸದಸ್ಯರು, ಕೃಷಿ ತಂತ್ರಜ್ಞರ ಸಂಸ್ಥೆ, ಮೈಸೂರು, ಸದಾಶಿವಮೂರ್ತಿ, ಪ್ರಗತಿಪರ ಶುಂಠಿ ರೈತರು, ಗುಂಡ್ಲುಪೇಟೆ, ವಿಸ್ತರಣಾ ಶಿಕ್ಷಣ ಘಟಕದ ವಿಷಯ ತಜ್ಞರು, ಮಹಾವಿದ್ಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.10.2023 ಮಂಗಳವಾರ, ಮಳೆ ನಕ್ಷತ್ರ: ಹಸ್ತ, 28.09.2023ರಿಂದ 10.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯಿಡ್ ವೈದ್ಯಕೀಯ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.
- **ರಂಗಾಯಣ, ಮೈಸೂರು:** ಬಿ.ವಿ.ಕಾರಂತ ಕಾಲೇಜು ರಂಗೋತ್ಸವ–2023, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ತುಘಲಕ್ ನಾಟಕ ಪ್ರದರ್ಶನ, ರಚನೆ : ಗಿರೀಶ್ ಕಾರ್ನಾಡ್, ನಿರ್ದೇಶನ : ಎಸ್. ಕಾರ್ತಿಕ್, ಸ್ಥಳ: ಭೂಮಿಗೀತೆ, ಸಂಜೆ 5.30ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯಶಿಲ್ಪ–ಲೇಖನ ಮತ್ತು ಪ್ರಸ್ತುತಿ–ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಕೆ.ಎಲ್.ಪ್ರಸನ್ನಾಕ್ಷಿ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಭೀಮ ಪ್ರತಿಜ್ಞೆ–ಡಾ.ಬಿ.ಆರ್. ಅಂಬೇಡ್ಕರ್ ಕುರಿತ ರೂಪಕ, 10.00 ಎ.ವಿ.ಸಹನಾ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಸುಧಾ ಮಧುಸೂದನ್, 1.20 ಭಾವಗೀತೆಗಳು–ಶರಧಿ ಪಾಟೀಲ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಟಿ.ವಿ.ರಾಮ್‌ಪ್ರಸಾದ್–ಹಾಡುಗಾರಿಕೆ, 4.00 ಕಥಾಕಾಲಕ್ಷೇಪ 'ಪಂಡರಿ ಮಹಾತ್ಮೆ'–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕೆ.ಆರ್.ನಗರ ತಾಲೂಕು ಕಾಳೇನ ಹಳ್ಳಿಯಲ್ಲಿ ನಡೆದ ಬಾನುಲಿ, ಕೃಷಿ ಬೆಳಗು ಕಾರ್ಯಕ್ರಮದ ಬಾನುಲಿ ವರದಿ, ಪ್ರಸ್ತುತಿ–ಎನ್. ಕೇಶವಮೂರ್ತಿ, 9.30 ರೂಪ ಮತ್ತು ದೀಪ–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, ವಾಚನ–ಆರ್.ಎಸ್.ಅನ್ನಪೂರ್ಣ, ವ್ಯಾಖ್ಯಾನ–ಎ.ಎಸ್. ನಾಗರಾಜ್, 10.30 ಸವಿನೆನಪು

- **ಚಿನ್ಮಯ ಮಿಷನ್:** ಗೀತಾ ಜ್ಞಾನ ಯಜ್ಞ, ಧರ್ಮಸಂಸ್ಥಾನ ಯೋಗ (ಭಗವದ್ಗೀತೆಯ 5ನೇ ಅಧ್ಯಾಯ), ಸ್ವಾಮಿ ದತ್ತಪಾದಾನಂದ ಅವರಿಂದ ಸ್ಥಳ: ಚಿನ್ಮಯ ಮಿಷನ್, ರಾಯಕ್ಷೇತ್ರ, ವಿದ್ಯಾರಣ್ಯಪುರಂ, ಸಂಜೆ 6.30ರಿಂದ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಶ್ರೀ ಕಪಿಲಾಚಾರ್ಯ ಹಲಗಲಿ ಅವರಿಂದ ಭಗವದ್ಗೀತೆ 12ನೇ ಅಧ್ಯಯನ್ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.
- **ಶ್ರೀ ಉತ್ತರಾದಿ ಮಠರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಶ್ರೀ ಭಗವದ್ಗೀತಾ ಅಭಿಯಾನ, ಪಂ. ಶ್ರೀ ಕಪಿಲಾಚಾರ್ಯ ಗಲಗಲಿ ಅವರಿಂದ ಪ್ರವಚನ, ಸ್ಥಳ: ರೋಗಮೋಚನೆ ಶ್ರೀ ಧನ್ವಂತರಿ ಸನ್ನಿದಾನ, ಶ್ರೀ ಉತ್ತರಾಧಿ ಮಠ, ಅಗ್ರಹಾರ, ಸಂಜೆ 6.30ರಿಂದ.

ಮಳೆಯ ನಡುವೆಯೂ ಯುವ ಸಂಭ್ರಮದಲ್ಲಿ ಇಮ್ಮಡಿಸಿದ ಯುವ ಉತ್ಸಾಹ

ನಾಲ್ವಡಿಗೆ ನಮನ, ಅಂಬಾರಿ ವೈಭೋಗ ಮೇಳೈಸಿದ ನೃತ್ಯ, ಗಾಯನ



ಜನಪದ ಮಲ್ಲಗಂಬ ಸಾಹಸ ಪ್ರದರ್ಶನ...

ಮದ್ದೂರಿನ ಜಿ.ಮಾದೇಗೌಡ ಇನ್ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ಕಾಲೇಜು ವಿದ್ಯಾರ್ಥಿಗಳ ಜನಪದ ಮಲ್ಲಗಂಬ ಸಾಹಸ ಪ್ರದರ್ಶನ ನೋಡುಗರನ್ನು ನಿಬ್ಬೆರಗಾಗಿಸಿತು. 'ಜೈ ಭಜರಂಗಿ' ಹಿನ್ನೆಲೆ ಹಾಡಿಗೆ ಅನುಗುಣವಾಗಿ ವಿವಿಧ ಬಗೆಯ ಭಂಗಿಗಳಲ್ಲಿ ಜನಪದ ಮಲ್ಲಗಂಬ ಸಾಹಸ ಪ್ರದರ್ಶನ ನೀಡಿದ ವಿದ್ಯಾರ್ಥಿಗಳು ಎಲ್ಲರ ಗಮನ ಸೆಳೆದರು.

ಮೈಸೂರು, ಅ.9(ಎಂಕೆ)- ಅಬ್ಬರದ ಮಳೆ ನಡುವೆಯೇ ಅಲೆ ಅಲೆಯಾಗಿ ಹರಿದ ಮೈಸೂರು ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ ಅಭಿಮಾನದ ಹೊಳೆ... ಅನ್ನದಾತರ ಸ್ಮರಣೆಯೊಂದಿಗೆ ಮಲ್ಲಗಂಬ ಸಾಹಸ ಕೊಡೆಯನ್ನು ಸರಿಸಿ ದಿಟ್ಟಿಸಿ ನೋಡುವಂತಿತ್ತು...!

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ನಡೆಯುತ್ತಿರುವ ದಸರಾ ಯುವ ಸಂಭ್ರಮ ಸಾಂಸ್ಕೃತಿಕ ವೇದಿಕೆಯಲ್ಲಿ ವಿವಿಧ ಕಾಲೇಜು ಕಲಾತಂಡದ ವಿದ್ಯಾರ್ಥಿಗಳು ಜಡಿ ಮಳೆಯ ನಡುವೆಯೂ ಭರಪೂರ ಮನರಂಜನೆ ನೀಡಿದರಲ್ಲದೆ ಛತ್ರಿ, ಚೇರ್‌ಗಳನ್ನು ತಲೆ ಮೇಲೆ ಹಿಡಿದು ಗುಂಪು ಗುಂಪಾಗಿ ನಿಂತಿದ್ದ ಯುವ ಸಮೂಹ ಕುಣಿದು ಕುಪ್ಪಳಿಸುವಂತೆ ಮಾಡಿದರು.

ನಂಜನಗೂಡು ಹೆಮ್ಮರಗಾಲ ಸರ್ಕಾರಿ ಪದವಿ ಪೂರ್ವ ಕಾಲೇಜು, ಪಾಂಡವಪುರ ನಿರ್ಮಲ ಸಂಯುಕ್ತ ಪದವಿ ಪೂರ್ವ ಕಾಲೇಜು ಸೇರಿದಂತೆ ವಿವಿಧ ಕಾಲೇಜು ವಿದ್ಯಾರ್ಥಿಗಳು 'ಮರೆಯೋದುಂಟೆ ಮೈಸೂರು ದೊರೆಯ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯ' ಹಾಡು ಸೇರಿದಂತೆ ವಿವಿಧ ಸುಮಧುರ ಸಂಗೀತ ಸಂಯೋಜನೆ ಹಾಗೂ ನೃತ್ಯಾಭಿನಯದ ಮೂಲಕ ಅಭಿಮಾನದ ಹೊಳೆ ಹರಿಸಿದರು.

ಹಾಗೆಯೇ ಕುವೆಂಪುನಗರದ ರತ್ನ ಕಾಲೇಜು ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳೂ 'ದಸರಾ ಬಂತು ಸಡಗರ ತಂತು, ಅಲೆಲೇ ಸವಾರಿ ಆನೆ ಮೇಲೆ ಅಂಬಾರಿ' ಎಂಬ ಹಾಡಿನೊಂದಿಗೆ ಅಂಬಾರಿ ಆನೆ ಬಲರಾಮನನ್ನು ಸ್ಮರಣೆ ಮಾಡಿದರು.


ಅದೇ ರೀತಿ ಶಿವಮೊಗ್ಗ ಜಿಲ್ಲೆಯ ತರೀಕೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಕದಂಬ ರಾಜವಂಶದ ಮಯೂರ ವರ್ಮನ ಶೌರ್ಯ-ಸಾಹಸವನ್ನು ಪ್ರೇಕ್ಷಕರಿಗೆ ಪರಿಚಯಿಸಿದರು.

ಮಳೆಗೆ ಆಹ್ವಾನ: ರಾಮನಗರ ಮಾಗಡಿ ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕೊಳ್ಳೇಗಾಲದ ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಅನ್ನದಾತ ರೈತರ ಸ್ಮರಣೆ ಜೊತೆಗೆ 'ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ' ಎಂಬಿತ್ಯಾದಿ ಹಾಡುಗಳ ಮೂಲಕ ಸುರಿಯುತ್ತಿದ್ದ ಮಳೆಗೆ ಆಹ್ವಾನ ನೀಡಿದರು. ಬಳಿಕ ಮೈಸೂರಿನ ಧರ್ಮಸ್ಥಳ ಮಂಜುನಾಥ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ತುಳನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಹುಲಿ ನೃತ್ಯ, ಯಕ್ಷಗಾನದ ಮೂಲಕ ತಿಳಿಸಿದರು.

ದೈವ ಕನ್ನಡ: ಕೆ.ಆರ್.ಪೇಟೆಯ ಎಸ್.ಎಂ.ಲಿಂಗಪ್ಪ ಕಾಲೇಜ್ ಆಫ್ ಎಜುಕೇಷನ್‌ನ ವಿದ್ಯಾರ್ಥಿಗಳು ಪಲ್ಲಕ್ಕಿ ಚಿತ್ರದ 'ನಮ್ ಜೀವ ಕಣೋ ಕನ್ನಡ, ನಮ್ ದೈವ ಕಣೋ ಕನ್ನಡ' ಹಾಡು ಮತ್ತು ನೃತ್ಯದ ಮೂಲಕ ಕನ್ನಡ ಕಂಪು ಹೆಚ್ಚಿಸಿದರಲ್ಲದೆ 'ಉದೋ ಉದೋ ಎಲ್ಲಮ್ಮ' ಹಾಡಿಗೆ ಅಮೋಘ ನೃತ್ಯ ಪ್ರದರ್ಶನ ನೀಡುವ ಮೂಲಕ ನೆರೆದಿದ್ದವರು ಕುಣಿದು ಕಲುಪ್ಪಳಿಸುವಂತೆ ಮಾಡಿದರು. ಹಾಗೆಯೇ ಮಂಡ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಶಕ್ತಿ ದೇವತೆಗಳ ಆರಾಧನೆ ಮಾಡಿದರೆ, ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಮಹಾ ಭಾರತದಲ್ಲಿ ದ್ರೌಪದಿ ವಸ್ತ್ರ ಅಪಹರಣ ಸನ್ನಿವೇಶದ ದೃಶ್ಯಾವಳಿಯನ್ನು ಅಚ್ಚುಕಟ್ಟಾಗಿ ಅಭಿನಯಿಸಿ ಶಿಳ್ಳೆ-ಚಪ್ಪಾಳೆ ಗಿಟ್ಟಿಸಿದರು.




ನಂಜನಗೂಡು ಹೆಮ್ಮರಗಾಲ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ನಾಲ್ವಡಿ ಸ್ಮರಣೆ



ಅಂಬಾರಿ ಆನೆ ಬಲರಾಮನ ಸ್ಮರಣೆ ನೃತ್ಯ ಪ್ರದರ್ಶನ ನೀಡಿದ ಮೈಸೂರು ಕುವೆಂಪುನಗರದ ರತ್ನ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳು



ಶ್ರೀ ಧರ್ಮಸ್ಥಳ ಮಂಜುನಾಥ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಿಂದ ತುಳುನಾಡ ಸಾಂಸ್ಕೃತಿಕ ನೃತ್ಯ ಪ್ರದರ್ಶನ



ಹೊಳೆನರಸೀಪುರ ಹರದನಹಳ್ಳಿಯ ಮಾದರಿ ವಸತಿಯುಕ್ತ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ನೃತ್ಯದ ಮೂಲಕ ಸುಳ್ಳು ಸುದ್ದಿಗಳ ಪರಿಣಾಮ ತಿಳಿಸಿದರು.



ಮಳೆಯ ನಡುವೆಯೂ ದಸರಾ ಯುವ ಸಂಭ್ರಮದಲ್ಲಿ ಮಿಂದೆದ್ದ ಯುವ ಸಮೂಹ



ಮಹಾಭಾರತದಲ್ಲಿ ಬರುವ ದ್ರೌಪದಿ ವಸ್ತ್ರ ಅಪಹರಣ ದೃಶ್ಯ ಪ್ರಸ್ತುತಪಡಿಸಿದ ಕೆ.ಆರ್.ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿಯರು.

ಸುಳ್ಳಿಗೆ ಕಿವಿಕೊಡದಿರಿ..!: ಹೊಳೆನರಸೀಪುರದ ಹರದನಹಳ್ಳಿಯ ಮಾದರಿ ವಸತಿಯುಕ್ತ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಸುಳ್ಳು ಸುದ್ದಿ ಪರಿಣಾಮ ಮತ್ತು ಅವುಗಳ ನಿಯಂತ್ರಣ ಕುರಿತ ಅಚ್ಚುಕಟ್ಟು ಅಭಿನಯ ನೋಡುಗರ ಮನದಲ್ಲಿ ಜಾಗೃತಿ ಮೂಡಿಸಿತು. ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಾಗಿ ಹರಡುತ್ತಿರುವ ಸುಳ್ಳು ಸುದ್ದಿಗಳಿಂದಾಗುತ್ತಿರುವ ಪರಿಣಾಮ, ಗಾಸಿಪ್‌ಗಳಿಂದಾಗುವ ಅನಾಹುತಗಳ ಬಗ್ಗೆ ಅರ್ಥಪೂರ್ಣ ಉದಾಹರಣೆ ಸಹಿತ ನೃತ್ಯ ಸಂಯೋಜನೆ ಪ್ರಸ್ತುತಪಡಿಸಿದ ವಿದ್ಯಾರ್ಥಿನಿಯರು ಅಪಾರ ಮೆಚ್ಚುಗೆ ಪಡೆದರು.

ಮೇರಾ ಭಾರತ್ ಮಹಾನ್: ಮೈಸೂರಿನ ಜೆಎಸ್‌ಎಸ್ ವಿಶೇಷಚೇತನ ಪಾಲಿಟೆಕ್ನಿಕ್ ಕಾಲೇಜು ವಿದ್ಯಾರ್ಥಿಗಳ 'ಮೇರಾ ಭಾರತ್ ಮಹಾನ್' ಸಂಗೀತ ನೃತ್ಯ ಪ್ರದರ್ಶನ ನೆರೆದಿದ್ದವರಲ್ಲಿ ದೇಶ ಪ್ರೇಮದ ಕಿಚ್ಚು ಹೊತ್ತಿಸಿತು. ಹಾಗೆಯೇ ಕೊಡಗಿನ ಸಿದ್ದಾಪುರ ಬಿಜಿಎಸ್ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸಿದರು.

ಕಡಿಮೆಯಾಗದ ಸಂಭ್ರಮ: ಮಳೆಯ ನಡುವೆ ತಡವಾಗಿ ಆರಂಭವಾದ ಯುವ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಗುಂಪು ಗುಂಪಾಗಿ ಕೊಡೆ ಹಿಡಿದು ಬಂದ ಯುವ ಸಮೂಹದಲ್ಲಿನ ಸಂಭ್ರಮವೇನೂ ಕಡಿಮೆಯಾಗಲಿಲ್ಲ.

ಮಳೆ ಸುರಿಯುತ್ತಿದ್ದರು ಮನಮೋಹಕ ಹಾಡು ಮತ್ತು ನೃತ್ಯವನ್ನೊಳಗೊಂಡ ಯುವ ಸಂಭ್ರಮ ಯಶಸ್ವಿಯಾಗಿಯೇ ಮುನ್ನಡೆಯಿತು.



ಹೊಸಪೇಟೆ ಸಮೀಪ ಭೀಕರ ಅಪಘಾತ: 7 ಮಂದಿ ಸಾವು






ಹೊಸಪೇಟೆ: ಸಮೀಪದ ಗುಂಡಾ ಅರಣ್ಯ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಸಂಜೆ ಸ್ಟೇರಿಂಗ್ ವೀಲ್ ತುಂಡಾಗಿ ಇನ್ನೊಂದು ರಸ್ತೆಗೆ ನುಗ್ಗಿದ ಟ್ರಕ್ ಕಾರೊಂದಕ್ಕೆ ಡಿಕ್ಕಿ ಹೊಡೆದು ಕೆಳಗೆ ಉರುಳಿ ಬಿದ್ದಿದ್ದು, ಹಿಂದಿನಿಂದ ಬರುತ್ತಿದ್ದ ಟಿಪ್ಪರ್ ಒಂದು ಅದೇ ಕಾರಿಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ 7 ಮಂದಿ ಮೃತಪಟ್ಟಿದ್ದಾರೆ.

ಹೊಸಪೇಟೆ ಕಡೆಯಿಂದ ಚಿತ್ರದುರ್ಗ ಕಡೆಗೆ ತೆರಳುತ್ತಿದ್ದ ಟ್ರಕ್‌ನ ಸ್ಟೇರಿಂಗ್ ವಿಲ್ ತುಂಡಾಗಿ, ರಸ್ತೆ ವಿಭಜಕ ದಾಟಿಕೊಂಡು ಇನ್ನೊಂದು ಬದಿಯ ರಸ್ತೆಗೆ ನುಗ್ಗಿತ್ತು. ಅದೇ ವೇಳೆ ಹರಪನಹಳ್ಳಿ ಕಡೆಯಿಂದ ಹೊಸಪೇಟೆಯತ್ತ ಮಹೇಂದ್ರ ಎಸ್‌ಯುವಿ 300 ವಾಹನ ಬರುತ್ತಿತ್ತು. ಟ್ರಕ್ ಈ ವಾಹನಕ್ಕೆ ಗುದ್ದಿ ಮತ್ತೆ ಮುಂದಕ್ಕೆ ಹೋಗಿ ಗುಂಡಿಗೆ ಮಗುಚಿ ಬಿತ್ತು. ಇದೇ ವೇಳೆ ಹಿಂಬದಿಯಿಂದ ವೇಗವಾಗಿ ಬರುತ್ತಿದ್ದ ಟಿಪ್ಪರ್ ಎಸ್‌ಯುವಿಗೆ ಡಿಕ್ಕಿ ಹೊಡೆಯಿತು. ಹೀಗಾಗಿ ಕಾರಿನಲ್ಲಿದ್ದ 7 ಮಂದಿ ಮೃತಪಟ್ಟರು. ಮೃತರೆಲ್ಲ ಹೊಸಪೇಟೆಯ ಉಕ್ಕಡಕೇರಿಯವರು. ಇವರು ಮಗುವಿನ ಜವಳ (ಕೂದಲು ತೆಗೆಸುವ ಶಾಸ್ತ್ರ) ಮಾಡಿಸುವ ಸಲುವಾಗಿ ಕುಟುಂಬ ಸಮೇತ ಕೂಲಳ್ಳಿ ದೇವಸ್ಥಾನಕ್ಕೆ ತೆರಳಿ ವಾಪಸ್ ಬರುತ್ತಿದ್ದರು.

ಮೃತಪಟ್ಟವರಲ್ಲಿ ಮೂವರು ಪುರುಷರು, ಮೂವರು ಮಹಿಳೆಯರು ಹಾಗೂ 5 ವರ್ಷದ ಹೆಣ್ಣು ಮಗು ಸೇರಿದೆ. ಮೃತರನ್ನು ಕೆಂಚವ್ವ (60), ಭಾಗ್ಯಮ್ಮ (32), ಗೋಣಿಬಸಪ್ಪ (55), ಗಿರಿಜಾ (45), ಭೀಮಲಿಂಗಪ್ಪ (60), ಅನಿಲ್ (28) ಮತ್ತು ಈವನ್ (8) ಎಂದು ಗುರುತಿಸಲಾಗಿದೆ.

ಘಟನೆಯಲ್ಲಿ ಎರಡೂ ಲಾರಿಗಳ ಚಾಲಕರಿಗೆ ಗಾಯವಾಗಿದ್ದು, ಹೊಸಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ಎಸ್‌ಪಿ ಶ್ರೀಹರಿಬಾಬು ತೆರಳಿದ್ದು, ಹೆದ್ದಾರಿಯಲ್ಲಿ ಉಂಟಾಗಿದ್ದ ವಾಹನ ದಟ್ಟಣೆಯನ್ನು ನಿವಾರಿಸಲು ಕ್ರಮ ಕೈಗೊಂಡರು.

ಕಂದಕಕ್ಕೆ ಉರುಳಿ ಬಿದ್ದ ಬಸ್; 7 ಮಂದಿ ಸಾವು



ನೈನಿತಾಲ್ (ಉತ್ತರಾಖಂಡ): ನೈನಿತಾಲ್ ಜಿಲ್ಲೆಯಲ್ಲಿ ಬಸ್‌ವೊಂದು ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ 7 ಮಂದಿ ಸಾವನ್ನಪ್ಪಿದ್ದು, 28 ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಮೃತದೇಹಗಳನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿದೆ. ಗಾಯಗೊಂಡ ಪ್ರಯಾಣಿಕರನ್ನು ಸಮೀಪದ ಆಸ್ಪತ್ರೆಗಳಿಗೆ ರವಾನಿಸಲಾಗಿದೆ ಎಂದು ಎನ್‌ಡಿಆರ್‌ಎಫ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ಘಟನೆ ಕುರಿತು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ದುಃಖ ವ್ಯಕ್ತಪಡಿಸಿದ್ದು, ಸ್ಥಳೀಯ ಆಡಳಿತ ಮತ್ತು ಎಸ್‌ಡಿಆರ್‌ಎಫ್ ತಂಡದಿಂದ ಪರಿಹಾರ ಮತ್ತು ರಕ್ಷಣಾ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

ಮೈಸೂರು ದಸರಾ ವೇಳೆ ಬೆಳಕಿನ ಚಿತ್ತಾರದಲ್ಲಿ ಸ್ವಚ್ಛ ಮೈಸೂರು

ಮೈಸೂರು ನಗರಪಾಲಿಕೆಯಿಂದ ಸ್ವಚ್ಛತೆಗೆ ಆದ್ಯತೆ; ನಾಲ್ಕು ಪ್ಯಾಕೇಜ್‌ಗಳಲ್ಲಿ ಕಾರ್ಯ ಯೋಜನೆ

ಮೈಸೂರು, ಅ.9(ಎಂಕೆ)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಹಿನ್ನೆಲೆ ಸ್ವಚ್ಛತೆ ಮೂಲಕ ಮೈಸೂರಿನ ಅಂದ-ಚೆಂದ ಹೆಚ್ಚಿಸುವ ರೂಪುರೇಷೆ ಸಿದ್ಧವಾಗಿದೆ...!

ಬೆಳಕಿನ ಚಿತ್ತಾರದೊಂದಿಗೆ ಕಂಗೊಳಿಸುವ ಮೈಸೂರು ನಗರದ ಹೃದಯ ಭಾಗದಲ್ಲಿ ಸ್ವಚ್ಛತೆ ಹಾಗೂ ವ್ಯವಸ್ಥೆಯ ಜವಾಬ್ದಾರಿ ನಿರ್ವಹಿಸುವ ಮೈಸೂರು ನಗರಪಾಲಿಕೆಯು ಬರೋಬ್ಬರಿ ನಾಲ್ಕು ಪ್ಯಾಕೇಜ್‌ಗಳಲ್ಲಿ (ಸ್ಥಳಗಳಿಗೆ ಅನುಗುಣವಾಗಿ) 385 ಮಂದಿ ಪೌರ ಕಾರ್ಮಿಕರನ್ನು ನಿಯೋಜಿಸಿದೆ.



ಸಂಗ್ರಹ ಚಿತ್ರ

ಪ್ರಮುಖ ರಸ್ತೆಗಳ ಸ್ವಚ್ಛತೆ, ಕಸ ವಿಲೇವಾರಿ, ರಸ್ತೆ ಗುಂಡಿಗಳನ್ನು ಮುಚ್ಚುವುದು, ಬ್ಯಾರಿಕೇಡ್‌ಗಳ ವ್ಯವಸ್ಥೆ ಸೇರಿದಂತೆ ದಸರಾ ಮಹೋತ್ಸವ ಪ್ರಮುಖ ಆಕರ್ಷಣೆಗಳಾದ ಆಹಾರ ಮೇಳ, ಕುಸ್ತಿ ಪಂದ್ಯಾವಳಿ, ವಸ್ತುಪ್ರದರ್ಶನ, ಚಲನಚಿತ್ರೋತ್ಸವ, ಕವಿಗೋಷ್ಠಿ, ಕ್ರೀಡಾಕೂಟ, ಸಾಂಸ್ಕೃತಿಕ ವೇದಿಕೆಗಳ ಬಳಿ ಸೇರಿದಂತೆ ಹತ್ತು-ಹಲವು ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿ ಸ್ವಚ್ಛತೆ ಹಾಗೂ ಅಚ್ಚುಕಟ್ಟಿನ ನಿರ್ವಹಣಾ ವ್ಯವಸ್ಥೆ ಕಲ್ಪಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಹಾರ್ಡಿಂಗ್ ಸರ್ಕಲ್, ಸಬರ್ಬನ್ ಬಸ್ ನಿಲ್ದಾಣ, ಇರ್ವಿನ್ ರಸ್ತೆ, ಆಯುರ್ವೇದಿಕ್ ಸರ್ಕಲ್, ಅಶೋಕ ರಸ್ತೆ, ಚಾಮರಾಜ ಸರ್ಕಲ್, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ಸರ್ಕಲ್, ದೇವರಾಜ ಅರಸು ರಸ್ತೆ, ಜಗಜೀವನ್ ರಾಂ ಸರ್ಕಲ್, ಜೆಎಲ್‌ಬಿ ರಸ್ತೆ, ದಾಸಪ್ಪ ಸರ್ಕಲ್, ಧನ್ವಂತರಿ ರಸ್ತೆ ಮತ್ತು ಜೆ.ಕೆ. ಮೈದಾನ, ನಂಜರಾಜ ಛತ್ರ, ಶಿವರಾಂಪೇಟೆ ರಸ್ತೆಯಿಂದ ಚಿಕ್ಕಗಡಿಯಾರ, ದೊಡ್ಡ ಗಡಿಯಾರ, ಗಾಂಧಿವೃತ್ತ, ಚಂದ್ರಗುಪ್ತ ರಸ್ತೆ, ಆರ್‌ಎಂಸಿ ವೃತ್ತ, ಹೈವೆ ಸರ್ಕಲ್, ಮಿಲೇನಿಯಂ ಸರ್ಕಲ್, ಜೆಎಸ್‌ಎಸ್ ಮೆಡಿಕಲ್ ಕಾಲೇಜು ರಸ್ತೆ, ಮುಖ್ಯ ಅಂಚೆ ಕಚೇರಿ ಸರ್ಕಲ್, ಸೆಂಟ್ ಫಿಲೋಮಿನಾ ಚರ್ಚ್, ಫೌಂಟೇನ್ ಸರ್ಕಲ್, ಕುರುಬಾರಹಳ್ಳಿ ವೃತ್ತ ಸೇರಿದಂತೆ ಪ್ರಮುಖ ರಸ್ತೆಗಳ ಹಾಗೂ ವೃತ್ತಗಳಲ್ಲಿ ಸ್ವಚ್ಛತೆಗೆ ಅನುಗುಣವಾಗಿ ಪೌರ ಕಾರ್ಮಿಕರನ್ನು ವಿಂಗಡಿಸಿ ಶುಚಿತ್ವ ಕಾಪಾಡುವ ಜವಾಬ್ದಾರಿ ನೀಡಲಾಗಿದೆ.

40 ಲಕ್ಷಕ್ಕೂ ಅಧಿಕ ಖರ್ಚು: ಅ.13 ರಿಂದ 25ರವರೆಗೆ ಹಮ್ಮಿಕೊಳ್ಳುವ ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆಗೆ ಸುಮಾರು 40 ಲಕ್ಷಕ್ಕೂ ಹೆಚ್ಚಿನ ಹಣ ಖರ್ಚಾಗುವ ಸಾಧ್ಯತೆ ಇದೆ. ಈಗಾಗಲೇ ಎಲ್ಲಾ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ದಸರಾ ಸ್ವಚ್ಛತಾ ಮತ್ತು ವ್ಯವಸ್ಥೆ ಉಪ ಸಮಿತಿ ಕಾರ್ಯದರ್ಶಿ ಹಾಗೂ ನಗರಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಡಾ.ಎನ್.ಪಿ.ವೆಂಕಟೇಶ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಅ.13ಕ್ಕೆ ಚಾಲನೆ: ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಅ.13ರ ಸಂಜೆ ದಸರಾ ಸ್ವಚ್ಛತೆಗೆ ಚಾಲನೆ ನೀಡಲಿದ್ದು, ಸತತವಾಗಿ 12 ದಿನಗಳ ಕಾಲ ಹಗಲು ಮತ್ತು ರಾತ್ರಿ ಪಾಳಿಗಳಲ್ಲಿ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯನಿರ್ವಹಿಸಲಿದ್ದಾರೆ. ಹಾಗೆಯೇ ಯುವ ದಸರಾ ನಡೆಯುವ ಮಹಾರಾಜ ಕಾಲೇಜು ಮೈದಾನದಲ್ಲಿ 15 ಮಂದಿ, ಆಹಾರ ಮೇಳ ನಡೆಯುವ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ 25, ಮಕ್ಕಳ ದಸರಾ ನಡೆಯುವ ಜಗನ್ಮೋಹನ ಅರಮನೆಯಲ್ಲಿ 5, ಕಲಾಮಂದಿರ 10, ಪುರಭವನ 5, ಅರಮನೆ ವೇದಿಕೆ ಬಳಿ 15, ಮಹಿಳಾ ದಸರಾ ನಡೆಯುವ ಜೆ.ಕೆ.ಮೈದಾನದಲ್ಲಿ 10, ಚಾಮುಂಡಿಬೆಟ್ಟಕ್ಕೆ 5 ಹಾಗೂ ಇನ್ನಿತರೆ ಸ್ಥಳಗಳಿಗೆ 60 ಮಂದಿ ಪೌರ ಕಾರ್ಮಿಕರನ್ನು ನಿಯೋಜಿಸಲಾಗಿದೆ. ಹಾಗೆಯೇ ಕಸ ವಿಲೇವಾರಿಗೆ ಅಗತ್ಯ ವಾಹನಗಳ ವ್ಯವಸ್ಥೆಯನ್ನು ಮಾಡಲಾಗಿದೆ ಎಂದರು.

ದಸರಾ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಗೆ ಮತ್ತಷ್ಟು ಕಡಿವಾಣ ಹಾಕಲಾಗುವುದು. ಅಂಗಡಿ ಮಳಿಗೆಗಳ ಜೊತೆಗೆ ಪ್ಲಾಸ್ಟಿಕ್ ತಯಾರಿಕಾ ಕಾರ್ಖಾನೆಗಳ ಮೇಲೆ ದಾಳಿ ನಡೆಸಲಾಗುವುದು. ಮೈಸೂರು ದಸರಾ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಯಾವುದೇ ತೊಂದರೆಯಾಗದಂತೆ ಸ್ವಚ್ಛತೆ ಮತ್ತು ವ್ಯವಸ್ಥೆ ನಿರ್ವಹಿಸಲಾಗುವುದು. ಮೈಸೂರನ್ನು ಮತ್ತಷ್ಟು ಸ್ವಚ್ಛ ನಗರವನ್ನಾಗಿಸುವ ನಿಟ್ಟಿನಲ್ಲಿ ಕಾರ್ಯ ರೂಪಿಸಲಾಗಿದೆ.



– ಡಾ.ಎನ್.ಪಿ.ವೆಂಕಟೇಶ್, ಕಾರ್ಯದರ್ಶಿ, ದಸರಾ ಸ್ವಚ್ಛತಾ ಮತ್ತು ವ್ಯವಸ್ಥೆ ಉಪಸಮಿತಿ

Job Opening @
GLOBAL ENTRADA
INTERNATIONAL TOURS
M Block Kuvempunagar, Mysore
BACK OFFICE EXECUTIVE
(Female Candidates Only)
with good Communication skill
Min 3 Years work experience...With Attractive salary
Walk-in between 11.00am to 5.00pm
Contact: 0821-4249982/
7338488182 / 9901898182

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸವಿನೆನಪು

ನೀವು ನಮ್ಮನ್ನು ಅಗಲಿ ಇಂದಿಗೆ 4 ವರ್ಷಗಳಾಗಿವೆ. ನಾವು ಮುಂದೆ ಸಾಗಲು ನೀವು ದಾರಿ ದೀಪವಾಗಿದ್ದೀರೆಂದು ನಂಬಿದ್ದೇವೆ.
ಇಂತಿ ನಿಮ್ಮ ಪತಿ, ಆರ್ ಶಂಕರ್ ಮತ್ತು ಮಕ್ಕಳು ಮೊಮ್ಮಕ್ಕಳು
ನಿಧನ: 10.10.2019

ಚಿರಸ್ಮರಣೆ

ನೀವು ನಮ್ಮನ್ನು ಅಗಲಿ ಇಂದಿಗೆ 23 ವರ್ಷಗಳು ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ ಶ್ರೀಮತಿ ಯಶೋದಮ್ಮ ಮತ್ತು ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಹನುಮನಾಳು, ಬನ್ನೂರು ಹೋಬಳಿ
ಶ್ರೀಮಾನ್ ಹೆಚ್ ಸಿದ್ದಪ್ಪನವರು

ನಕ್ಕರೆ ಅದೇ ಸ್ವರ್ಗ

ಪೇದೆ : (ಗಾಬರಿಯಿಂದ) "ಸಾರ್, ನಿನ್ನೆ ರಾತ್ರಿ ಖೈದಿಗಳೆಲ್ಲಾ ಸೇರಿ ರಾಮಲೀಲಾ ಉತ್ಸವ ಆಚರಿಸಿದರು."

ಜೈಲರ್ : "ಭೇಷ್ ! ಅದಕ್ಕೆ ಯಾಕೆ ಗಾಬರಿಪಡುತ್ತೀಯಾ?"

ಪೇದೆ : "ಸಾರ್, ಹನುಮಂತನ ಪಾತ್ರ ಮಾಡಿದವನು ಸಂಜೀವಿನಿ ತೆಗೆದುಕೊಂಡು ಬರ್ತೀನಿ ಅಂತ ಹೇಳಿ ಹೋದವನು ಇದುವರೆಗೂ ವಾಪಸ್ ಬಂದಿಲ್ಲ !"

ಮೈಸೂರು ಮಿತ್ರ

ಮಂಗಳವಾರ, 10 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಸಾಧನೆ ಮಾಡಲು ಹೊರಟವನಿಗೆ, ದಾರಿಯಲ್ಲಿ ಬೆಕ್ಕಿಗಿಂತ ಹೆಚ್ಚು ಜನರೇ ಅಡ್ಡ ಬರುತ್ತಾರೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುರಿ ಕಾಂಯೋದಕ್ಕೆ ತೋಳವನ್ನು ನೇಮಿಸಿದಂತೆ

ನಿಮ್ಮ ಪತ್ರಗಳು

■ ಮೈಸೂರಿನ ಮಿನಿ ವಿಧಾನಸೌಧ, ತಾಲೂಕು ಕಚೇರಿ ಹಿಂಭಾಗದ ರಸ್ತೆ ಡಾಂಬರೀಕರಣಗೊಳಿಸಿ

ಮಾನ್ಯರೆ,

ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನಸೌಧ, ತಾಲೂಕು ಕಚೇರಿಯ ಹಿಂಭಾಗದಲ್ಲಿ ಹಲವಾರು ಕಂಪ್ಯೂಟರ್ ಕಚೇರಿಗಳು, ಪತ್ರ ಬರಹಗಾರರ ಕಚೇರಿಗಳು, ವಕೀಲರು, ನೋಟರಿ ಕಚೇರಿಗಳಿವೆ. ತಾಲೂಕು ಕಚೇರಿ ಕೆಲಸಕ್ಕೆ ಪೂರಕವಾಗಿ ಬೇಕಾಗುವ ಅನೇಕ ಡಿಜಿಟಲ್ ತಂತ್ರಜ್ಞಾನದ ಕಚೇರಿಗಳೂ ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳಿಗೆ ಸಂಪರ್ಕ ಕಲ್ಪಿಸುವ ತಾಲೂಕು ಕಚೇರಿಯ ಹಿಂಭಾಗದಲ್ಲಿರುವ ರಸ್ತೆ ಹಾಳಾಗಿದೆ. ಮಳೆಗಾಲದಲ್ಲಿ ಸಾರ್ವಜನಿಕರು ಇಲ್ಲಿ ತಿರುಗಾಡುವುದೇ ಕಷ್ಟ ಮತ್ತೊಂದು ಸಮಸ್ಯೆಯೆಂದರೆ, ಮಿನಿ ವಿಧಾನಸೌಧ ನಿರ್ಮಿಸುವ ಸಂದರ್ಭದಲ್ಲಿ ಸಿಮೆಂಟ್ ಇತ್ಯಾದಿ ಇಟ್ಟುಕೊಳ್ಳಲು ನಿರ್ಮಿಸಿದ್ದ ನಾಲ್ಕು ದೊಡ್ಡ ಮಳಿಗೆಗಳು ಪಾಳು ಬಿದ್ದಿವೆ. ಹಗಲು ಹೊತ್ತಿನಲ್ಲೇ ಮೂತ್ರ ವಿಸರ್ಜನೆಗೆ ಕೆಲವರು ಈ ಮಳಿಗೆಗಳನ್ನು ಬಳಸುತ್ತಿದ್ದಾರೆ. ಇದು ಮಿನಿ ವಿಧಾನಸೌಧದ ಹೆಸರಿಗೇ ಕಳಂಕವಲ್ಲವೇ? ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ತಾಲೂಕು ಕಚೇರಿ ಹಿಂಭಾಗದ ರಸ್ತೆ ಸರಿಪಡಿಸುವುದು ಮತ್ತು ಇಲ್ಲಿ ಪಾಳು ಬಿದ್ದಿರುವ ಮಳಿಗೆಗಳಲ್ಲಿ ಮೂತ್ರ ವಿಸರ್ಜನೆಗೆ ಅವಕಾಶವಾಗದಂತೆ ಕ್ರಮ ಕೈಗೊಳ್ಳಬೇಕೆಂದು ಮನವಿ.

– ಎ.ಪಿ. ಶ್ರೀಕಂಠರಾಜೇ ಅರಸ್, ನ್ಯಾಯವಾದಿ, ಮೈಸೂರು.

■ ಮೈಸೂರು ದಸರಾ; ಎಷ್ಟೊಂದು ಸುಂದರಾ?!



ಮಾನ್ಯರೆ

ಆಹಾ! ಓಹೋ! ಅಬ್ಬಬ್ಬಾ! ಎನ್ನುವ ಸುಂದರ ಕ್ಷಣಗಳು ನಮ್ಮ ಮುಂದೆ ಇನ್ನೇನು ಕೆಲವೇ ದಿನಗಳಲ್ಲಿ ಬರಲಿವೆ. ಮೈಸೂರಿನಲ್ಲಿ ಸ್ವರ್ಗವೇ ಸೃಷ್ಟಿಯಾಗಲಿದೆ. ಎಲ್ಲೆಂದರಲ್ಲಿ ಇರುಳಿನ ಸಮಯದಲ್ಲಿ ದೀಪಾಲಂಕಾರ ಕಂಗೊಳಿಸಲಿದೆ. ಮರಗಿಡಗಳು, ಉದ್ಯಾನವನಗಳು, ದೊಡ್ಡ ದೊಡ್ಡ ಕಟ್ಟಡಗಳು, ಸ್ಮಾರಕಗಳು ಇತ್ಯಾದಿ ದೀಪಗಳ ಬೆಳಕಿನಲ್ಲಿ ತಮ್ಮ ಸೊಬಗನ್ನು ಜನತೆಯ ಮುಂದೆ ಪ್ರದರ್ಶನ ಮಾಡಲಿವೆ. ಇವನ್ನು ಕಣ್ತುಂಬಿಕೊಳ್ಳುವುದೇ ನಮ್ಮ ಪೂರ್ವಜನ್ಮದ ಪುಣ್ಯವೇ ಸರಿ. ಮೈಸೂರು ದಸರಾ ಅಂದ ಕ್ಷಣ ನಮ್ಮ ನೆನಪಿಗೆ ಬರುವುದು ನಮ್ಮ ಕಣ್ಣ ಮುಂದೆ ಸುಳಿಯುವುದು ದಸರಾ ಜಂಬೂಸವಾರಿ. ಅರಮನೆಯ ಸೊಬಗು ಚಾಮುಂಡೇಶ್ವರಿ ದೇವಾಲಯ ಹೀಗೆ ಹಲವು ನಮ್ಮನ್ನು ಮಂತ್ರ ಮುಗ್ಧರನ್ನಾಗಿ ಮಾಡಿಬಿಡುತ್ತವೆ. ಈ ಮೈಸೂರು ದಸರಾವನ್ನು ನೋಡಲು ಎರಡು ಕಣ್ಣುಗಳು ಸಾಲದು. 9 ದಿನಗಳು ನಡೆಯುವ ಈ ವಿಶ್ವವಿಖ್ಯಾತ ನಾಡಹಬ್ಬ ನಮ್ಮ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ವೈಭವದ ಹಬ್ಬವಾಗಿದೆ. ಮಹಾಲಯ ಅಮಾವಾಸ್ಯೆ ದಿನದಂದೇ ದಸರಾಗೆ ಸಾಂಪ್ರದಾಯಿಕ ವಾಗಿ ಚಾಲನೆ ದೊರಕುತ್ತದೆ. ಮೈಸೂರಿನ ವಿವಿಧೆಡೆ ವಿವಿಧ ಕಾರ್ಯಕ್ರಮಗಳು ಆರಂಭಗೊಳ್ಳುತ್ತವೆ. ಯುವಸಂಭ್ರಮ, ಯುವದಸರಾ, ಆಹಾರ ಮೇಳ, ಕುಸ್ತಿ, ಪುಷ್ಪಾಲಂಕಾರ, ಕವಿಗೋಷ್ಠಿ, ರೈತ ದಸರಾ ಇತ್ಯಾದಿ.

ಆಯುಧ ಪೂಜೆಯಂದು ನಾವು ನಿತ್ಯ ಬಳಸುವ ಆಯುಧಗಳಿಗೆಲ್ಲಾ ಶ್ರದ್ಧಾ ಭಕ್ತಿಯಿಂದ ಪೂಜೆಗೈದು ಹಬ್ಬದ ಅಮಲಿನಲ್ಲಿ ಮಿಯ್ಯುತ್ತೇವೆ. ಮಾರನೆ ದಿನವೇ ವಿಜಯ ದಶಮಿ ವಿಜಯದ ಪತಾಕೆಯ ಸ್ಮರಣಾರ್ಥ ಆಚರಿಸುವ ದಿನವಾಗಿದೆ. ಅಂದೇ ಜಂಬೂಸವಾರಿಯು ರಾಜ ಬೀದಿಯಲ್ಲಿ ಮೆರವಣಿಗೆ ಹೋಗುವ ಸುಂದರ ಘಳಿಗೆ. ಆ ದಿನದಂದು ಎಲ್ಲಾ ರೀತಿಯ ನಮ್ಮ ದೇಶವನ್ನು ಪ್ರತಿನಿಧಿಸುವ ಜಾನಪದ ಕಲೆಗಳ ಮೇಳೈಸಿ ಮೆರವಣಿಗೆ ನಡೆಯುತ್ತದೆ.


ಅದರೊಟ್ಟಿಗೆ ಅರಕ್ಷರ ಒಂದು ಪಥ ಸಂಚಲನ ಬಹಳ ಶಿಸ್ತಿನಿಂದ ಆದರ್ಶಮಯವಾಗಿ ನಡೆಯುತ್ತದೆ. ನಮ್ಮ ದೇಶದ ಎಲ್ಲಾ ರಾಜ್ಯದ ಸಂಸ್ಕೃತಿಯನ್ನು ಬಿಂಬಿಸುವ ಸ್ತಬ್ಧಚಿತ್ರಗಳು ನೋಡುಗರನ್ನು ನಿಬ್ಬೆರಗಾಗಿಸುತ್ತವೆ. ಅಂತಿಮವಾಗಿ ಬರುವ ಜಂಬೂ ಸವಾರಿಯಂತೂ ಅದ್ದೂರಿಯಾಗಿ ಜನತೆಯಲ್ಲಿ ಮಂದಹಾಸದ ಹೊನಲು ಹರಿಸುತ್ತದೆ. ಅದರ ಹಿಂದೆಯೇ ಚಾಮುಂಡಿ ತಾಯಿ ಉತ್ಸವಮೂರ್ತಿ ಮೆರವಣಿಗೆ ಬಂದಾಗ ಸಾಕ್ಷತ್ ತಾಯಿ ಚಾಮುಂಡಿಯೇ ದರ್ಶನ ನೀಡುತ್ತಾಳೆ ಎಂಬಂತೆ. ಬಿಡಿ ದಿನಗಳಲ್ಲಿ ಚಾಮುಂಡಿ ನೋಡಲು ಜನರು ದೇವಾಲಯಕ್ಕೆ ಹೋಗಬೇಕು ಈ ದಸರಾ ಮೆರವಣಿಗೆಂಯಂದು ತಾಯೆ ಜನರ ಮುಂದೆ ಬಂದಂತೆ..!

ಈ ಎಲ್ಲಾ ಸುಂದರ ಕ್ಷಣಗಳ ಕಂಡಾಗ ನಿಜಕ್ಕೂ ಸ್ವರ್ಗವನ್ನೇ ಮೀರಿಸುವಂತೆ ಅಲ್ಲವೇ? ವಿಜಯ ದಶಮಿಯ ಮೆರವಣಿಗೆ ಮುಗಿದ ನಂತರ ಬನ್ನಿಮಂಟಪದಲ್ಲಿ ಸಮಾರೋಪ ಸಮರಂಭದಲ್ಲಿ ಪೊಲೀಸ್ ಪಡೆಯಿಂದ ಪಂಜಿನ ಕವಾಯಿತು ವಿವಿಧ ರೀತಿಯ ಸ್ಟಂಟ್‌ಗಳು ನೋಡಗರನ್ನು ನಿಬ್ಬೆರಗಾಗಿಸಿ ಮೈ ರೋಮಾಂಚಕಾರಿಯಾಗಿರುತ್ತದೆ. ಈ ಎಲ್ಲಾ ದೃಶ್ಯಗಳನ್ನು ಕಣ್ತುಂಬಿಕೊಳ್ಳಬೇಕೆಂದರೆ ನಮ್ಮ ಮೈಸೂರಿಗೆ ಬರಬೇಕು ನಿಜಕ್ಕೂ ಮೈಸೂರಿನಲ್ಲಿ ಹುಟ್ಟಿದ ಜನರು ಅದೃಷ್ಟವಂತರು ಎನ್ನುವುದರಲ್ಲಿ ಎರಡು ಮಾತಿಲ್ಲ. ನಮ್ಮ ಮೈಸೂರು ನಮ್ಮ ಹೆಮ್ಮೆ; ನಮ್ಮ ಮೈಸೂರು ದಸರಾ ನಮ್ಮ ಹೆಮ್ಮೆ.

–ಅನಿಲ್ ರಾಜ, ಸಹ ಶಿಕ್ಷಕ, ಗೀತಾ ಭಾರತಿ ಶಾಲೆ, ಮೈಸೂರು

■ ಕಲಾವಿದ ಬಾದಲ್ ನಂಜುಂಡಸ್ವಾಮಿಯವರ ಕಲಾಕೃತಿಗಳು

ಮಾನ್ಯರೆ,



ನೀವು ಮೈಸೂರಿನ ವಿಶ್ವವಿದ್ಯಾನಿಲಯದಿಂದ ಕುಕ್ಕರಹಳ್ಳಿಯ ಕೆರೆಯ ಮಾರ್ಗವಾಗಿ ಮಾನಸ ಗಂಗೋತ್ರಿಗೆ ಹೋಗುವ ದಾರಿಯಲ್ಲಿ ಕುವೆಂಪು ಜೋಡಿ ರಸ್ತೆಯ ಪಕ್ಕಕ್ಕೆ ಬಲಭಾಗದಲ್ಲಿ ತಿರುಗಿ ನೋಡಿದರೆ ಹತ್ತಾರು ಹಸುಗಳು ಮತ್ತು ಜಿಂಕೆಗಳು ನಿಂತಿರುವಂತೆ ಭಾಸವಾಗುತ್ತದೆ. ಇವುಗಳು ಮೈಸೂರಿನ ಖ್ಯಾತ ಕಲಾವಿದ ಬಾದಲ್ ನಂಜುಂಡಸ್ವಾಮಿಯವರು ಕೈಚಳಕದಿಂದ ಮೂಡಿ ಬರುತ್ತಿರುವ ಅದ್ಭುತ ಕಲಾಕೃತಿಗಳು. ಸಂಪೂರ್ಣ ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಫೈಬರ್‌ನಿಂದ ತಯಾರಾಗುತ್ತಿರುವ ಈ ಕಲಾಕೃತಿಗಳು, ಯಾವುದೇ ಮಳೆ, ಚಳಿ, ಬಿಸಿಲಿಗೆ ಬಣ್ಣ ಮಾಸುವುದಿಲ್ಲ. ಸ್ಥಳ ದುಬಾರಿ ಬೆಲೆ ನಿಗದಿಸದೇ ಇವುಗಳನ್ನು ಪೆಟ್ರೋಲ್ ಬಂಕ್‌ಗಳ ಮುಂದೆ, ದೊಡ್ಡ-ದೊಡ್ಡ ಮಾಲ್‌ಗಳು ಮತ್ತು ಮದುವೆ ಛತ್ರಗಳ ಮುಂದೆ ಸಾರ್ವಜನಿಕರನ್ನು ಆಕರ್ಷಿಸುವ ಸಲುವಾಗಿ ಅದರ ಮಾಲೀಕರು ಇಟ್ಟಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ನಮ್ಮ ರೈತಾಪಿ ಜನರ ಜೀವನಾಡಿಯಾಗಿರುವ ಹಸು, ಎತ್ತುಗಳನ್ನು ನಗರ ಪ್ರದೇಶದ ಮಕ್ಕಳಿಗೆ ಪರಿಚಯಿಸುವ ಕಲೆಯು ಎನ್ನಬಹುದು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಸಕಾಲಿಕ

ಹೇಳುವುದೇ ಒಂದು... ಮಾಡುವುದು ಮತ್ತೊಂದು...





ಲೋಕಸಭೆಯ 28 ಸ್ಥಾನಗಳ ಪೈಕಿ ರಾಷ್ಟ್ರವನ್ನು ಆಳುತ್ತಿರುವ ಬಿಜೆಪಿ 25 ಸ್ಥಾನ ಹೊಂದಿದೆ. ಕಾಂಗ್ರೆಸ್ ಒಂದು, ಜೆಡಿಎಸ್ ಒಂದು ಸ್ಥಾನ ಪಡೆದಿದೆ. ಮಂಡ್ಯದಲ್ಲಿ ಸುಮಲತಾ ಲೋಕಸಭೆ ಸದಸ್ಯರಾಗಿದ್ದಾರೆ. ಅಂದರೆ 28ರ ಪೈಕಿ 25 ಸ್ಥಾನ ಪಡೆದಿರುವ ಬಿಜೆಪಿ ಕೇವಲ ಒಂದು ಸ್ಥಾನ ಪಡೆದಿರುವ ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಂಡಿರುವುದು ಎಂದರೆ, ಅದು ಬಿಜೆಪಿ ಹೀನಾಯ ಸ್ಥಿತಿಗೆ ಕನ್ನಡಿ ಹಿಡಿದಂತೆ. ರಾಜ್ಯದಲ್ಲಿ ಕಮಲ ಕಮರಿದೆ. ತೆನೆ ಹೊತ್ತ ಮಹಿಳೆ ಸೊರಗಿದ್ದಾರೆ. ಬರುವ ಲೋಕಸಭಾ ಚುನಾವಣೆ ಈ ಹೊಂದಾಣಿಕೆ ಫಲವಾಗಿ ಜೆಡಿಎಸ್ ಒಂದರ ಜೊತೆಗೆ ಒಂದೆರಡು ಸೀಟು ಗೆಲ್ಲಬಹುದು. ಆದರೆ ಹೊಂದಾಣಿಕೆ ಲಾಭದಿಂದ ಬಿಜೆಪಿ ಈಗಿರುವ ಸಂಖ್ಯೆಗಿಂತ ಹೆಚ್ಚುವ ಭರವಸೆ ಹೊಂದಿದೆಯೇ? ಏನಿದ್ದರೂ ಈಗಿರುವ ಸಂಖ್ಯೆ ಕುಸಿಯದಂತೆ ನೋಡಿಕೊಂಡರೆ ಅದೇ ದೊಡ್ಡ ಸಾಧನೆ.

ಮುಂಬರಲಿರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಹಾಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ದೆಹಲಿಯಲ್ಲಿ ಪರಸ್ಪರ ಭೇಟಿಯಾಗಿ ಎರಡೂ ಪಕ್ಷಗಳ ಹೊಂದಾಣಿಕೆ ಬಗ್ಗೆ ಮಾತುಕತೆ ನಡೆಸಿರುವುದು ರಹಸ್ಯವಾಗೇನೂ ಇಲ್ಲ. ಆದರೆ ಈ ಗುಟ್ಟಿನ ಸಭೆ ವಿಚಾರದಲ್ಲಿ ಎರಡೂ ಪಕ್ಷಗಳಲ್ಲಿ ಅಪಸ್ವರದ ಧನಿ ಎದ್ದಿರುವುದು ನಿಜ.

ಆ ಪಕ್ಷದ ರಾಜ್ಯದ ಅಧ್ಯಕ್ಷರೂ ಹಾಗೂ ಹಿರಿಯ ನಾಯಕರ ಸಹಮತ ಇಲ್ಲವೇ ಒಟ್ಟಾರೆ ಅಭಿಪ್ರಾಯವನ್ನು ಪಡೆಯದೇ ತಾವೇ ಇಬ್ಬರೂ ಕುಳಿತು ತೀರ್ಮಾನ ತೆಗೆದುಕೊಂಡಿರುವುದಕ್ಕೆ ಒಪ್ಪಿಗೆ ಇಲ್ಲ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಮೋದಿ ಹಾಗೂ ಗೌಡರ ಸಭೆಗೆ ಇಲ್ಲವೇ ಅಭಿಪ್ರಾಯಕ್ಕೆ ಸಮ್ಮತಿ ಇಲ್ಲವೇ ಮುದ್ರೆ ಒತ್ತುವ ರೀತಿಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತು ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಕೇಂದ್ರದ ಮಂತ್ರಿ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಸಮ್ಮುಖದಲ್ಲಿ ತಲೆಯಾಡಿಸಿ (ತಗ್ಗಿಸಿ) ಬಂದಿದ್ದಾರೆ.

ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರನ್ನು ಈ ನಾಯಕರು 'ಕ್ಯಾರೆ' ಎಂದಿಲ್ಲ. ಅಧ್ಯಕ್ಷರೆಲ್ಲಾ ದೆಹಲಿಯ ಕೈಗೊಂಬೆಗಳು. ಹೌದಪ್ಪಾ ಎನ್ನುವುದಕ್ಕೆ ಮಾತ್ರ ಇವರ ಅಧಿಕಾರ ಸೀಮಿತ. ಮರು ಮಾತಾಡಿದರೆ ಅಧ್ಯಕ್ಷರಗಾದಿಯೇ 'ನಾಳೆ'ಯಿಂದಲೇ ನಾಪತ್ತೆ ಆಗಬಹುದು!

ಅಪ್ಪ-ಮಕ್ಕಳು ದೆಹಲಿಗೆ ಹೋಗಿ ಪ್ರಧಾನಿ ಮೋದಿಗೆ 'ಮೋಡಿ' ಮಾಡಿ ಸಂಧಾನ ಕುದುರಿಸಿಕೊಂಡಿದ್ದಾರೆ. ಎರಡೂ ಪಕ್ಷಗಳ ಸ್ಥಳೀಯ ನಾಯಕರು ಗಾಂಧೀಜಿ ತತ್ವದಂತೆ 'ಕಣ್ಣು, ಕಿವಿ, ಬಾಯಿ' ಮುಚ್ಚಿಕೊಂಡು ಮೌನಕ್ಕೆ ಶರಣಾಗಿದ್ದಾರೆ. ಇವರ ದೊಂಬರಾಟ ನೋಡಿ ಜನ ಗುಸು-ಗುಸು ನಗುತ್ತಿದ್ದಾರೆ.

ಒಂದು ಪಕ್ಷದ ಹೆಸರು ಜಾತ್ಯತೀತ-ಪ್ರಾದೇಶಿಕ ಪಕ್ಷವಾದರೂ ಅದಕ್ಕೆ ರಾಷ್ಟ್ರೀಯ ಅಧ್ಯಕ್ಷರು ಮಾಜಿ ಪ್ರಧಾನಿಗಳೂ ಆದ ಮಾನ್ಯ ದೇವೇಗೌಡರು. ರಾಜ್ಯ ಘಟಕದ ಯುವ ಅಧ್ಯಕ್ಷ ಕುಮಾರಸ್ವಾಮಿಯವರ ಪುತ್ರ ನಿಖಿಲ್ ಕುಮಾರಸ್ವಾಮಿ, ದೊಡ್ಡ ಗೌಡರ ಮತ್ತೊಬ್ಬ ಪುತ್ರ ಹೆಚ್.ಡಿ.ರೇವಣ್ಣನವರು ಶಾಸಕರು. ಅವರ ಇಬ್ಬರು ಪುತ್ರರಲ್ಲಿ ಹಿರಿಯ ಪುತ್ರ ಪ್ರಜ್ವಲ್ ಲೋಕಸಭಾ ಸದಸ್ಯರು. ಇನ್ನೊಬ್ಬರು ಸೂರಜ್, ವಿಧಾನಪರಿಷತ್ ಸದಸ್ಯರಾಗಿದ್ದವರು. ತಾಯಿ ಭವಾನಿ ಜಿಲ್ಲಾ ಪಂಚಾಯತ್ ಸದಸ್ಯರು. ಇವರೆಲ್ಲರೂ ಜಾತ್ಯತೀತ ಪಕ್ಷದ ವಾರಸುದಾರರು, ಇಲ್ಲವೇ ಪಾಲುದಾರರು.

ತಮಾಷೆ ವಿಷಯ ಎಂದರೆ, ಮಾತು ಮಾತಿಗೆ ಒಂದು ಕುಟುಂಬಕ್ಕೆ ಒಂದೇ ಸ್ಥಾನ ಎಂದು ಬಡಾಯಿ ಕೊಚ್ಚುವ ಪ್ರಧಾನಿ ಮೋದಿ ಅವರು, ಕುಟುಂಬದ ಸದಸ್ಯರೆಲ್ಲರೂ ಅಧಿಕಾರದಲ್ಲಿರುವ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂಬುದು ಪರಮಾಶ್ಚರ್ಯ. ಅಲ್ಲದೆ 75 ವರ್ಷ ದಾಟಿದವರಿಗೆ ತಮ್ಮ ಪಕ್ಷದಲ್ಲಿ ಅವಕಾಶವಿಲ್ಲ ಎನ್ನುವ ಪ್ರಧಾನಿಗೆ, ದೇವೇಗೌಡರ ವಯಸ್ಸಿನ ಅರಿವಿಲ್ಲವೇ? ಎಲ್ಲಾ ಬರೀ ಬೂಟಾಟಿಕೆ. ಮುಗ್ಧ ಜನರನ್ನು 'Fool' ಮಾಡುವ ಸಂಚು.

ಲೋಕಸಭೆಯ 28 ಸ್ಥಾನಗಳ ಪೈಕಿ ರಾಷ್ಟ್ರವನ್ನು ಆಳುತ್ತಿರುವ ಬಿಜೆಪಿ 25 ಸ್ಥಾನ ಹೊಂದಿದೆ. ಕಾಂಗ್ರೆಸ್ ಒಂದು, ಜೆಡಿಎಸ್ ಒಂದು ಸ್ಥಾನ ಪಡೆದಿದೆ. ಮಂಡ್ಯದಲ್ಲಿ ಸುಮಲತಾ ಲೋಕಸಭೆ ಸದಸ್ಯರಾಗಿದ್ದಾರೆ. ಅಂದರೆ 28ರ ಪೈಕಿ 25 ಸ್ಥಾನ ಪಡೆದಿರುವ ಬಿಜೆಪಿ ಕೇವಲ ಒಂದು ಸ್ಥಾನ ಪಡೆದಿರುವ ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಂಡಿರುವುದು ಎಂದರೆ, ಅದು ಬಿಜೆಪಿ ಹೀನಾಯ ಸ್ಥಿತಿಗೆ ಕನ್ನಡಿ ಹಿಡಿದಂತೆ. ರಾಜ್ಯದಲ್ಲಿ ಕಮಲ ಕಮರಿದೆ. ತೆನೆ ಹೊತ್ತ ಮಹಿಳೆ ಸೊರಗಿದ್ದಾರೆ. ಬರುವ ಲೋಕಸಭಾ ಚುನಾವಣೆ ಈ ಹೊಂದಾಣಿಕೆ ಫಲವಾಗಿ ಜೆಡಿಎಸ್ ಒಂದರ ಜೊತೆಗೆ ಒಂದೆರಡು ಸೀಟು ಗೆಲ್ಲಬಹುದು. ಆದರೆ ಹೊಂದಾಣಿಕೆ ಲಾಭದಿಂದ ಬಿಜೆಪಿ ಈಗಿರುವ ಸಂಖ್ಯೆಗಿಂತ ಹೆಚ್ಚುವ ಭರವಸೆ ಹೊಂದಿದೆಯೇ? ಏನಿದ್ದರೂ ಈಗಿರುವ ಸಂಖ್ಯೆ ಕುಸಿಯದಂತೆ ನೋಡಿಕೊಂಡರೆ ಅದೇ ದೊಡ್ಡ ಸಾಧನೆ. ಹೋಗಲಿ, ಅದನ್ನಾದರೂ ಸಾಧಿಸುತ್ತಾರೆಯೇ? ಖಂಡಿತ ಸಾಧ್ಯವಿಲ್ಲ. ಅದು ಅವರಿಗೂ ಗೊತ್ತು. ಅಂದ ಮೇಲೆ ಈ ಸತ್ಯಾಂಶ ತಿಳಿದೂ ಏಕೆ ಈ ಹೊಂದಾಣಿಕೆ ಎಂಬುದೇ ಯಕ್ಷಪ್ರಶ್ನೆ.

ಈ ಹೊಂದಾಣಿಕೆ ದೂರದೃಷ್ಟಿಯಿಂದಾಗಿರಬಹುದು. ಅಂದರೆ, ಈಗ ದೇಶದಲ್ಲೆಲ್ಲಾ 'ಮತ್ತೆ ಮೋದಿ' ಕೂಗಿದೆ. ಅವರು ಅಧಿಕಾರಕ್ಕೆ ಬಂದರೆ ಕುಮಾರಸ್ವಾಮಿ ರಾಜ್ಯಸಭೆ ಮೂಲಕ ಕೇಂದ್ರ ಮಂತ್ರಿಯಾಗುತ್ತಾರೆ. ಮಗ ನಿಖಿಲ್ ಕುಮಾರಸ್ವಾಮಿಯನ್ನು ಅವರ ಸ್ಥಾನದಲ್ಲಿ ವಿಧಾನಸಭೆಗೆ ಆಯ್ಕೆ ಮಾಡುವುದು. ಆಗ ಕುಟುಂಬದ ಎಲ್ಲರ ಆಸೆ ಈಡೇರಿದಂತಾಗುತ್ತದೆ. ಅಲ್ಲದೆ ಕರ್ನಾಟಕದಲ್ಲಿ ಲಿಂಗಾಯಿತರು ಮತ್ತು ಗೌಡರು ಒಂದಾಗುತ್ತಾರೆ. ಕಾಂಗ್ರೆಸ್ ವಿರುದ್ಧ ಪ್ರಬಲ ಮೈತ್ರಿಯಾಗಿ ಮತ್ತೆ ಅಧಿಕಾರಕ್ಕೆ ಬರಬಹುದೆಂಬ ಹುನ್ನಾರ ಇರಬಹುದು.

ಬಿ.ಎಸ್.ಯಡಿಯೂರಪ್ಪ ಬಿಜೆಪಿ-ಜೆಡಿಎಸ್ ಜತೆಗಿನ ಹೊಂದಾಣಿಕೆ ಫಲಶ್ರುತಿ ಏನಾಯಿತು ಎಂಬುದು ರಾಜ್ಯದ ಜನತೆಗೆ ಗೊತ್ತಿರುವ ವಿಚಾರ. ಆದೂ 'ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತಾಗುತ್ತದೆ' ಎಂದು ಸ್ಥಳೀಯ ಬಿಜೆಪಿ ನಾಯಕರುಗಳು ಭವಿಷ್ಯ ನುಡಿಯುತ್ತಿದ್ದಾರೆ.

ಜೆಡಿಎಸ್ ಅಧ್ಯಕ್ಷ ಇಬ್ರಾಹಿಂ ಅಪಸ್ವರಕ್ಕೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಏಕೆಂದರೆ ರಾಜಕೀಯದಲ್ಲೀಗ ಅವರಿಗೇ ಕಿಮ್ಮತ್ತಿಲ್ಲದೆ ಮೂಲೆ ಗುಂಪಾಗುತ್ತಿದ್ದಾರೆ. ಎಲ್ಲಾ ಪಕ್ಷಗಳ ಬಾಗಿಲು ಮುಚ್ಚಿವೆ. ಕೊನೆಗೆ 'ಹಳೇ ಗಂಡನ ಪಾದವೇ ಗತಿ' ಎಂದು ಕಾಂಗ್ರೆಸ್‌ಗೆ ಮರು ಸೇರ್ಪಡೆಯಾದರೂ ಆಶ್ಚರ್ಯವಿಲ್ಲ. ಇನ್ನು ಬಿಜೆಪಿಯಲ್ಲಿನ ಮಾಜಿ ಮುಖ್ಯಮಂತ್ರಿ, ಮಾಜಿ ಅಧ್ಯಕ್ಷ ಹಾಗೂ ಕೇಂದ್ರದ ಮಾಜಿ ಸಚಿವ ಸದಾನಂದ ಗೌಡರ ಮಾತಿಗೆ ಮನ್ನಣೆ ಎಲ್ಲಿದೆ. ಅವರಿದ್ದ ಈ ಮೂರೂ ಪ್ರಮುಖ ಹುದ್ದೆಗಳಲ್ಲಿ ಅವರು ಮಾಡಿದ ಸಾಧನೆ ಅಷ್ಟರಲ್ಲೇ ಇದೆ. ಹೀಗಾಗಿ ಅವರನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ.

ಇನ್ನು ಗ್ಯಾರಂಟಿಗಳ ಅನುಷ್ಠಾನದಲ್ಲಿ ಮುಳುಗಿ ತೇಲುತ್ತಿರುವ ಕಾಂಗ್ರೆಸ್ ರಾಜ್ಯದಲ್ಲೀಗ ತನಗೆ ಸರಿಸಾಟಿ ಯಾರೂ ಇಲ್ಲ ಎಂಬ ಭ್ರಮೆಯಲ್ಲಿದೆ. 'ಮತ್ತೊಮ್ಮೆ ಮೋದಿ' ಎಂಬ ಜನಾಭಿಪ್ರಾಯ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಣ್ಣಿಗೆ-ಕಿವಿಗೆ ಬೀಳುತ್ತಿದ್ದಂತೆ ಕಾಣುತ್ತಿಲ್ಲ.


ಬಿಜೆಪಿ ಹಾಗೂ ಜೆಡಿಎಸ್ ಹೊಂದಾಣಿಕೆಯ ಫಲವಾಗಿ ಕಾಂಗ್ರೆಸ್ ಸ್ಥಿತಿಯೇನು ಎಂಬುದು ಅರಿವಿದ್ದಂತಿಲ್ಲ. ಹಿಂದುಳಿದವರು, ಪರಿಶಿಷ್ಟರು, ಅಲ್ಪಸಂಖ್ಯಾತರು ಇತರರು 'ಕೈ' ಹಿಡಿಯುತ್ತಾರೆಂಬ ಭ್ರಮೆಯಲ್ಲಿ ಇದ್ದಂತೆ ಕಾಣುತ್ತದೆ. ಉದಾಹರಣೆಗೆ ಪಕ್ಷದಲ್ಲಿಯೇ ಹಿರಿಯರು ಹಾಗೂ ಇಂದಿರಾ ಕುಟುಂಬದ ಆಪ್ತರಲ್ಲಿ ಮೊದಲ ಸಾಲಿನಲ್ಲಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ಮೂಲೆಗುಂಪು ಮಾಡಿದ್ದನ್ನು ಹಿಂದುಳಿದ ಸಮಾಜ ಒಪ್ಪುವುದಿಲ್ಲ. ಲೋಕಸಭಾ ಚುನಾವಣೆ ನಂತರ ಹರಿಪ್ರಸಾದ್ ತಮ್ಮ ಪ್ರಭಾವ ಏನೆಂಬುದನ್ನು ಪ್ರದರ್ಶಿಸುವ ತವಕದಲ್ಲಿದ್ದಾರೆ. ಮತ್ತೊಂದು ಕಡೆ ಬರೀ ಬಿಟ್ಟಿ ಗ್ಯಾರಂಟಿಗಳಿಗೇ ಹಣ ಸುರಿದು, ಅಭಿವೃದ್ಧಿಗೆ ಕಾಸು ನೀಡದ ಬಗ್ಗೆ ಕಾಂಗ್ರೆಸ್‌ನ ಬಹುತೇಕ ಶಾಸಕರಲ್ಲಿ ಅಸಮಾಧಾನವೂ ಇದೆ. ಹೀಗೆ ರಾಜ್ಯದ ಮೂರೂ ಪಕ್ಷಗಳಲ್ಲೂ 'ಒಡಕಿನ ಧ್ವನಿ' ಎದ್ದಿದ್ದರೆ ಎಲ್ಲದಕ್ಕೂ ಮುಂಬರುವ ಲೋಕಸಭಾ ಚುನಾವಣೆಯೇ 'ದಿಕ್ಸೂಚಿ' ಆಗಬಹುದು. ■

ರಾಜ್ಯದ ಬರ ಸ್ಥಿತಿ ಬಗ್ಗೆ ವಾರದಲ್ಲಿ ಕೇಂದ್ರಕ್ಕೆ ವರದಿ

ಬರ ಪರಿಸ್ಥಿತಿ ಅಧ್ಯಯನ ನಂತರ ಮರಳಿದ ಕೇಂದ್ರ ತಂಡಗಳು

ಬೆಂಗಳೂರು, ಅ.9(ಕೆಎಂಶಿ)– ರಾಜ್ಯದಲ್ಲಿ ಬರಪೀಡಿತ ಪ್ರದೇಶಗಳ ಸ್ಥಿತಿಗತಿ ಪರಿಶೀಲನೆ ಮಾಡಿ ದೆಹಲಿಗೆ ಮರಳಿರುವ ಕೇಂದ್ರದ ಅಧ್ಯಯನ ತಂಡ ಇನ್ನೊಂದು ವಾರದಲ್ಲಿ ಕೇಂದ್ರ ಸರ್ಕಾರಕ್ಕೆ ತನ್ನ ವರದಿ ನೀಡಲಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇ ಗೌಡ ತಿಳಿಸಿದರು. ಕೇಂದ್ರ ತಂಡದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ತಂಡ ರಾಜ್ಯದ ಹಲವು ಜಿಲ್ಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕನ ಮಾಡಿದೆ. ಕುಡಿಯುವ ನೀರು, ಜಾನುವಾರುಗಳ ಮೇವು, ಮಳೆ-ಬೆಳೆ ಪರಿಸ್ಥಿತಿ ಅವಲೋಕನ ಮಾಡಿದ್ದಾರೆ ಎಂದರು.

ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ 4800 ಕೋಟಿ ರೂ. ಪರಿಹಾರ ಕೋರಿದ್ದೇವೆ. ಅವರು 2015ರ ಮಾಹಿತಿ ಆಧರಿಸಿ ಪರಿಹಾರ ನೀಡಿದರೆ ಕಡಿಮೆಯಾಗಲಿದೆ. ಆದರೂ ಒತ್ತಾಯ ಮಾಡುವುದನ್ನು ನಾವು ಮಾಡುತ್ತೇವೆ. ರಾಜ್ಯದ ಬರ ಪರಿಹಾರಕ್ಕೆ ಸಂಬಂಧಿಸಿದಂತೆ ತಂಡ ವರದಿ ನೀಡಿದ ನಂತರ ಕೇಂದ್ರ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಲಿದೆ ಎಂದು ನಂಬಿದ್ದೇವೆ. ವಿಳಂಬವಾದರೆ ಮತ್ತೆ ಸಚಿವ ಸಂಪುಟದಲ್ಲಿ ಚರ್ಚಿಸಿ



ಮುಂದಿನ ನಿರ್ಧಾರ ಮಾಡುತ್ತೇವೆ ಎಂದರು.

ಮತ್ತೆ ಕೇಂದ್ರ ಕೃಷಿ ಮತ್ತು ಗೃಹ ಸಚಿವರ ಭೇಟಿ ಸಮಯ ಕೇಳಿ ಪತ್ರ ಬರೆಯುತ್ತೇವೆ. ಸಮಯ ನೀಡಿದರೆ ಸಂಪುಟ ಉಪ ಸಮಿತಿಯ ಸದಸ್ಯರು ಭೇಟಿ ಮಾಡಲು ನಮ್ಮ ಮನವರಿಕೆ ಮಾಡುತ್ತೇವೆ.

ಬರಪರಿಸ್ಥಿತಿಗೆ ಸಂಬಂಧಿಸಿದ ಮನವಿ ಪತ್ರ ವಸ್ತುಸ್ಥಿತಿಯಿಂದ ಕೂಡಿದೆ ಎಂದು ಹೇಳಿದ್ದಾರೆ. ಸಣ್ಣ ರೈತರ ಅಂಕಿ-ಸಂಖ್ಯೆ ಕೇಳಿದ್ದು, ಅದನ್ನು ಒದಗಿಸಿಕೊಡುತ್ತೇವೆ ಎಂದರು.

ವಿಚಿತ್ರ ಹವಾಮಾನ ಪರಿಸ್ಥಿತಿ ಇದ್ದು, ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಮಳೆ ಸ್ಥಿತಿಗತಿಗಳ ಬಗ್ಗೆ ಸ್ಪಷ್ಟತೆ ಇಲ್ಲದ ವಾತಾವರಣ ಇದೆ. ಇದನ್ನು ಕೇಂದ್ರ ಗಂಭೀರವಾಗಿ ತೆಗೆದುಕೊಳ್ಳಬೇಕು. ಮನ್ರೇಗಾದಡಿ ಕೂಲಿ ಪಾವತಿ ಆಗಿಲ್ಲ. 475 ಕೋಟಿ ರೂ. ತಕ್ಷಣ ಬಿಡುಗಡೆ ಮಾಡಬೇಕು. ಕೂಲಿ ಹಣ ಬಾಕಿಯಿಂದ ಬಡವರು ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಫಸಲು ಭೀಮಾ ಯೋಜನೆ ರೈತರಿಗೆ ಪರಿಣಾಮಕಾರಿ ಅನುಕೂಲ ಆಗುತ್ತಿಲ್ಲ. ಬರ ಪರಿಹಾರ ಎಷ್ಟು ಕೊಡುತ್ತಾರೆ ಎಂಬುದನ್ನು ಕಾದು ನೋಡಬೇಕು. ನಾವು ಒತ್ತಡ ಹಾಕಬಹುದು, ಆದರೆ ಅಂತಿಮ ನಿರ್ಧಾರ ಅವರದ್ದೇ.195 ತಾಲೂಕುಗಳ ಜೊತೆಗೆ ಎರಡನೇ ಹಂತದಲ್ಲಿ ಕೇಂದ್ರದ ಮಾನದಂಡದಂತೆ ಮತ್ತೆ 21 ತಾಲೂಕುಗಳ ಬರ ಘೋಷಣೆಗೆ ಸಿದ್ಧತೆ ನಡೆಸಲಾಗಿದೆ.

ಅಕ್ಟೋಬರ್ ತಿಂಗಳ ಕೊನೆಯವರೆಗೆ ಮತ್ತೊಂದು ಹಂತದಲ್ಲಿ ಬರ ಪೀಡಿತ ತಾಲೂಕುಗಳ ಘೋಷಣೆಯನ್ನು ರಾಜ್ಯ ಸರ್ಕಾರಕ್ಕೆ ಅವಕಾಶ ಇದೆ. ಹೀಗಾಗಿ ಉಳಿದ 41 ತಾಲೂಕುಗಳ ಪೈಕಿ 11 ಜಿಲ್ಲೆಗಳ 21 ತಾಲೂಕುಗಳಲ್ಲಿ ಮುಂದಿನ ಎರಡು ದಿನಗಳಲ್ಲಿ ಬೆಳೆ ಸಮೀಕ್ಷೆ ನಡೆಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಈ ಮಾಹಿತಿ ಕೈಗೆ ಸಿಗುತ್ತಿದ್ದಂತೆ ಬರ ಘೋಷಣೆ ಮಾಡಲಾಗುವುದು. ಈ ಸಂಬಂಧ ಕೇಂದ್ರಕ್ಕೆ ಮತ್ತೊಂದು ಮನವಿ ಸಲ್ಲಿಸಲಾಗುವುದು. ಈ ಬಗ್ಗೆ ಈಗಾಗಲೇ ಕೇಂದ್ರ ಬರ ಅಧ್ಯಯನ ತಂಡದ ಜೊತೆಗೂ ಚರ್ಚೆ ನಡೆಸಲಾಗಿದೆ. ಅವರೂ ಸಹ ಮತ್ತೊಂದು ಮನವಿ ಸಲ್ಲಿಸಲು ಒಪ್ಪಿಗೆ ನೀಡಿದ್ದಾರೆ ಎಂದು ಅವರು ತಿಳಿಸಿದರು.

ಕೆಲವು ಬರ ಪೀಡಿತ ತಾಲೂಕುಗಳಲ್ಲಿ ಹಸಿರು ತೆನೆಗಳು ಕಾಣಿಸಿಕೊಳ್ಳುತ್ತಿವೆ. ಆದರೆ, ಬೆಳೆ ಮಾತ್ರ ರೈತರ ಕೈಸೇರುತ್ತಿಲ್ಲ. ಮನವಿ ಪತ್ರದಲ್ಲಿ ಇದನ್ನು ರಾಜ್ಯ ಸರ್ಕಾರ ಹಸಿರು ಬರ ಎಂದು ಉಲ್ಲೇಖಿಸಿತ್ತು.

ಹಲವೆಡೆ ಬರ ಪರಿಶೀಲನೆ ನಡೆಸಿದ ಕೇಂದ್ರ ಅಧ್ಯಯನ ತಂಡಕ್ಕೆ ವಿಜ್ಞಾನಿಗಳ ಮೂಲಕ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಡಲಾಗಿದೆ. ಹೀಗಾಗಿ ಹಸಿರು ಬರವನ್ನು ಕೇಂದ್ರ ತಂಡವೂ ಒಪ್ಪಿದೆ ಎಂಬ ಮಾಹಿತಿ ನೀಡಿದರು.

ಕೃಷಿ ಸಚಿವ ಚೆಲುವರಾಯಸ್ವಾಮಿ ಮಾತನಾಡಿ, ಹತ್ತು ದಿನಗಳಲ್ಲಿ ಪರಿಹಾರ ಸಿಗದೆ ಇದ್ದಲ್ಲಿ, ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ಮುಂದಿನ ನಿರ್ಧಾರ ಮಾಡುತ್ತೇವೆ. ರೈತರಿಗೆ ಅನ್ಯಾಯ ಆಗಲು ಬಿಡಲ್ಲ. ರೈತರ ಕಷ್ಟದಲ್ಲಿ ಸದಾ ಇರುತ್ತೇವೆ. ಕಾವೇರಿ ಅಚ್ಚುಕಟ್ಟಿನಲ್ಲಿ ರೈತರ ಬೆಳೆಗೆ ಸಮಸ್ಯೆ ಆಗದಂತೆ ನೀರು ಕೊಡುತ್ತಿದ್ದೇವೆ. ರೈತರ ಹಿತ ಕಾಪಾಡುತ್ತೇವೆ ಎಂದರು.

ಉದ್ಯೋಗಸ್ಥ ಮಹಿಳೆಯರ ವಸತಿನಿಲಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಅ.9– ಅಲ್ಪಸಂಖ್ಯಾತರ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್ ಹಾಗೂ ಪಾರ್ಸಿ ಉದ್ಯೋಗಸ್ಥ ಮಹಿಳೆಯರಿಂದ 2023–24ನೇ ಸಾಲಿಗೆ ಅಕ್ಟೋಬರ್ 3ರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.31 ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿಯನ್ನು ಜಿಲ್ಲಾಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮೌಲಾನ ಆಜಾದ್ ಭವನ ಶುಭ ಗಾರ್ಡನ್ ಪಕ್ಕದಂತಿನ ಮಾರಮ್ಮನ ದೇವಸ್ಥಾನ ಮೈಸೂರು ಇಲ್ಲಿ ಪಡೆಯ ಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ 0821-2422088 ಅಥವಾ ಮೊ.ಸಂ:74833 98572 ಅನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲೂಕು ವಿಸ್ತರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಸ್ರೇಲ್‌ನಿಂದ ಗಾಜಾ ಮೇಲೆ ತೀವ್ರ ದಾಳಿ: 1,100ಕ್ಕೂ ಅಧಿಕ ಮಂದಿ ಬಲಿ



ಜೆರುಸಲೇಂ: ಇಸ್ರೇಲ್ ಸೈನಿಕರು ಎನ್‌ಕ್ಲೇವ್‌ನ ಹಮಾಸ್ ಆಡಳಿತಗಾರರ ಮಿಲಿಟರಿ ಮತ್ತು ಆಡಳಿತ ಸಾಮರ್ಥ್ಯಗಳನ್ನು ನಾಶ ಮಾಡುವುದಾಗಿ ಯುದ್ಧ ಘೋಷಿಸಿದ ನಂತರ ಸೋಮವಾರ ಗಾಜಾ ಪಟ್ಟಿಯ ಮೇಲೆ ತನ್ನ ಬಾಂಬ್ ದಾಳಿಯನ್ನು ತೀವ್ರಗೊಳಿಸಿದೆ. ದಕ್ಷಿಣ ಇಸ್ರೇಲ್‌ನ ಪ್ರದೇಶಗಳಿಂದ ಗಾಜಾ ಬಂದೂಕುಧಾರಿಗಳನ್ನು ಹೊರಹಾಕಲು ಇಸ್ರೇಲಿ ಸೈನಿಕರು ಯುದ್ಧ ತೀವ್ರಗೊಳಿಸಿದ್ದಾರೆ.

ಇಸ್ರೇಲ್‌ನಲ್ಲಿ ಕನಿಷ್ಠ 700 ಜನರು ಕೊಲ್ಲಲ್ಪಟ್ಟಿದ್ದಾರೆ. ದೇಶವು ದಶಕಗಳಲ್ಲಿ ಅನುಭವಿಸದ ಪ್ರಮಾಣದಲ್ಲಿ ದಿಗ್ಭ್ರಮೆಗೊಳಿಸುವ ದಾಳಿಗೊಳಗಾಗಿದ್ದು, ಗಾಜಾದಲ್ಲಿ 400ಕ್ಕೂ ಹೆಚ್ಚು ಜನರು ಕೊಲ್ಲಲ್ಪಟ್ಟಿದ್ದಾರೆ. ಪ್ಯಾಲೇಸ್ಟೈನಿಯನ್ ಉಗ್ರಗಾಮಿ ಗುಂಪುಗಳು ಇಸ್ರೇಲ್‌ನ 130ಕ್ಕೂ ಹೆಚ್ಚು ಜನರನ್ನು ಬಂಧಿಸಿವೆ.

ಹಮಾಸ್ ಗಾಜಾದಿಂದ ಬೃಹತ್ ಆಕ್ರಮಣ ಪ್ರಾರಂಭಿಸಿದ 2 ದಿನಗಳ ನಂತರ, ಇಸ್ರೇಲಿ ಪಡೆಗಳು ಇನ್ನೂ ಹಲವಾರು ಸ್ಥಳಗಳಲ್ಲಿ ಅಡಗಿರುವ ಉಗ್ರಗಾಮಿ ಗಳೊಂದಿಗೆ ಹೋರಾಡುತ್ತಿವೆ. ಇಂದು ದಕ್ಷಿಣ ಇಸ್ರೇಲ್‌ನಲ್ಲಿ ಏಳರಿಂದ ಎಂಟು ಸ್ಥಳಗಳಲ್ಲಿ ಹಮಾಸ್ ವಿರುದ್ಧ ಹೋರಾಡುತ್ತಿದೆ ಎಂದು ಮಿಲಿಟರಿ ಮೂಲಗಳು ಹೇಳಿವೆ.

ಸೇನಾ ವಕ್ತಾರ ರಿಚರ್ಡ್ ಹೆಕ್ಟ್, ಅತಿಕ್ರಮಣವನ್ನು ಹಿಮ್ಮೆಟ್ಟಿಸಲು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದೆ. ಗಡಿಯಲ್ಲಿ ಇನ್ನೂ ಅನೇಕ ಉಲ್ಲಂಘನೆಗಳಿವೆ. ಹೆಚ್ಚಿನ ಹೋರಾಟಗಾರರು ಮತ್ತು ಶಸ್ತ್ರಾಸ್ತ್ರಗಳನ್ನು ತರಲು ಹಮಾಸ್ ಯತ್ನಿಸಬಹುದಾಗಿದೆ. ಇಸ್ರೇಲ್, ಗಾಜಾದಲ್ಲಿ 1,000ಕ್ಕೂ ಹೆಚ್ಚು ಗುರಿಗಳ ಮೇಲೆ ದಾಳಿ ನಡೆಸಿದೆ. ಎನ್‌ಕ್ಲೇವ್‌ನ ಈಶಾನ್ಯ ಮೂಲೆಯಲ್ಲಿರುವ ಬೀಟ್ ಹನೌನ್ ಪಟ್ಟಣದ ಹೆಚ್ಚಿನ ಭಾಗವನ್ನು ನೆಲಸಮಗೊಳಿಸಲಾಗಿದೆ. ಪಟ್ಟಣವನ್ನು ಹಮಾಸ್ ದಾಳಿಗೆ ವೇದಿಕೆಯಾಗಿ ಬಳಸಿಕೊಳ್ಳುತ್ತಿದೆ ಎಂದು ಇಸ್ರೇಲಿ ರಿಯರ್ ಅಡ್ಮ್ ಡೇನಿಯಲ್ ಹಗರಿ ಸುದ್ದಿಗಾರರಿಗೆ ತಿಳಿಸಿದರು.

ಹಮಾಸ್ ಬಂದೂಕುಧಾರಿಗಳು ಗಂಟೆಗಟ್ಟಲೆ ದಾಳಿ ಮಾಡಿದರು, ನಾಗರಿಕರನ್ನು ಗುಂಡಿಕ್ಕಿ ಕೊಂದರು. ಪಟ್ಟಣಗಳಲ್ಲಿ, ಹೆದ್ದಾರಿಗಳಲ್ಲಿ ಮತ್ತು ಮರುಭೂಮಿಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದ ಟೆಕ್ನೋ ಸಂಗೀತ ಉತ್ಸವದಲ್ಲಿ ಜನರ ಮೇಲೆ ದಾಳಿ ನಡೆದಿದೆ. ಸುಮಾರು 260 ಶವಗಳನ್ನು ಹೊರ ತೆಗೆಯಲಾಗಿದೆ. ಆ ಸಂಖ್ಯೆಯು ಹೆಚ್ಚಾಗುವ ನಿರೀಕ್ಷೆಯಿದೆ.

ಶನಿವಾರದ ಆರಂಭಿಕ ಆಕ್ರಮಣದಲ್ಲಿ 1,000 ಹಮಾಸ್ ಹೋರಾಟಗಾರರು ಭಾಗವಹಿಸಿದ್ದರು ಎಂದು ಇಸ್ರೇಲಿ ಮಿಲಿಟರಿ ಅಂದಾಜಿಸಿದೆ. ಇಸ್ರೇಲ್‌ನ ಆಕ್ರಮಣ ಮತ್ತು ಗಾಜಾದ ದಿಗ್ಬಂಧನದ ಅಡಿಯಲ್ಲಿ ಹೆಚ್ಚುತ್ತಿರುವ ಪ್ಯಾಲೇಸ್ಟಿನಿಯನ್ ನೋವಿಗೆ ಪ್ರತಿಕ್ರಿಯೆಯಾಗಿ ದಾಳಿಯನ್ನು ಪ್ರಾರಂಭಿಸಿದೆ.

ಇಸ್ರೇಲ್ ಮೇಲಿನ ರಾಕೆಟ್ ದಾಳಿಯಲ್ಲಿ ಕೇರಳ ಮೂಲದ ಮಹಿಳೆಗೆ ಗಾಯ

ಜೆರುಸಲೇಂ: ಪ್ಯಾಲೇಸ್ಟೈನ್ ಉಗ್ರಗಾಮಿ ಗುಂಪು ಹಮಾಸ್ ಉತ್ತರ ಇಸ್ರೇಲ್‌ನ ಅಶ್ಕೆಲೋನ್ ಮೇಲೆ ರಾಕೆಟ್ ದಾಳಿ ನಡೆಸಿದ್ದು ಈ ದಾಳಿಯಲ್ಲಿ ಭಾರತೀಯ ಮೂಲದ ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ರಾಕೆಟ್ ದಾಳಿಯಲ್ಲಿ ಕೇರಳ ಮೂಲದ ಶೀಜಾ ಆನಂದ್‌ರ ಕೈ ಮತ್ತು ಕಾಲಿಗೆ ಗಾಯಗಳಾಗಿದ್ದು, ತಕ್ಷಣ ಅವರಿಗೆ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ನಂತರ ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸದ್ಯ ಅವರ ಸ್ಥಿತಿ ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿವೆ

ಭಾರತೀಯ ರಾಯಭಾರಿ ಕಚೇರಿ ಆಕೆಯನ್ನು ಸಂಪರ್ಕಿಸಿದೆ. ಇನ್ನು ಕೇರಳದ ಕಣ್ಣೂರು ಜಿಲ್ಲೆಯಲ್ಲಿರುವ ಆಕೆ ಕುಟುಂಬದೊಂದಿಗೂ ಸಂಪರ್ಕದಲ್ಲಿದೆ ಅಲ್ಲಿ ಆಕೆ ಸುರಕ್ಷಿತರಾಗಿದ್ದಾರೆ ಎಂದು ಆಕೆಯ ಕುಟುಂಬಕ್ಕೆ ತಿಳಿಸಲಾಗಿದೆ.

ಪ್ರದೀಪ್ ಈಶ್ವರ್ ಚಿಕ್ಕಬಳ್ಳಾಪುರದ ಮಾನ ಮರ್ಯಾದೆ ಕಳೆದಿದ್ದಾರೆ: ಡಾ.ಸುಧಾಕರ್

ಬಿಗ್ ಬಾಸ್‌ಗೆ ಹೋದ ಮೊದಲ ಶಾಸಕ...!




ಬೆಂಗಳೂರು: ಕನ್ನಡ 'ಬಿಗ್ ಬಾಸ್ ಸೀಸನ್ 10' ಆರಂಭ ಆಗಿದೆ. ವಿವಿಧ ಸ್ಪರ್ಧಿಗಳು ದೊಡ್ಮನೆಗೆ ಎಂಟ್ರಿ ನೀಡಿದ್ದಾರೆ. ಒಂದು ದಿನ ತಡವಾಗಿ ಚಿಕ್ಕಬಳ್ಳಾಪುರ ಕ್ಷೇತ್ರದ ಶಾಸಕ ಪ್ರದೀಪ್ ಈಶ್ವರ್ ಬಿಗ್ ಬಾಸ್ ಮನೆಗೆ ಕಾಲಿಟ್ಟಿದ್ದಾರೆ.

ಅವರ ಎಂಟ್ರಿ ಅನೇಕರಿಗೆ ಅಚ್ಚರಿ ತಂದಿದೆ. ಎಂಎಲ್‌ಎ ಆಗಿ ದೊಡ್ಮನೆಗೆ ತೆರಳಿರುವ ಬಗ್ಗೆ ಕೆಲವರು ಅಪಸ್ವರ ತೆಗೆದಿದ್ದಾರೆ. ಅವರು ಬಿಗ್ ಬಾಸ್ ಮನೆಗೆ ಕೆಲವು ದಿನಗಳ ಅತಿಥಿಯಾಗಿ ಹೋಗಿದ್ದಾರೆಯೋ ಅಥವಾ ಉಳಿದ ಸ್ಪರ್ಧಿಗಳಂತೆಯೇ ಅವರು ಇರುತ್ತಾರಾ ಎನ್ನುವ ಪ್ರಶ್ನೆ ಅನೇಕರಲ್ಲಿ ಮೂಡಿದೆ.

ಈ ವರ್ಷ ವಿಧಾನಸಭೆ ಚುನಾವಣೆಯಲ್ಲಿ ಪ್ರದೀಪ್ ಈಶ್ವರ್ ಪ್ರಬಲ ಪ್ರತಿಸ್ಪರ್ಧಿ ಬಿಜೆಪಿಯ ಡಾ. ಸುಧಾಕರ್ ಅವರನ್ನು ಸೋಲಿಸಿದ್ದಾರೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಡಾ.ಸುಧಾಕರ್ ಪ್ರದೀಪ್ ಈಶ್ವರ್ ಅವರನ್ನು ಲೇವಡಿ ಮಾಡಿದ್ದಾರೆ.

ಒಬ್ಬ ರಾಜಕಾರಣಿ, ಜನಪ್ರತಿನಿಧಿಯಾಗಿ ಈ ರೀತಿಯ ಶೋಗೆ ಹೋಗಿದ್ದು ಇದೆ ಮೊದಲು, ಬಿಗ್ ಬಾಸ್‌ಗೆ ಹೋಗುವ ಮೂಲಕ ನಗೆ ಪಾಟೀಲಿಗೀಡಾಗಿದ್ದಾರೆ. ಒಬ್ಬ ಎಂಎಲ್‌ಎ ಬಿಗ್ ಬಾಸ್‌ಗೆ ಹೋಗಿ ಕುಣಿದಾಡಿರು ವುದು ಇದೇ ಮೊದಲು. ಇದೊಂದು ನಾಚಿಕೆಗೇಡಿನ ಸಂಗತಿ. ಬಿಗ್ ಬಾಸ್‌ನಲ್ಲಿ ಭಾಗಿಯಾಗುವ ಮೂಲಕ ಚಿಕ್ಕಬಳ್ಳಾಪುರ ಕ್ಷೇತ್ರದ ಮಾನ ಮರ್ಯಾದೆ ಕಳೆದಿದ್ದಾರೆ ಎಂದು ಸುಧಾಕರ್ ವ್ಯಂಗ್ಯವಾಡಿದರು.

ಆಯ್ಕೆ ತಪ್ಪು ಎಂದು ಜನರಿಗೆ ಮನವರಿಕೆಯಾಗಿದೆ: ಚಿಕ್ಕಬಳ್ಳಾಪುರ ಕ್ಷೇತ್ರದ ಹೆಸರನ್ನು ಹಾಳು ಮಾಡಿದ್ದಾರೆ. ಇಂತಹ ವ್ಯಕ್ತಿಯನ್ನು ಆಯ್ಕೆ ಮಾಡಿದ ಜನರಿಗೆ ಆಗಲೇ ಮನವರಿಕೆಯಾಗಿದೆ. ನಾವು ತಪ್ಪು ಮಾಡಿದ್ದೇವೆ ಎಂದು ಜನರಿಗೆ ಅರಿವಾಗಿದೆ. ಮುಂದಿನ ದಿನಗಳಲ್ಲಿ ಅವರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದರು.



ಮೈಸೂರು ತಾಲೂಕು ನಾಯಕ ಸಂಘದ ವತಿಯಿಂದ ಆಯೋಜಿಸಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ನೂತನ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರ ಸನ್ಮಾನ ಸಮಾರಂಭವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು. ಈ ವೇಳೆ ಮೇಯರ್ ಶಿವಕುಮಾರ್, ಜಿಲ್ಲಾ ನಾಯಕ ಸಂಘದ ಅಧ್ಯಕ್ಷ ರಾಮಚಂದ್ರ, ಕರಾಮುವಿ ಪ್ರಾಧ್ಯಾಪಕ ಡಾ.ಮಂಜುನಾಥ್, ತಾಲೂಕು ಅಧ್ಯಕ್ಷ ಮಹಾದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ಉಪಾಧ್ಯಕ್ಷರಾದ ಜವರನಾಯಕ, ವೆಂಕಟಯ್ಯ, ಖಜಾಂಚಿ ಮರಿಸ್ವಾಮಿನಾಯಕ, ಪದಾಧಿಕಾರಿಗಳು, ನೂತನ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಉಪಸ್ಥಿತರಿದ್ದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಅ.9– ಹೂಟಗಳ್ಳಿ ಉಪವಿಭಾಗ ವ್ಯಾಪ್ತಿಯ 66/11 ಕೆ.ವಿ.ಬೋಗಾದಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ ಬಾಪೂಜಿ ವಿದ್ಯುತ್ ಮಾರ್ಗದಲ್ಲಿ ತುರ್ತು ನಿರ್ವಹಣಾ ಕೆಲಸದ ನಿಮಿತ್ತ ಅಕ್ಟೋಬರ್ 10 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಬ್ಯಾಂಕ್ ಕಾಲೋನಿ, ಬಾಪೂಜಿ ಲೇಔಟ್, ರಿಂಗ್‌ರಸ್ತೆ ಸುತ್ತಮುತ್ತಲಿನ ಪ್ರದೇಶ, ರೈಲ್ವೇ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಪಂಚ ರಾಜ್ಯಗಳ ಚುನಾವಣೆ ವೇಳಾ ಪಟ್ಟಿ ಪ್ರಕಟ

ಛತ್ತೀಸ್‌ಘಡದಲ್ಲಿ 2 ಹಂತ, ಮಿಜೋರಾಂ, ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣದಲ್ಲಿ ಒಂದೇ ಹಂತದಲ್ಲಿ ಮತದಾನ

ನವದೆಹಲಿ: ಕೇಂದ್ರ ಚುನಾವಣಾ ಆಯೋಗ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆಗೆ ದಿನಾಂಕ ಘೋಷಣೆ ಮಾಡಿದ್ದು, ಡಿಸೆಂಬರ್ 3ರಂದು ಫಲಿತಾಂಶ ಪ್ರಕಟವಾಗಲಿದೆ.



ರಾಜೀವ್‌ಕುಮಾರ್

ಛತ್ತೀಸ್‌ಗಢ, ಮಧ್ಯಪ್ರದೇಶ, ಮಿಜೋರಾಂ, ರಾಜಸ್ಥಾನ ಮತ್ತು ತೆಲಂಗಾಣ ರಾಜ್ಯಗಳ ವಿಧಾನಸಭೆ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆಗೆ ದಿನಾಂಕ ಘೋಷಣೆ ಮಾಡಿದರು.

ಮಿಜೋರಾಂ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ತೆಲಂಗಾಣದಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಲಿದ್ದು, ನಕ್ಸಲ್ ಸಂಘರ್ಷ ಪೀಡಿತ ಛತ್ತೀಸ್ ಘಡದಲ್ಲಿ ಮಾತ್ರ 2 ಹಂತದಲ್ಲಿ ಮತದಾನ ನಡೆಸಲು ಚುನಾವಣಾ ಆಯೋಗ ಯೋಜಿಸಿದೆ. ಅದರಂತೆ ಮಿಜೋರಾಂನಲ್ಲಿ ನವೆಂಬರ್ 7ರಂದು ಮತದಾನ ನಡೆಯಲಿದ್ದು, ಛತ್ತೀಸ್ ಘಡದಲ್ಲಿ ನವೆಂಬರ್ 7 ಮತ್ತು 17ರಂದು ಎರಡು ಹಂತದಲ್ಲಿ ಮತದಾನ ನಡೆಯಲಿದೆ. ಉಳಿದಂತೆ ಮಧ್ಯಪ್ರದೇಶದಲ್ಲಿ ನವೆಂಬರ್ 17 ರಂದು, ರಾಜಸ್ಥಾನದಲ್ಲಿ ನವೆಂಬರ್ 23ರಂದು ಮತ್ತು ತೆಲಂಗಾಣದಲ್ಲಿ ನವೆಂಬರ್ 30ರಂದು ಮತದಾನ ನಡೆಯಲಿದೆ. ಎಲ್ಲ ರಾಜ್ಯಗಳ ಚುನಾವಣಾ ಫಲಿತಾಂಶ ಡಿಸೆಂಬರ್ 3ರಂದು ಪ್ರಕಟವಾಗಲಿದೆ ಎಂದು ಕೇಂದ್ರ ಚುನಾವಣಾ ಆಯೋಗ ಮಾಹಿತಿ ನೀಡಿದೆ.



ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು, ಮಿಜೋರಾಂ, ಛತ್ತೀಸ್‌ಗಢ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ತೆಲಂಗಾಣದಲ್ಲಿ ನಡೆಯುವ ಚುನಾವಣೆಯಲ್ಲಿ ಒಟ್ಟು 8.2 ಕೋಟಿ ಪುರುಷ ಮತ್ತು 7.8 ಕೋಟಿ ಮಹಿಳಾ ಮತದಾರರು ಇರಲಿದ್ದಾರೆ. ಈ ಪೈಕಿ 60.2 ಲಕ್ಷ ಮಂದಿ ಮೊದಲ ಬಾರಿಗೆ ಮತದಾರರಾಗಿದ್ದಾರೆ ಎಂದು ಹೇಳಿದರು.



ಅಂತೆಯೇ ಐದು ವಿಧಾನಸಭಾ ಚುನಾವಣೆಗೆ ಮುನ್ನ ನಾವು ರಾಜಕೀಯ ಪಕ್ಷಗಳು ಮತ್ತು ಜಾರಿ ಸಂಸ್ಥೆಗಳು ಸೇರಿದಂತೆ ಎಲ್ಲಾ ಮಧ್ಯಸ್ಥಗಾರರು, ರಾಜಕೀಯ ಪಕ್ಷಗಳ ವಕ್ತಾರರನ್ನು ಭೇಟಿ ಮಾಡಿ ಚರ್ಚಿಸಿದ್ದೇವೆ ಎಂದು ಹೇಳಿದ್ದಾರೆ. ಚುನಾವಣಾ ಆಯುಕ್ತರು ನೀಡಿರುವ ಮಾಹಿತಿಯಂತೆ ಮಿಜೋರಾಂ ವಿಧಾನಸಭೆಯ ಅವಧಿ ಡಿಸೆಂಬರ್ 17ಗೆ ಕೊನೆಗೊಳ್ಳಲಿದ್ದು, ಛತ್ತೀಸ್‌ಘಡ

ಡಿಸೆಂಬರ್ 3ರಂದು ಫಲಿತಾಂಶ

ವಿಧಾನಸಭೆ ಅವಧಿ ಜನವರಿ 3, ಮಧ್ಯಪ್ರದೇಶ ವಿಧಾನಸಭೆ ಅವಧಿ ಜನವರಿ 8, ರಾಜಸ್ಥಾನ ವಿಧಾನಸಭೆ ಅವಧಿ ಜನವರಿ 14 ಮತ್ತು ತೆಲಂಗಾಣ ವಿಧಾನಸಭೆ ಅವಧಿಯು ಜನವರಿ 18ಕ್ಕೆ ಕೊನೆಗೊಳ್ಳಲಿದೆ.

ಮಧ್ಯಪ್ರದೇಶದ ಒಟ್ಟು 230 ಸ್ಥಾನಗಳು, ಛತ್ತೀಸ್‌ಗಢದ– 90 ಸ್ಥಾನಗಳು, ರಾಜಸ್ಥಾನದ 200 ಸ್ಥಾನಗಳು, ತೆಲಂಗಾಣದ 119 ಸ್ಥಾನಗಳು ಮತ್ತು ಮಿಜೋರಾಂನ 90 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಮತದಾರರು ಅಕ್ಟೋಬರ್ 17ರಿಂದ ನವೆಂಬರ್ 30ರವರೆಗೆ ಮತದಾರರ ಪಟ್ಟಿಯಲ್ಲಿ ವಿವರಗಳನ್ನು ನವೀಕರಿಸಬಹುದು ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ತಿಳಿಸಿದ್ದಾರೆ. ಅಂತೆಯೇ 5 ರಾಜ್ಯಗಳಲ್ಲಿ 1.77 ಲಕ್ಷ ಮತಗಟ್ಟೆಗಳು ಮತ್ತು 1.01 ಲಕ್ಷ ಮತ ಗಟ್ಟೆಗಳು ವೆಬ್ ಕಾಸ್ಟಿಂಗ್ ಸೌಲಭ್ಯವನ್ನು ಹೊಂದಿವೆ ಎಂದು ಅವರು ಮಾಹಿತಿ ನೀಡಿದರು.

ಚುನಾವಣೆ ನಡೆಯುವ ಈ ಐದು ರಾಜ್ಯಗಳಲ್ಲಿ 940 ಕ್ಕೂ ಹೆಚ್ಚು ಅಂತರ–ರಾಜ್ಯ ಗಡಿ ಚೆಕ್ ಪೋಸ್ಟ್‌ಗಳನ್ನು ನಿರ್ಮಿಸಲಾಗುತ್ತಿದ್ದು, ಆ ಮೂಲಕ ನಾವು ಯಾವುದೇ ಅಕ್ರಮ ನಗದು, ಮದ್ಯ, ಉಚಿತ ವಸ್ತುಗಳು ಮತ್ತು ಮಾದಕ ವಸ್ತುಗಳ ಗಡಿಯಾಚೆಗಿನ ಚಲನೆಯನ್ನು ಪರಿಶೀಲಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಸರಿಯಾದ ಸಮಯಕ್ಕೆ ಜಮ್ಮು–ಕಾಶ್ಮೀರದಲ್ಲಿ ಚುನಾವಣೆ ನಡೆಯಲಿದೆ

ನವದೆಹಲಿ: ಜಮ್ಮು ಮತ್ತು ಕಾಶ್ಮೀರದಲ್ಲಿನ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರಿಯಾದ ಸಮಯಕ್ಕೆ ಚುನಾವಣೆ ನಡೆಸಲಾಗುವುದು ಎಂದು ಚುನಾವಣಾ ಆಯೋಗ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ರಾಜೀವ್‌ಕುಮಾರ್, ಭದ್ರತಾ ಪರಿಸ್ಥಿತಿ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿ ನಡೆಯುತ್ತಿರುವ ಇತರ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಆಯೋಗಕ್ಕೆ ಇದು 'ಸರಿಯಾದ ಸಮಯ' ಎಂದು ಅನ್ನಿಸಿದಾಗ ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣೆ ನಡೆಸಲಾಗುವುದು ಎಂದರು.

ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಅವರು, ಉಚಿತ ಯೋಜನೆಗಳ ಘೋಷಣೆಗಳು ಯಾವಾಗಲೂ ಜನಪ್ರಿಯತೆಯ ಅಂಶವನ್ನು ಒಳಗೊಂಡಿರುತ್ತವೆ ಮತ್ತು ಈ ಉಚಿತಗಳಿಗೆ ಹಣ ಎಲ್ಲಿಂದ ಬರುತ್ತದೆ ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಸಾರ್ವಜನಿಕರಿಗೆ ಇದೆ ಎಂದು ಹೇಳಿದರು.

2024ರ ಲೋಕಸಭಾ ಚುನಾವಣೆಗೆ ಪಂಚ ರಾಜ್ಯಗಳ ಚುನಾವಣೆಯು ಸೆಮಿ ಫೈನಲ್ಸ್ ಎಂದೇ ಪರಿಗಣಿಸಲಾಗಿದೆ. ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆಗೂ ಮುನ್ನ ನಡೆಯಲಿರುವ ವಿಧಾನಸಭೆ ಚುನಾವಣೆ ಇದಾಗಿದೆ.

ನ.7ರಿಂದ 30ರವರೆಗೆ ಪಂಚರಾಜ್ಯಗಳ ಚುನಾವಣೆ ನಡೆಯಲಿದ್ದು, ಡಿ.3ರಂದು ಮತ ಎಣಿಕೆ ನಡೆಸಲಾಗುವುದು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಸಿಎ ನಿವೇಶನ ಮಂಜೂರಾತಿ ಪತ್ರ; ಸಿಎಂ ಭರವಸೆ



ಮೈಸೂರು,ಅ.9(ಆರ್‌ಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಪತ್ರಿಕಾ ಭವನ ನಿರ್ಮಿಸಲು ಮುಡಾದಿಂದ ಮಂಜೂರಾಗಿರುವ ಸಿಎ ನಿವೇಶನದ ಮಂಜೂರಾತಿ ಪತ್ರವನ್ನು ಕೊಡಿಸುವುದಾಗಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಶನಿವಾರ ಮಧ್ಯಾಹ್ನ ಶಾರದಾದೇವಿ ನಗರ ನಿವಾಸದಲ್ಲಿ ಅವರನ್ನು ಭೇಟಿ ಮಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ನೇತೃತ್ವದ ಪದಾಧಿಕಾರಿಗಳ ನಿಯೋಗವು ಈ ಸಂಬಂಧ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿತು. ಈಗಾಗಲೇ ಚಾಮುಂಡಿ ಬೆಟ್ಟದ ತಪ್ಪಲಿನ ಮೈಸೂರು ರೇಸ್ ಕೋರ್ಸ್‌ಗೆ ಹೊಂದಿಕೊಂಡಂತಿರುವ ಮುಡಾ ಅನುಮೋದಿತ ಪ್ರತಿಷ್ಠಿತ ವಸತಿ ಬಡಾವಣೆಯಲ್ಲಿ ಲಭ್ಯವಿರುವ 9 ಗುಂಟೆ ಮೂಲಸೌಕರ್ಯ (ಸಿಎ) ನಿವೇಶನವನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಪತ್ರಿಕಾ ಭವನ ನಿರ್ಮಿಸಲು ಮಂಜೂರು ಮಾಡಿದ್ದು, ಮೊದಲ ಕಂತಿನ 2 ಲಕ್ಷ ರೂ.ಗಳನ್ನು ಸಂಘದಿಂದ ಪಡೆದುಕೊಂಡಿದೆ.

ಮುಡಾ ಸಿಎ ನಿವೇಶನ ಹಂಚಿಕೆ ಉಪ ಸಮಿತಿಯಲ್ಲಿ ಅನುಮೋದನೆಯಾಗಿ, ನಂತರ ಪ್ರಾಧಿಕಾರದ ಸಭೆಯಲ್ಲೂ ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಮಂಜೂರು ಮಾಡಲು ಅಂತಿಮ ನಿರ್ಧಾರವಾಗಿ ನಗರ ಯೋಜನಾ ಶಾಖೆಯಲ್ಲಿ ಮಂಜೂರಾತಿ ಪತ್ರವನ್ನೂ ಸಿದ್ಧಪಡಿಸಲಾಗಿದೆ. ಆದರೆ, ಅದರ ಪ್ರತಿಯನ್ನು ಸಂಘಕ್ಕೆ ಇನ್ನು ಹಸ್ತಾಂತರಿಸಿಲ್ಲ ಎಂಬುದನ್ನು, ನಿಯೋಗವು ಸಿದ್ದರಾಮಯ್ಯರ ಗಮನಕ್ಕೆ ತಂದಿತು.


ನಿಮ್ಮಿಂದಲೇ ಪತ್ರಿಕಾ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಕಾಮಗಾರಿ ಆರಂಭಿಸಿ, ಅಂತಿಮವಾಗಿ ಕಟ್ಟಡವನ್ನು ಉದ್ಘಾಟಿಸಬೇಕೆಂದು ಸಂಘ ಇಚ್ಛಿಸಿದೆ. ತಾವು ಮುಡಾ ಆಯುಕ್ತರಿಗೆ ಮಂಜೂರಾತಿ ಪತ್ರ ಹಸ್ತಾಂತರಿಸುವಂತೆ ನಿರ್ದೇಶನ ನೀಡಬೇಕು. ಪತ್ರಿಕಾ ಭವನ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನವನ್ನೂ ಕೊಡಿಸಿಕೊಡಬೇಕೆಂದು ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಮಂಜೂರಾತಿ ಪತ್ರ ಹಸ್ತಾಂತರಿಸುವಂತೆ ಮುಡಾ ಆಯುಕ್ತರಿಗೆ ಸೂಚನೆ ನೀಡುತ್ತೇನೆ. ನಿಯಮಾನುಸಾರ ಸರ್ಕಾರದಿಂದ ಪತ್ರಿಕಾ ಭವನ ನಿರ್ಮಾಣಕ್ಕೆ ಅಗತ್ಯ ಅನುದಾನವನ್ನೂ ಕೊಡಿಸುವುದಾಗಿ ಇದೇ ಸಂದರ್ಭ ಭರವಸೆ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ, ಕಾರ್ಯದರ್ಶಿ ಪಿ.ರಂಗಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯ ಆರ್.ಕೃಷ್ಣ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ, ಛಾಯಾಗ್ರಾಹಕ ಸುತ್ತೂರು ನಂಜುಂಡನಾಯಕ ಹಾಗೂ ಇತರರು ಉಪಸ್ಥಿತರಿದ್ದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ

ಮೈಸೂರಲ್ಲಿ ಮುಂದುವರಿದ ಕಾವೇರಿ ಕ್ರಿಯಾ ಸಮಿತಿ ಧರಣಿ



ಮೈಸೂರು, ಅ. 9(ಆರ್‌ಕೆ)– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಸರ್ಕಾರದ ಕ್ರಮ ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಕಾವೇರಿ ಕ್ರಿಯಾ ಸಮಿತಿಯ ಧರಣಿ 8ನೇ ದಿನವಾದ ಇಂದು ಮೈಸೂರಿನ ದೊಡ್ಡ ಗಡಿಯಾರದ ಬಳಿ ಮುಂದುವರೆದಿದೆ. ಸಮಿತಿ ಅಧ್ಯಕ್ಷ ಎಸ್. ಜಯಪ್ರಕಾಶ್ ನೇತೃತ್ವದಲ್ಲಿ ನಡೆದ ಧರಣಿಯಲ್ಲಿ ಕಬಿನಿ ಜಲಾಶಯ ಮತ್ತು ಕೆಆರ್‌ಎಸ್‌ನಿಂದ 5 ಸಾವಿರ ಕ್ಯುಸೆಕ್‌ಗೂ ಹೆಚ್ಚಿನ ಪ್ರಮಾಣದ ನೀರನ್ನು ಹರಿಸುತ್ತಿರುವುದರಿಂದ ಸರ್ಕಾರ ರೈತರ ಹಿತವನ್ನು ಬಲಿಕೊಟ್ಟು ತಮಿಳುನಾಡಿನ ಜನರನ್ನು ಉದ್ಧಾರ ಮಾಡಲು ಹೊರಟಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ಕೂಡಲೇ ಮುಖ್ಯಮಂತ್ರಿಗಳು, ಜಲಸಂಪನ್ಮೂಲ ಇಲಾಖೆ ಸಚಿವರು, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದ ಜಲಾಶಯಗಳ ನೀರಿನ ಲಭ್ಯತೆ, ಮಳೆ–ಬೆಳೆಯ ವಸ್ತುಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಟ್ಟು ನೀರು ಹರಿಸುತ್ತಿರುವುದನ್ನು ಸ್ಥಗಿತಗೊಳಿಸಬೇಕೆಂದು ಧರಣಿ ನಿರತರು ಒತ್ತಾಯಿಸಿದರು. ಇಂದಿನ ಧರಣಿಯಲ್ಲಿ ಮಂಗಳಮುಖಿಯರೂ ಪಾಲ್ಗೊಂಡು ಕಾವೇರಿ ಹೋರಾಟಕ್ಕೆ ಬೆಂಬಲ ನೀಡಿದ್ದು ವಿಶೇಷವಾಗಿತ್ತು. ಮೂಗೂರು ನಂಜುಂಡಸ್ವಾಮಿ, ಎಂ.ಜೆ. ಸುರೇಶ್‌ಗೌಡ, ಎಂ. ಮೋಹನ್‌ಕುಮಾರ್‌ಗೌಡ, ಮಹದೇವಸ್ವಾಮಿ, ಬಾಲಕೃಷ್ಣ, ಪುಷ್ಪಾವತಿ, ಪದ್ಮ, ನೇಹ, ಮಂಜುಳಾ, ಸುನಿಲ್‌ಕುಮಾರ್, ಪೂಜಾ ಜಾಸ್ಮಿನ್, ಸುಧಾರಣಿ, ಮಧುರ ಸೇರಿದಂತೆ ಹಲವರು ಧರಣಿಯಲ್ಲಿದ್ದರು.

ದಸರೆಗೆ ಸೂಕ್ತ ರೀತಿ ಭದ್ರತೆಗೆ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಡಿಜಿಪಿ ಸಲಹೆ–ಸೂಚನೆ

ದಕ್ಷಿಣ ವಲಯದ ಜಿಲ್ಲೆಗಳ ಎಸ್ಪಿಗಳೊಂದಿಗೆ ಪ್ರಗತಿ ಪರಿಶೀಲನೆ, ಅಪರಾಧ ಪ್ರಕರಣಗಳ ತನಿಖೆ ಚುರುಕುಗೊಳಿಸಲು ಸೂಚನೆ

ಮೈಸೂರು,ಅ.9(ಆರ್‌ಕೆ)– ಮೈಸೂರು ದಸರಾ ಮಹೋತ್ಸವಕ್ಕೆ ಸೂಕ್ತ ಪೊಲೀಸ್ ಭದ್ರತೆ ಮಾಡಿ, ಯಾವುದೇ ಅಹಿತಕರ ಘಟನೆಗಳಾಗದಂತೆ ವಿಶ್ವ ಪ್ರಸಿದ್ಧ ವಿಜಯದಶಮಿ ಮೆರವಣಿಗೆ ಶಾಂತಿಯುತವಾಗಿ ನಡೆಯಲು ಎಚ್ಚರ ವಹಿಸಿ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಇಂದು ಮೈಸೂರು ನಗರ ಪೊಲೀಸ್ ಅಧಿಕಾರಿಗಳಿಗೆ ಸಲಹೆ–ಸೂಚನೆ ನೀಡಿದ್ದಾರೆ.

ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಕಾನ್ಫರೆನ್ಸ್ ಹಾಲ್‌ನಲ್ಲಿ ದಸರಾ ಮಹೋತ್ಸವದ ಬಂದೋಬಸ್ತ್ ಕುರಿತು ನಡೆಸಿದ ಸಿದ್ಧತೆಗಳ ಬಗ್ಗೆ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ಹಾಗೂ ಎಲ್ಲಾ ವಿಭಾಗಗಳ ಎಸಿಪಿಗಳೊಂದಿಗೆ ಸಭೆ ನಡೆಸಿ, ಪ್ರಗತಿ ಪರಿಶೀಲಿಸಿದರು.



ಮೈಸೂರಿನ ಪೊಲೀಸ್ ಆಯುಕ್ತರ ಕಚೇರಿ ಕಾನ್ಫರೆನ್ಸ್ ಹಾಲ್‌ನಲ್ಲಿ ದಸರಾ ಮಹೋತ್ಸವದ ಬಂದೋಬಸ್ತ್ ಕುರಿತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೋಮವಾರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ಹಾಗೂ ಎಲ್ಲಾ ವಿಭಾಗಗಳ ಎಸಿಪಿಗಳೊಂದಿಗೆ ಸಭೆ ನಡೆಸಿ, ಪ್ರಗತಿ ಪರಿಶೀಲಿಸಿದರು.

> "ಈ ಹಿಂದೆ ದಸರಾ ಬಂದೋಬಸ್ತ್ ವ್ಯವಸ್ಥೆ ಮಾಡಿದ ಅನುಭವವಿರುವ ನಿವೃತ್ತ ಪೊಲೀಸ್ ಅಧಿಕಾರಿಗಳ ಸಲಹೆ, ಮಾರ್ಗದರ್ಶನ ಪಡೆದುಕೊಂಡು ಸುವ್ಯವಸ್ಥಿತವಾಗಿ ನವರಾತ್ರಿ ಉತ್ಸವಕ್ಕೆ ಪರಿಣಾಮಕಾರಿ ಭದ್ರತೆ ಮಾಡಬೇಕು. ಅರಮನೆ ಆವರಣ, ಸುತ್ತಮುತ್ತಲಿನ ಪ್ರದೇಶ, ರಾಜಮಾರ್ಗ, ಟಾರ್ಚ್ ಲೈಟ್ ಪರೇಡ್‌ಗಳಲ್ಲಿನ ಸಿಸಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿಟ್ಟು ಕಂಟ್ರೋಲ್ ರೂಂನಲ್ಲಿ ದೃಶ್ಯಾವಳಿ ವೀಕ್ಷಿಸಿ ತುರ್ತು ಸಂದರ್ಭ ಬಂದಲ್ಲಿ ಹತ್ತಿರದ ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ರವಾನಿಸುವ ಮೂಲಕ ತಕ್ಷಣ ಅವರು ಸ್ಥಳಕ್ಕೆ ತೆರಳುವಂತೆ ಮಾಡುವತ್ತ ಗಮನ ಹರಿಸಿ. **–ಅಲೋಕ್ ಮೋಹನ್**.

ಈಗಾಗಲೇ 2023ರ ದಸರಾ ಕಾರ್ಯಕ್ರಮಗಳು ಆರಂಭವಾಗಿವೆ. ಅಕ್ಟೋಬರ್ 15ರಂದು ನಾಡಹಬ್ಬ ಉದ್ಘಾಟನೆಯಾದ ನಂತರ ನಡೆಯಲಿರುವ ಯುವ ದಸರಾ, ದಸರಾ ಕ್ರೀಡಾಕೂಟ, ಚಲನಚಿತ್ರೋತ್ಸವ, ದಸರಾ ವಸ್ತುಪ್ರದರ್ಶನ, ರೈತ ದಸರಾ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಾದಿತ ಮಹಿಷಾ ದಸರಾ, ವಿಜಯದಶಮಿ ಮೆರವಣಿಗೆ ಮತ್ತು ಬನ್ನಿಮಂಟಪದ ಪಂಜಿನ ಕವಾಯತು, ಏರ್ ಶೋ, ಆಹಾರ ಮೇಳ ಸೇರಿದಂತೆ ವಿವಿಧ ಕಾರ್ಯಕ್ರಮ ಸ್ಥಳಗಳಲ್ಲಿ ವ್ಯಾಪಕ ಬಂದೋಬಸ್ತ್ ಯೋಜನೆ ಮಾಡಿಕೊಂಡಿರುವ ಬಗ್ಗೆ ಪೊಲೀಸ್ ಆಯುಕ್ತರು, ಡಿಜಿಪಿ ಅಲೋಕ್ ಮೋಹನ್ ಅವರಿಗೆ ವಿವರಿಸಿದರು.

ನವರಾತ್ರಿ ಉತ್ಸವ ಆರಂಭದ ದಿನ ಚಾಮುಂಡಿಬೆಟ್ಟದ ಸಮಾರಂಭ ಸ್ಥಳ ಹಾಗೂ ಮಹಿಷಾಸುರ ಪ್ರತಿಮೆ ಬಳಿ ಹೆಚ್ಚುವರಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿಯೋಜಿಸಿ ಕಟ್ಟೆಚ್ಚರ ವಹಿಸಬೇಕು, ಜಂಬೂಸವಾರಿ ದಿನದಂದು ಅರಮನೆ ಆವರಣ, ಸುತ್ತಲಿನ ದ್ವಾರಗಳು, ರಸ್ತೆ, ಜಂಕ್ಷನ್‌ಗಳು, ರಾಜಮಾರ್ಗ, ಪಂಜಿನ ಕವಾಯತು ಮೈದಾನದಲ್ಲಿ ಸೂಕ್ತ ಬಂದೋ ಬಸ್ತ್ ಮಾಡಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಅಧೀನ ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮಹಿಷಾ ದಸರಾ ಆಚರಣೆ ಪರ ಮತ್ತು ವಿರುದ್ಧದ ಗುಂಪುಗಳ ನೇತೃತ್ವ ವಹಿಸುವವರೊಂದಿಗೆ ನಿರಂತರ ಸಂಪರ್ಕ ಇರಿಸಿಕೊಂಡು ಅವರ ಚಟುವಟಿಕೆಗಳ ಮೇಲೆ ನಿಗಾ ಇರಿಸಿ ಎಲ್ಲವನ್ನೂ ವಿಡಿಯೋ ರೆಕಾರ್ಡ್ ಮಾಡಿ ಪರಿಸ್ಥಿತಿ ಕೈಮೀರದಂತೆ ನೋಡಿಕೊಂಡು ಪೊಲೀಸರಿಂದ ಯಾವುದೇ ಲೋಪವಾಗದಂತೆ ಎಚ್ಚರ ವಹಿಸಿ ಎಂದು ಸಲಹೆ ನೀಡಿದರು.

ಸ್ತ್ರೀಶಕ್ತಿ ಯೋಜನೆಯಡಿ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣವಿರುವುದರಿಂದ ರಾಜ್ಯಾದ್ಯಂತ ಅಧಿಕ ಸಂಖ್ಯೆಯಲ್ಲಿ ದಸರಾ ನೋಡಲು ಮಹಿಳೆಯರು ಮೈಸೂರಿಗೆ ಬರುವ ನಿರೀಕ್ಷೆ ಇರುವುದರಿಂದ ಹೆಚ್ಚಿನ ಸಂಖ್ಯೆಯ ಮಹಿಳಾ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳನ್ನು ಈ ಬಾರಿಯ ದಸರಾ ಬಂದೋಬಸ್ತ್‌ಗಾಗಿ ಬಳಸಿಕೊಳ್ಳಿ. ಹೊರ ಜಿಲ್ಲೆಗಳಿಂದ ಹೆಚ್ಚುವರಿ ಸಿಬ್ಬಂದಿಯನ್ನು ಕಳುಹಿಸುತ್ತೇವೆ. ಅವರಿಗೆ ಇಲ್ಲಿ ಊಟ–ವಸತಿ ಸೌಲಭ್ಯ ಒದಗಿಸಿ, ಕರ್ತವ್ಯಕ್ಕೆ ನಿಯೋಜನೆ ಮಾಡಿ ಎಂದು ಡಿಜಿಪಿಯವರು ತಿಳಿಸಿದರು.

ರಾಜ್ಯ ಗುಪ್ತವಾರ್ತೆ, ಕೆಎಸ್‌ಆರ್‌ಪಿ, ಸಿಎಆರ್, ಡಿಎಆರ್, ಸಿಆರ್‌ಇ ಸೆಲ್, ಬಾಂಬ್ ಸ್ಕ್ವಾಡ್, ಡಾಗ್ ಸ್ಕ್ವಾಡ್, ಆಂತರಿಕ ಭದ್ರತಾ ಪಡೆ (ಸಿಎಸ್‌ಬಿ) ಸೇರಿದಂತೆ ಎಲ್ಲಾ ಘಟಕಗಳ ಪೊಲೀಸರನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ದಸರೆ ಶಾಂತಿಯುತವಾಗಿ ನಡೆಯಲು ಭದ್ರತಾ ಸಿದ್ಧತೆ ಮಾಡಿಕೊಳ್ಳಬೇಕು.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ರಾಜ್ಯಪಾಲರು, ಸುಪ್ರೀಂಕೋರ್ಟ್, ಹೈಕೋರ್ಟ್ ನ್ಯಾಯಮೂರ್ತಿಗಳಂತಹ ಅತೀ ಗಣ್ಯರು ಆಗಮಿಸುವ ಮಾರ್ಗ ಸುಗಮಗೊಳಿಸುವುದು, ವಾಸ್ತವ್ಯ ಹೂಡುವ ಸ್ಥಳದಲ್ಲಿ ಬಂದೋಬಸ್ತ್ ವ್ಯವಸ್ಥೆ, ಕಾರ್ಯಕ್ರಮಗಳ ವೇದಿಕೆಯಲ್ಲಿ ಕಲ್ಪಿಸಿರುವ ವಿದ್ಯುತ್ ಸಂಪರ್ಕದಿಂದ ಯಾವುದೇ ಅವಘಡಕ್ಕೆ ಆಸ್ಪದ ನೀಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆಯೇ ಎಂಬುದನ್ನು ದೃಢಪಡಿಸಿಕೊಂಡಿದ್ದಾಗ್ಯೂ ಸ್ಥಳದಲ್ಲಿ ಅಗ್ನಿಶಾಮಕ ದಳ, ಆಂಬುಲೆನ್ಸ್‌ಗಳನ್ನು ನಿಯೋಜಿಸುವಂತೆಯೂ ಇದೇ ವೇಳೆ ತಿಳಿಸಿದರು.

ಜಂಬೂಸವಾರಿ ದಿನದಂದು ಮೈಸೂರು ಜಿಲ್ಲೆಯಾದ್ಯಂತ ಎಲ್ಲಾ ಅಗ್ನಿಶಾಮಕ ದಳದ ವಾಹನ, ಸಿಬ್ಬಂದಿಗಳನ್ನು ಕರೆಸಿಕೊಳ್ಳಬೇಕು, ಆಂಬುಲೆನ್ಸ್‌ಗಳನ್ನು ಮೆರವಣಿಗೆಯುದ್ದಕ್ಕೂ ನಿಯೋಜಿಸಿ ಕೆಆರ್ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಸೂಪರ್ ಸ್ಪೆಷಾಲಿಟಿ, ಜೆಎಸ್‌ಎಸ್ ಆಸ್ಪತ್ರೆಗಳಲ್ಲಿ ವಾರ್ಡ್‌ಗಳು, ವೈದ್ಯರು ಹಾಗೂ ಸಿಬ್ಬಂದಿ ಮೀಸಲಿರಿಸಿ, ಅಗತ್ಯ ಮುಂಜಾಗ್ರತಾ ಕ್ರಮ ವಹಿಸುವಂತೆಯೂ ಸಲಹೆ ನೀಡಿದರು.

ನಂತರ ದಕ್ಷಿಣ ವಲಯದ ಡಿಐಜಿಪಿ ಬೋರಲಿಂಗಯ್ಯ, ಎಸ್ಪಿ ಸೀಮಾ ಲಾಟ್ಕರ್ ಸೇರಿದಂತೆ ಚಾಮರಾಜನಗರ, ಕೊಡಗು, ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ಎಸ್ಪಿಗಳೊಂದಿಗೂ ಸಭೆ ನಡೆಸಿದ ಡಿಜಿಪಿ ಅಲೋಕ್ ಮೋಹನ್, ಅಪರಾಧ ಪ್ರಕರಣಗಳ ತನಿಖೆ, ಪತ್ತೆ ಕಾರ್ಯ, ಕಾನೂನು–ಸುವ್ಯವಸ್ಥೆ ಸಂಬಂಧ ಪ್ರಗತಿ ಪರಿಶೀಲನೆ ನಡೆಸಿ ಪರಿಣಾಮಕಾರಿಯಾಗಿ ಪೊಲೀಸ್ ಕರ್ತವ್ಯ ನಿರ್ವಹಿಸಿ ಇಲಾಖೆಯನ್ನು ಸಬಲೀಕರಣಗೊಳಿಸಬೇಕೆಂದು ಸಲಹೆ ನೀಡಿದರು.

ಮಧ್ಯಾಹ್ನ 12.15ರಿಂದ ಸಂಜೆ 6.35 ಗಂಟೆವರೆಗೂ ನಿರಂತರವಾಗಿ ಸಭೆ ನಡೆಸಿದ ಅಲೋಕ್ ಮೋಹನ್, ನಂತರ ಮಳೆಯಲ್ಲೂ ಕುಪ್ಪಣ್ಣ ಪಾರ್ಕ್, ವಸ್ತುಪ್ರದರ್ಶನ ಮೈದಾನ, ಅರಮನೆ ಆವರಣ, ರಾಜಮಾರ್ಗಗಳಲ್ಲಿ ಸ್ಥಳ ಪರಿಶೀಲನೆ ನಡೆಸಿದ ಬಳಿಕ ರಾತ್ರಿ 7.30 ಗಂಟೆಗೆ ಮೈಸೂರಿನಿಂದ ಬೆಂಗಳೂರಿಗೆ ಹಿಂದಿರುಗಿದರು.

ಹಳ್ಳಿಗಳಲ್ಲಿ ಸರ್ಕಾರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ

ಸಂಸದೆ ಸುಮಲತಾ ಅಂಬರೀಷ್ ಸೂಚನೆ



ಮಳವಳ್ಳಿ, ಅ.9– ಗ್ರಾಮಗಳ ಅಭಿವೃದ್ಧಿಗೆ ಸರ್ಕಾರ ಜಾರಿಗೆ ತಂದಿರುವ ಯೋಜನೆಗಳನ್ನು ಅಧಿಕಾರಿಗಳು ಅನುಷ್ಠಾನಗೊಳಿಸಲು ಮುಂದಾಗಬೇಕು ಎಂದು ಸಂಸದೆ ಸುಮಲತಾ ಅಂಬರೀಷ್ ಸೂಚಿಸಿದರು.

ಸೋಮವಾರ ತಾಲೂಕಿನ ನಾಗೇಗೌಡನ ದೊಡ್ಡಿಯಲ್ಲಿ ಸಂಸದರ ಆದರ್ಶ ಗ್ರಾಮ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹಳ್ಳಿಗಳಲ್ಲಿ ಸರ್ಕಾರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದರೇ ಗ್ರಾಮಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಅಧಿಕಾರಿಗಳು ಮುತುವರ್ಜಿ ವಹಿಸಿ ಹಳ್ಳಿಗಳಿಗೆ ಮೂಲ ಸೌಲಭ್ಯ ಒದಗಿಸಬೇಕು ಎಂದರು.

ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರ್ಕಾರ, ಜನಪ್ರತಿನಿಧಿಗಳ ಜೊತೆಗೆ ಸಾರ್ವಜನಿಕರು ಕೈ ಜೋಡಿಸುವ ಮೂಲಕ ಸಲಹೆ ಸೂಚನೆ ನೀಡಬೇಕು. ಕಳಪೆ ಕಾಮಗಾರಿ ನಡೆಯದಂತೆ ಎಚ್ಚರಿಕೆ ವಹಿಸಬೇಕು. ಗ್ರಾಮಗಳಲ್ಲಿರುವ ಸಮಸ್ಯೆಗಳ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ತಮ್ಮ ಗಮನಕ್ಕೆ ತಂದರೆ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಗ್ರಾಮಗಳ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದ್ದು, ಅವರ ಬಳಿ ತಮ್ಮ ಅಹವಾಲು ಸಲ್ಲಿಸಬಹುದಾಗಿದೆ ಎಂದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಬರದ ನಡುವೆಯೂ ನೆಮ್ಮದಿಯಿಂದ ಬದುಕಲು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳು ಸಹಕಾರಿಯಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದ ಎಲ್ಲಾ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದ್ದಾರೆಂದು ತಿಳಿಸಿದರು.

ಕೆಆರ್‌ಎಸ್‌ನಲ್ಲಿ ನೀರಿಲ್ಲದಿದ್ದರೂ ಜನ ಜಾನುವಾರುಗಳಿಗೆ ಸಮರ್ಪಕ ನೀರು ಸಿಗುವಂತೆ ಕೆರೆಕಟ್ಟೆ ತುಂಬಿಸಲು ಶ್ರಮಿಸಲಾಗುವುದು. ಹನಿ ನೀರಾವರಿ ಯೋಜನೆಗೆ ಸದ್ಯದಲ್ಲೇ ಚಾಲನೆ ನೀಡಲಾಗುವುದು ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಚೆಲುವಮ್ಮ, ಉಪಾಧ್ಯಕ್ಷ ಭಾಗ್ಯಮ್ಮ, ಸದಸ್ಯ ಶಿವಲಿಂಗೇಗೌಡ, ಪುರಸಭೆ ಸದಸ್ಯ ಪುಟ್ಟಸ್ವಾಮಿ, ಮುಖಂಡರಾದ ಮಹದೇವ ಇತರರಿದ್ದರು.

ನೀರು ನಿರ್ವಹಣೆ ಸೂತ್ರ ಇಲ್ಲದಿರುವುದೇ ಕಾವೇರಿ ಸಮಸ್ಯೆಗೆ ಕಾರಣ

ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್ ಅಭಿಮತ



ಮಂಡ್ಯ, ಅ.9– ಕಾವೇರಿ ಕೊಳ್ಳದಲ್ಲಿ ಸಂಕಷ್ಟ ಸಂದರ್ಭ ಎದುರಾದಾಗ ಹೆಚ್ಚುವರಿ ನೀರು ಬಳಸಿಕೊಳ್ಳಲು ನ್ಯಾಯಾಧೀಕರಣದಲ್ಲಿ ಪರಿಹಾರ ಸಿಗದ ಹಿನ್ನೆಲೆ ಹಾಗೂ ನೀರು ನಿರ್ವಹಣೆ ಸೂತ್ರ ಇಲ್ಲದಿರುವುದು ಕಾವೇರಿ ಸಮಸ್ಯೆಗೆ ಪ್ರಮುಖ ಕಾರಣ ಎಂದು ಕಾವೇರಿ ಟ್ರಿಬ್ಯೂನಲ್‌ನ ನಿವೃತ್ತ ಸದಸ್ಯ ಹಾಗೂ ನೀರಾವರಿ ತಜ್ಞ ಕ್ಯಾಪ್ಟನ್ ರಾಜಾರಾವ್ ತಿಳಿಸಿದರು.

ಸೋಮವಾರ ನಗರದ ಸರ್‌ಎಂವಿ ಪ್ರತಿಮೆ ಎದುರು ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಹೆಚ್ಚುವರಿ ನೀರು ಬಳಕೆ ವಿಚಾರದಲ್ಲಿ ಕರ್ನಾಟಕ ಅರ್ಜಿ ಸಲ್ಲಿಸಲು ಮುಂದಾಗಿತ್ತು. ಅಷ್ಟರಲ್ಲಿ ಕಾವೇರಿ ನ್ಯಾಯಾಧೀಕರಣ ರದ್ದಾಗಿದ್ದರಿಂದ ಈ ವಿಚಾರದಲ್ಲಿ ಪರಿಹಾರ ದೊರಕಲಿಲ್ಲ ಎಂದರು.

ಅದೇ ರೀತಿ ಸಂಕಷ್ಟ ಎದುರಾದಾಗ ನೀರು ನಿರ್ವಹಣೆ ಕುರಿತು ಯಾವುದೇ ಆದೇಶ ಇಲ್ಲದ ಕಾರಣ ಸಮಸ್ಯೆ ಉದ್ಭವವಾಗುತ್ತಿದೆ. ನ್ಯಾಯಾಧೀಕರಣದ ತೀರ್ಪಿನಲ್ಲಿ ಕೆಆರ್‌ಎಸ್‌ನಿಂದ 52 ಟಿಎಂಸಿ, ಕಬಿನಿಯಿಂದ 60 ಟಿಎಂಸಿ ಹಾಗೂ ಜಲಾಶಯಗಳ ಮುಂಭಾಗದ ಪ್ರದೇಶದಿಂದ ಮಳೆಯಾಶ್ರಿತ ನೀರು 80 ಟಿಎಂಸಿ ಬಿಡಬೇಕಾಗಿದೆ. ಮಳೆ ಕೊರತೆಯಾದಾಗಲೂ ಜಲಾಶಯಗಳಿಂದ ನೀರು ಬಿಡಿ ಎಂದು ತಮಿಳುನಾಡು ಒತ್ತಡ ಹಾಕುತ್ತಿದೆ ಎಂದರು.

ನ್ಯಾಯಾಧೀಕರಣ ತೀರ್ಪಿನಲ್ಲಿ ಕರ್ನಾಟಕ ಎಷ್ಟು ಪ್ರದೇಶದಲ್ಲಿ ಯಾವ್ಯಾವ ಬೆಳೆ ಬೆಳೆಯಬೇಕು ಎಂದು ನಿಗದಿ ಮಾಡಿದ್ದು, ಕುಡಿಯುವ ನೀರಿಗೂ ಹಂಚಿಕೆ ಮಾಡಲಾಗಿದೆ. ಸಂಕಷ್ಟದ ಸಮಯದಲ್ಲಿ ಕರ್ನಾಟಕ ಇದರ ಜವಾಬ್ದಾರಿ ನಿರ್ವಹಣೆ ಮಾಡಬೇಕಲ್ಲವೇ, ಅದೇ ರೀತಿ ಅಂತರ್ಜಲದ 10 ಟಿಎಂಸಿ ನೀರನ್ನು ತಮಿಳುನಾಡು ಬಳಕೆ ಮಾಡಿಕೊಳ್ಳಲು ಅವಕಾಶವಿದೆ. ಇದನ್ನು ಜೂನ್, ಜುಲೈನಲ್ಲಿ ಬಳಸಿಕೊಳ್ಳುವಂತೆ ಸೂಚಿಸಿದರೆ ಸಮಸ್ಯೆ ಎದುರಾಗುವುದಿಲ್ಲ. ಅಷ್ಟೇ ಅಲ್ಲದೇ ಹಿಂಗಾರು ಮಳೆ ನೀರು ಸಂಗ್ರಹಕ್ಕೆ ಯಾವುದೇ ಯೋಜನೆ ರೂಪಿಸದೇ ಕರ್ನಾಟಕದ ಮೇಲೆ ಒತ್ತಡ ಹಾಕಿ ನೀರು ಬಿಡಿ ಎಂದು ಆದೇಶಿಸುವವರನ್ನು ಪ್ರಶ್ನಿಸಬೇಕಿದೆ ಎಂದರು.

ಹೆಚ್ಚುವರಿ ನೀರು ಬಳಕೆಗೆ ಅವಕಾಶ ಸಿಕ್ಕಿದ್ದರೆ ಮೇಕೆದಾಟು ಯೋಜನೆ ಸಾಕಾರಗೊಳ್ಳುತ್ತಿತ್ತು. ಬ್ರಿಟಿಷರ ಕಾಲದಲ್ಲಿ ಒಪ್ಪಿಗೆಯಾಗಿರುವ ಯೋಜನೆಗೆ ತಮಿಳುನಾಡು ಸ್ವಾರ್ಥದಿಂದ ಅಡ್ಡಗಾಲಾಗುತ್ತಿದೆ. ಕಾವೇರಿ ಕೊಳ್ಳ ಪ್ರದೇಶದ ಜಲಾಶಯಗಳ ಹೆಚ್ಚುವರಿ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದ್ದು, ಆ ನೀರು ಸಮುದ್ರಕ್ಕೆ ಹರಿದು ಪೋಲಾಗದಂತೆ ತಡೆಯಲು ಕಟ್ಟಿವೈ, ಗುಂಡಾಲ್ ಹಾಗೂ ವೈಗೈ ನದಿಗೆ ಹರಿಸುವ ಯೋಜನೆ ಆರಂಭಿಸಿದ್ದು, ಆ ಮೂಲಕ ಬಳಕೆ ಮಾಡಿಕೊಳ್ಳಲು ಮುಂದಾಗಿದೆ ಹಾಗಾಗಿ ಮೇಕೆದಾಟು ಯೋಜನೆಗೆ ಅಡ್ಡಿ ಮಾಡುತ್ತಿದೆ ಎಂದರು.

ಕರ್ನಾಟಕ ಸರ್ಕಾರ ಈ ವಿಚಾರದಲ್ಲಿ ಸೂಕ್ಷ್ಮತೆಯಿಂದ ಹೆಜ್ಜೆ ಇರಿಸಬೇಕಾಗಿದೆ. 67 ಟಿಎಂಸಿ ಸಾಮರ್ಥ್ಯದ ಮೇಕೆದಾಟು ಯೋಜನೆಗೆ ಪರಿಸರ ಸಂರಕ್ಷಣೆ ಹಿನ್ನೆಲೆಯಲ್ಲಿ ಅನುಮತಿ ಸಿಗುವುದು ಕಷ್ಟವಾಗಬಹುದು. ಹಾಗಾಗಿ ಪರಿಸರಕ್ಕೆ ಹಾನಿಯಾಗದಂತೆ ಶಿವನ ಸಮುದ್ರ, ಮೇಕೆದಾಟು ಅಣೆಕಟ್ಟುಗಳ ನಿರ್ಮಾಣಕ್ಕೆ ಮುಂದಾಗಬೇಕಿದೆ ಎಂದು ಸಲಹೆ ನೀಡಿದರು.

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ವಕೀಲರಿಗೆ ತಾಂತ್ರಿಕ ಪರಿಣತಿ ಇಲ್ಲದ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ವಕೀಲರಿಂದ ದೊಡ್ಡ ತಪ್ಪಾಗಿದೆ. ಅದೇ ರೀತಿ ರಾಜ್ಯ ಸರ್ಕಾರವು ತಪ್ಪು ಹೆಜ್ಜೆ ಇಡುತ್ತಿದೆ. ನ್ಯಾಯಾಧೀಕರಣ ತೀರ್ಪಿನಲ್ಲಿ 40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಬೇಕೆಂಬ ಷರತ್ತು ಇದೆ. ಆದರೆ 7 ಸಕ್ಕರೆ ಕಾರ್ಖಾನೆ ಆರಂಭಿಸಿ ರೈತರನ್ನು ಕಬ್ಬು ಬೆಳೆಯಿರಿ ಎನ್ನುತ್ತಿದ್ದು, ಹಲವು ಪ್ರದೇಶದಲ್ಲಿ 15ಕ್ಕೂ ಹೆಚ್ಚು ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನ ಮಾಡಿದೆ. ಇದಕ್ಕೆಲ್ಲ 15 ಟಿಎಂಸಿ ನೀರು ಬೇಕು, ಎಲ್ಲಿಂದ ತಂದು ಕೊಡುತ್ತಾರೆ. ರೈತರ ಗತಿ ಏನು ಎಂದು ಪ್ರಶ್ನಿಸಿದರು.

4 ರಾಜ್ಯಗಳಿಗೆ ಹಂಚಿಕೆ ಮಾಡಿ ಉಳಿದಿರುವ ಬಾಕಿ 26 ರಿಂದ 27 ಟಿಎಂಸಿ ನೀರನ್ನು ಹಂಚಿಕೆ ಮಾಡುವಂತೆ ಒತ್ತಾಯಿಸಬೇಕಿದ್ದು, ಅದೇ ರೀತಿ ಜಲಾನಯನ ಪ್ರದೇಶದ ನೀರಿನ ಸದ್ಬಳಕೆ ಹಾಗೂ ನೀರಿನ ಮಿತ ಬಳಕೆಯಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಕೇರಳದ ಜೊತೆ ಮಾತುಕತೆ ನಡೆಸಿ ಕುಂಗನಹಳ್ಳಿ ಸಮೀಪ ಸೇತುವೆ ಇರುವ ಪ್ರದೇಶದಲ್ಲಿ ಸಣ್ಣ ಪ್ರಮಾಣದ ಅಣೆಕಟ್ಟು ನಿರ್ಮಾಣ ಮಾಡಿದರೆ 10 ಟಿಎಂಸಿ ನೀರು ಸಿಗಲಿದೆ. ಬೆಂಗಳೂರಿಗೆ ಸರಬರಾಜು ಮಾಡುವ ಕುಡಿಯುವ ನೀರಿನಲ್ಲಿ 5 ಟಿಎಂಸಿ ಉಳಿಸಬಹುದಾಗಿದೆ. ಅಂತರ್ಜಲ ಬಳಕೆ ಜೊತೆಗೆ ರೈತರು ಬೇಸಾಯಕ್ಕೆ ಕಡಿಮೆ ನೀರು ಬಳಸುವ ಪದ್ಧತಿ ಹಾಗೂ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಬೇಕು. ನಾಲೆ ನೀರು ರಾತ್ರಿ ವೇಳೆ ಪೋಲಾಗುತ್ತಿದೆ. ಹಾಗಾಗಿ ಸಂಜೆ 6 ರಿಂದ ಬೆಳಗ್ಗೆ 6 ರವರೆಗೆ ನಾಲೆಗಳಲ್ಲಿ ನೀರು ಸಂಗ್ರಹವಾಗುವಂತೆ ತಡೆತೂಬು ನಿರ್ಮಿಸಬೇಕು. ಹೀಗೆ ಮಾಡಿದರೆ ನೂರಾರು ಟಿಎಂಸಿ ಉಳಿದು ನೀರು ಸದ್ಬಳಕೆಯಾಗಲಿದೆ ಎಂದರು.

ನೀರಾವರಿ ತಜ್ಞ ಅರ್ಜುನಹಳ್ಳಿ ಪ್ರಸನ್ನಕುಮಾರ್ ಮಾತನಾಡಿದರು. ಧರಣಿಯಲ್ಲಿ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಜಿ.ಬಿ.ಶಿವಕುಮಾರ್, ಕನ್ನಡಸೇನೆ ಮಂಜು, ದಸಂಸ ಕೃಷ್ಣ, ಇಂಡುವಾಳು ಚಂದ್ರಶೇಖರ್, ಅಂಬುಜಮ್ಮ ಸೇರಿದಂತೆ 200ಕ್ಕೂ ಹೆಚ್ಚಿನ ಹೋರಾಟಗಾರರು ಭಾಗವಹಿಸಿದ್ದರು.

ಶಾಲಾ ಮಕ್ಕಳಿಗೆ ಉಚಿತ ನೋಟ್‌ಬುಕ್ ವಿತರಣೆ



ಕೆ.ಆರ್.ಪೇಟೆ, ಅ.9– ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಾರ್ವಜನಿಕರು ಹಾಗೂ ಹಿರಿಯ ವಿದ್ಯಾರ್ಥಿಗಳು ನೆರವು ನೀಡುವ ಮೂಲಕ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಸೀತಾರಾಂ ತಿಳಿಸಿದರು.

ತಾಲೂಕಿನ ಸಂತೇಬಾಚಹಳ್ಳಿ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಸಸ್ಯ ಶ್ಯಾಮಲ ಯೋಜನೆ ಹಾಗೂ ಸದ್ಭಾವನಾ ಸೇವಾ ಟ್ರಸ್ಟ್ ವತಿಯಿಂದ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಿಸಿ ಮಾತನಾಡಿದರು.

ಸರ್ಕಾರಿ ಶಾಲೆಗಳನ್ನು ಬಡವರು ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಉಳಿಸಿ ಬೆಳೆಸಬೇಕಾದ ಅಗತ್ಯವಿದೆ. ಶ್ರೀಮಂತರು ತಮ್ಮ ಮಕ್ಕಳನ್ನು ಸಾಕಷ್ಟು ಡೊನೇಷನ್ ಕೊಟ್ಟು ಖಾಸಗಿ ಶಾಲೆಗಳಲ್ಲಿ ಓದಿಸುತ್ತಾರೆ. ಆದರೆ ಬಡ ಮಕ್ಕಳಿಗೆ ಸರ್ಕಾರಿ ಶಾಲೆಯು ಅಗತ್ಯವಾಗಿ ಉಳಿಯಬೇಕಾಗಿದೆ. ಇಲ್ಲದಿದ್ದರೆ ಬಡವರು ಶಿಕ್ಷಣದಿಂದ ವಂಚಿತರಾಗಬೇಕಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಉಚಿತವಾಗಿ ಪಠ್ಯ ಪುಸ್ತಕ, ಶಾಲಾ ಸಮವಸ್ತ್ರ, ಮಧ್ಯಾಹ್ನ ಬಿಸಿಯೂಟ ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಹಾಗಾಗಿ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸುವ ಮೂಲಕ ಸರ್ಕಾರಿ ಶಾಲೆಗಳ ರಕ್ಷಣೆಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಅಘಲಯ ಸದ್ಭಾವನಾ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ವಿಜಯಕುಮಾರ್ ಮಾತನಾಡಿ, ಮಕ್ಕಳು ವಿದ್ಯಾಭ್ಯಾಸದ ಜೊತೆಗೆ ತಮ್ಮ ಶಾಲಾ ಪರಿಸರದಲ್ಲಿ ಸಸಿಗಳನ್ನು ನೆಟ್ಟು ಬೆಳೆಸುವ ಜವಾಬ್ದಾರಿ ತೆಗೆದುಕೊಳ್ಳುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು. ವಿದ್ಯಾರ್ಥಿಗಳು ಪೋಷಕರಿಗೆ ಹಾಗೂ ಶಾಲೆಗೆ ಕೀರ್ತಿ ತರುವ ಕೆಲಸ ಮಾಡಬೇಕು. ಸಂತೇಬಾಚಹಳ್ಳಿ ಹೋಬಳಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಂಠಿತವಾಗುತ್ತಿದೆ. ಪೋಷಕರು ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಬೇಕು. ವಿದ್ಯಾರ್ಥಿಗಳು ತಮ್ಮ ಶಾಲೆ ಹಾಗೂ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಬೇಕು ಎಂದರು.

ಈ ವೇಳೆ ಮುಖ್ಯ ಶಿಕ್ಷಕಿ ದಯಾವತಿ ರಣ್ಯ, ಗ್ರಾಪಂ ಸದಸ್ಯ ಮಂಜೇಗೌಡ, ಶರತ್, ಜಯಕುಮಾರ್, ಕೃಷ್ಣ, ಕೃಷ್ಣಮೂರ್ತಿ, ಅಘಲಯ ಅಜಯ್, ಶಿಕ್ಷಕ ಸತೀಶ್, ಮಂಜುನಾಥ್ ಇದ್ದರು.

ಸಿಲಿಂಡರ್ ಸ್ಫೋಟ: ದಿನಬಳಕೆ ವಸ್ತುಗಳು ನಾಶ



ಕೆ.ಆರ್.ಪೇಟೆ, ಅ.9– ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಮನೆಯಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ನಾಶವಾಗಿರುವ ಘಟನೆ ತಾಲೂಕಿನ ಡಾಣನಹಳ್ಳಿ ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ.

ಗ್ರಾಮದ ನಿವಾಸಿ ರಾಜನಾಯಕ ಹಾಗೂ ರಾಜಮ್ಮ ಅವರ ಮನೆಯಲ್ಲೇ ಸಿಲಿಂಡರ್ ಸ್ಫೋಟಗೊಂಡಿರುವುದು. ಸೋಮವಾರ ಬೆಳಗ್ಗೆ ಮನೆಯಲ್ಲಿ ಯಾರೂ ಇಲ್ಲದ ವೇಳೆ ರಾಜನಾಯಕ ಅವರ ಮನೆಯಲ್ಲಿದ್ದ ಸಿಲಿಂಡರ್ ಸ್ಫೋಟಗೊಂಡು ಆಹಾರ ಪದಾರ್ಥಗಳು, ದಿನಬಳಕೆಯ ವಸ್ತುಗಳು ಸೇರಿದಂತೆ ಲಕ್ಷಾಂತರ ರೂ. ಬೆಲೆ ಬಾಳುವ ವಸ್ತುಗಳು ಸುಟ್ಟು ಹೋಗಿವೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ರಾಜನಾಯಕ ಅವರಿಗೆ ಧೈರ್ಯ ತುಂಬಿ ಆರ್ಥಿಕ ನೆರವು ನೀಡಿದರು. ಈ ವೇಳೆ ದಬ್ಬೇಘಟ್ಟ ಗ್ರಾಪಂ ಅಧ್ಯಕ್ಷ ದೇವರಾಜು, ನವೀನ್, ವಿಜಯ್ ಕುಮಾರ್, ಅಶೋಕ್ ಕುಮಾರ್, ರಾಮೇಗೌಡ, ಕೆಂಪ ನಾಯಕ, ಧರ್ಮ ರಾಜು, ಚಲುವ ನಾಯಕ, ವಿಜಯ್ ನಾಯಕ, ಮಲ್ಲೇಶ್, ರವಿ ನಾಯಕ, ಮಹೇಶ್, ಮನು ಇತರರಿದ್ದರು.

ಸುನೀಲ್ ನಿಧನ


ಚಿನಕುರಳಿ, ಅ.9– ಚಿನಕುರಳಿ ಗ್ರಾಮದ ನಿವಾಸಿ ನಾಗರಾಜು ಎಂಬುವರ ಪುತ್ರ ಸುನೀಲ್ (29) ಹೃದಯಾ ಘಾತದಿಂದ ಸೋಮವಾರ ಮುಂಜಾನೆ ನಿಧನರಾದರು.



ಮೃತರು ಸಹೋದರ ಪತ್ರಕರ್ತ ಸಿ.ಎ.ಲೋಕೇಶ್, ತಾಯಿ ಜಯಲಕ್ಷ್ಮಿ, ತಂದೆ ನಾಗರಾಜು, ಓರ್ವ ಸಹೋದರಿ, ದೊಡ್ಡಪ್ಪ, ಚಿಕ್ಕಪ್ಪ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ಹೊರವಲಯದಲ್ಲಿರುವ ಮೃತರ ಜಮೀನಿನಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಸೇರಿದಂತೆ ಅನೇಕ ಗಣ್ಯರು ಮೃತರ ಅಂತಿಮ ದರ್ಶನ ಪಡೆದರು.

ಭಾರತೀನಗರದಲ್ಲಿ ವಿಜೃಂಭಣೆಯ ಹರಿನಾಮ ಸಂಕೀರ್ತನ

ಭಾರತೀನಗರ, ಅ.9– ಇಲ್ಲಿನ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಹರಿನಾಮ ಸಂಕೀರ್ತನ ವಿಜೃಂಭಣೆಯಿಂದ ನಡೆಯಿತು.



ಅ.29ರಂದು ತಿರುಪತಿ ಪಾದಯಾತ್ರೆ ಪೂರ್ವಸಿದ್ಧತೆ ಹಾಗೂ ಸಂಕಲ್ಪ ಪೂಜಾ ಮಹೋತ್ಸವ ಅಂಗವಾಗಿ ಪಾದಯಾತ್ರೆ ಅಧ್ಯಕ್ಷ ಕುಣಿಗಲ್ ಬಲರಾಮು ಅವರಿಂದ ಹರಿನಾಮ ಸಂಕೀರ್ತನ ನೂರಾರು ಭಕ್ತರ ನಡುವೆ ವಿಜೃಂಭಣೆಯಿಂದ ನಡೆಯಿತು.

ಇದೇ ವೇಳೆ ಮೇಲುಕೋಟೆ ಸ್ಥಾನೀಕರಾದ ಡಾ.ಶಲ್ವಪಿಳ್ಳೆ ಅಯ್ಯಂಗಾರ್ ನೇತೃತ್ವದಲ್ಲಿ ಸಂಕಲ್ಪ ಪೂಜೆ ನಡೆದು ಪಾದಯಾತ್ರೆ ಮಹತ್ವ ಕುರಿತು ಪ್ರವಚನ ನೀಡಲಾಯಿತು. ಅಲ್ಲದೇ ಶ್ರೀವೆಂಕಟೇಶ್ವರ ಸೇವಾಟ್ರಸ್ಟ್ ವತಿಯಿಂದ ಪಾದಯಾತ್ರೆ ಅಧ್ಯಕ್ಷ ಕುಣಿಗಲ್ ಬಲರಾಮು ಹಾಗೂ ಡಾ.ಶಲ್ವಪಿಳ್ಳೆ ಅಯ್ಯಂಗಾರ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಅರ್ಚಕರಾದ ಗೋಪಾಲ ಕೃಷ್ಣಭಟ್, ಅನಂತ ಕೃಷ್ಣಭಟ್, ಶ್ರೀವೆಂಕಟೇಶ್ವರ ಸೇವಾ ಟ್ರಸ್ಟ್ ಅಧ್ಯಕ್ಷ ವೆಂಕಟೇಗೌಡ, ಕಾರ್ಯಾಧ್ಯಕ್ಷ ವೆಂಕಟೇಶ್, ಕಾರ್ಯದರ್ಶಿ ನಾಗಪ್ಪ, ಸದಸ್ಯರಾದ ಶ್ರೀನಿವಾಸ್, ವೆಂಕಟೇಶ್, ಸತೀಶ್, ವಿಶ್ವ ರವಿ, ಬಸವರಾಜು, ಗಿರಿಯಣ್ಣ ರಾಮಲಿಂಗೇಗೌಡ ಸೇರಿದಂತೆ ಹಲವರಿದ್ದರು.

ವಸ್ತು ಪ್ರದರ್ಶನ ಮಳಿಗೆ: ಅರ್ಜಿ ಆಹ್ವಾನ

ಮಂಡ್ಯ, ಅ.9– ಶ್ರೀರಂಗಪಟ್ಟಣದಲ್ಲಿ ಅ.16 ರಿಂದ 3 ದಿನಗಳ ಕಾಲ ನಡೆಯುವ ಐತಿಹಾಸಿಕ ನಾಡಹಬ್ಬ ಶ್ರೀರಂಗಪಟ್ಟಣ ದಸರಾ ವಸ್ತು ಪ್ರದರ್ಶನಕ್ಕೆ ಜಿಲ್ಲೆಯ ಪರಂಪರೆ, ಸಂಸ್ಕೃತಿ ಹಾಗೂ ಸೊಗಡನ್ನು ಪ್ರತಿಬಿಂಬಿಸುವ ಕರಕುಶಲ ಗುಡಿ ಕೈಗಾರಿಕೆ ಖಾದ್ಯ ಒಳಗೊಂಡ ಅಂಗಡಿ ಮಳಿಗೆಗಳನ್ನು ತೆರೆಯಲು ಅರ್ಜಿ ಆಹ್ವಾನಿಸಲಾಗಿದೆ.

ಒಂದು ಅಂಗಡಿ ಮಳಿಗೆಗೆ 10000 ರೂ. EMD ಕಡ್ಡಾಯವಾಗಿ ಪಾವತಿಸತಕ್ಕದ್ದು. ಇದರಲ್ಲಿ 5000 ರೂ. ಅಂಗಡಿ ಮಳಿಗೆ ಬಾಡಿಗೆ ಮೊಬಲಗು ಒಳಗೊಂಡಿರುತ್ತದೆ. ಅಂಗಡಿ ಮಳಿಗೆಯು 10x10 ಅಥವಾ 108 ಚ.ಅಡಿ ವಿಸ್ತೀರ್ಣ ಒಳಗೊಂಡಿರುವುದು. ಸ್ವಚ್ಛತೆ, ನೈರ್ಮಲ್ಯ ಹಾಗೂ ಸಾಗಾಣಿಕೆ ವೆಚ್ಚವನ್ನು ಮಳಿಗೆಯವರೇ ಸ್ವತಃ ಭರಿಸುವುದು. ಯಾವುದೇ ನಷ್ಟ ಉಂಟು ಮಾಡಿದರೆ 10000 ರೂ. EMD ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ದಸರಾ ಉತ್ಸವ ಮುಗಿಯುವ 3 ದಿನಗಳ ಮುಂಚೆ ಮಳಿಗೆ ನಡೆಸಲು ನಿರಾಕರಿಸಿದರೆ, ವಿಫಲವಾದರೆ 5000 ರೂ. ವಾಪಸ್ ನೀಡುವುದಿಲ್ಲ. ಕೇವಲ ಸಸ್ಯಾಹಾರ ಖಾದ್ಯಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಆಹಾರ ಉತ್ಪನ್ನಗಳ ಪ್ರದರ್ಶಕ/ಮಾರಾಟಗಾರರು ಕಡ್ಡಾಯವಾಗಿ ಶುಚಿತ್ವ/ರುಚಿಯನ್ನು ಕಾಪಾಡುವುದು. ಮಾಹಿತಿ ಹಾಗೂ ಅನುಮತಿಗಾಗಿ ತಾಲೂಕು ಕಚೇರಿ (ಆಹಾರ ಶಾಖೆ), ಶ್ರೀರಂಗಪಟ್ಟಣ ಮತ್ತು ಜಂಟಿ ನಿರ್ದೇಶಕರ ಕಚೇರಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಮಂಡ್ಯ ಜಿಲ್ಲೆ ಅವರನ್ನು ಸಂಪರ್ಕಿಸಬಹುದು. ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಮಂಡ್ಯ, ಅ.9– ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯಿಂದ 2023–24 ನೇ ಸಾಲಿನಲ್ಲಿ ನ್ಯಾಷನಲ್ ಇ ಸ್ಕಾಲರ್‌ಶಿಪ್ ಯೋಜನೆಯಡಿ ವಿಕಲಚೇತನ ವಿದ್ಯಾರ್ಥಿಗಳು ಸ್ಕಾಲರ್‌ಶಿಪ್ ಪಡೆಯಲು https://scholarship.gov.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಪ್ರೀ ಮೆಟ್ರಿಕ್ ವಿದ್ಯಾರ್ಥಿಗಳು ನ.30ರೊಳಗೆ ಹಾಗೂ ಪೋಸ್ಟ್ ಮೆಟ್ರಿಕ್ ಮತ್ತು ಟಾಪ್ ಕ್ಲಾಸ್ ವಿದ್ಯಾರ್ಥಿಗಳು ಡಿ.31ರೊಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಪ್ರತಿಭಟನೆ



ಶ್ರೀರಂಗಪಟ್ಟಣ, ಅ.9– ತಮಿಳುನಾಡಿಗೆ ನೀರು ಬಿಡುಗಡೆ ಖಂಡಿಸಿ ಪಟ್ಟಣದಲ್ಲಿ ಭೂಮಿತಾಯಿ ಹೋರಾಟ ಸಮಿತಿಯಿಂದ ಸಾಂಪ್ರದಾಯಿಕ ಉಡುಗೆ ತೊಟ್ಟು ಗಂಟೆ ಬಾರಿಸುವ ಮೂಲಕ ತಮ್ಮ ಆಕ್ರೋಶ ಹೊರ ಹಾಕಿದರು.

ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ ಹಾಗೂ ಸಮಿತಿ ಅಧ್ಯಕ್ಷ ಬಲ್ಲೇನಹಳ್ಳಿ ಕೃಷ್ಣೇಗೌಡರ ನೇತೃತ್ವದಲ್ಲಿ ನೂರಾರು ರೈತರು ಬಿಳಿ ಷರ್ಟ್ ಮತ್ತು ಬಿಳಿ ಪಂಚೆ ಧರಿಸಿ ಪಟ್ಟಣದ ಕುವೆಂಪು ವೃತ್ತದಿಂದ ತಾಲೂಕು ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿ ರಾಜ್ಯ ಸರ್ಕಾರ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿದರು. ಇದೇ ವೇಳೆ ಪ್ರತಿಭಟನಾಕಾರರು, ಕಳೆದ 50 ದಿನಗಳಲ್ಲಿ ನಿರಂತರವಾಗಿ ಮಾಡುತ್ತಾ ಬಂದಿರುವ ಹೋರಾಟಗಳ ತುಣುಕನ್ನು ನೆನಪಿಸಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಕೂಡಲೇ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು. ಬೆಳೆಗಳಿಗೆ ನೀರು ಬಿಡಬೇಕು ಎಂದು ಕೆ.ಎಸ್.ನಂಜುಂಡೇಗೌಡ ಒತ್ತಾಯಿಸಿದರು.

ಒಂದನೇ ಪುಟದಿಂದ

ಮಹಿಷ ದಸರಾ ದಿನವೇ ಚಲೋ ಚಾಮುಂಡಿಬೆಟ್ಟ

ಡಾ.ಬಿ.ಟಿ.ಲಲಿತಾನಾಯಕ್ ಮಾಡುತ್ತಾರೆ ಎಂದಿದೆ. ಇವರು ಈ ಹಿಂದೆ ಸಚಿವರಾಗಿದ್ದಾಗ ಅವರ ಪುತ್ರ ಅಂಬೇಡ್ಕರ್ ಅವರ ಪ್ರತಿಮೆಗೆ ಅಪಮಾನ ಮಾಡಿದ್ದರು. ಅಂತಹವರು ಬಂದು ಮಹಿಷಾ ದಸರಾ ಉದ್ಘಾಟನೆ ಮಾಡುತ್ತಿದ್ದಾರೆ. ಕೆಲವರು ಅವರನ್ನು ಕರೆತರುವ ಮೂಲಕ ಅಂಬೇಡ್ಕರ್ ಅವರಿಗೆ ಅಪಮಾನ ಮಾಡು ತ್ತಿದ್ದಾರೆ ಎಂದು ದೂರಿದರು. ಅಂಬೇಡ್ಕರ್ ಪ್ರತಿಮೆಗೆ ಅಪಮಾನ ಮಾಡಿದ ವ್ಯಕ್ತಿಯ ತಾಯಿ ಬಿ.ಟಿ.ಲಲಿತಾ ನಾಯಕ್ ಕರೆತಂದು ನಿಮ್ಮ ನಾಯಕಿ ಎನ್ನುವಂತೆ ಉದ್ಘಾಟನೆ ಮಾಡಿಸುತ್ತಿದ್ದೀರಲ್ಲ ನೀವು ಬೌದ್ಧಿಕ ಹಾಗೂ ನೈತಿಕವಾಗಿ ಎಷ್ಟು ದಿವಾಳಿ ಆಗಿದ್ದೀರಿ ಎಂಬುದಕ್ಕೆ ಇದಕ್ಕಿಂತಲೂ ದೊಡ್ಡ ಉದಾಹರಣೆ ಬೇಕಿಲ್ಲ ಎಂದು ವಾಗ್ದಾಳಿ ನಡೆಸಿದರು.

ಬರೀ ಸುಳ್ಳು: ಇವರು 50 ವರ್ಷಗಳಿಂದ ಮಹಿಷಾ ದಸರಾ ಮಾಡುತ್ತಿರುವುದಾಗಿ ಹೇಳಿ, ಯಾರನ್ನು ಮೂರ್ಖರನ್ನಾಗಿ ಮಾಡುತ್ತಿದ್ದಾರೆ. 2016ರಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ, ಮಹಿಷಾ ದಸರಾ ಆಚರಣೆಗೆ ತರಲಾಯಿತು. ಆದರೆ ಈಗ 50 ವರ್ಷ ಎಂದು ಹೇಳಿಕೊಂಡು ಇತಿಹಾಸವನ್ನೇ ತಿರುಚಲು ಹೊರಟಿದ್ದಾರೆ. ಬಾಯಿ ಬಿಟ್ಟರೆ ಸುಳ್ಳರು ಇವರು. ಇವರದು ನಾಲ್ಕು ಜನರ ಗ್ಯಾಂಗು. ತಾವು 2009ರಲ್ಲಿ ಮೇಯರ್ ಆಗಿ ಅಂದು ಚಾಮುಂಡಿ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡಿದಾಗ ಪುರುಷೋತ್ತಮರಿಗೆ ಮಹಿಷಾ ನೆನಪಾಗಲಿಲ್ಲವೇ? ಎಂದು ಪ್ರಶ್ನಿಸಿದರು.

ಸ್ವಾಮೀಜಿ ವ್ಯರ್ಥ ಆಲಾಪನೆ

ಮಹಿಷಾ ದಸರಾ ನಿಲ್ಲಿಸಬೇಕೆಂದರೆ ಕಾನೂನು ಮೊರೆ ಹೋಗಲಿ ಎಂದು ಸ್ವಾಮೀಜಿ ಹೇಳುತ್ತಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಈ ಅಪ್ರಸ್ತುತ ವ್ಯಕ್ತಿಗಳ ವ್ಯರ್ಥ ಆಲಾಪನೆಗೆ ನಾನು ಉತ್ತರ ಕೊಡಲು ಹೋಗಲ್ಲ. ನೀವು ಸ್ವಾಮೀಜಿ ಎಂದು ಹೇಳುತಿದ್ದೀರಲ್ಲ, ಇಂತಹವರೆಲ್ಲರನ್ನೂ ಬಹಳ ಜನ ನೋಡಿದ್ದೇನೆ. ಆ ಸ್ವಾಮೀಜಿನೂ 2019ರಲ್ಲಿ ನನ್ನ ಹತ್ತಿರ ಬಂದಿದ್ದರು. ಅಂದೂ ಕೂಡ ಅವರಿಗೆ ನಮ್ಮ ದೃಢ ನಿಲುವು ಮನವರಿಕೆ ಮಾಡಿಕೊಟ್ಟಿದ್ದೆ.

ಚಲೋ ಚಾಮುಂಡಿಬೆಟ್ಟ ಹಾಗೂ ಮಹಿಷ ದಸರಾ ಎರಡೂ ಬೇಡ. ಮೈಸೂರು ದಸರಾ ಮಾತ್ರ ಆಗಲಿ ಎಂಬ ಕೂಗು ಕೂಡ ಇದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಮೈಸೂರಿಗರೂ ಸೇರಿದಂತೆ ಲಕ್ಷಾಂತರ ಜನ ತಾಯಿ ಚಾಮುಂಡಿಯ ಭಕ್ತರು ಇದ್ದಾರೆ. ಅವರಿಗೆ ಈ ಒಂದು ಅಪಚಾರ ಮಾಡುವಂತಹ ಮಹಿಷ ದಸರಾದಿಂದ ಅವರಿಗೆ ನೋವಾಗುತ್ತಿದೆ. ಹಾಗಾಗಿ ಇಂತಹ ಅಪಚಾರ ಮಾಡುವುದನ್ನು ನಿಲ್ಲಿಸಿ ಎಂದು ಈ ಹೋರಾಟ ಕೈಗೆತ್ತಿಕೊಂಡಿದ್ದೇವೆ. ಮೈಸೂರಿಗರ ಬೆಂಬಲದೊಂದಿಗೆ ನಾವು ಹೋರಾಟ ಮಾಡುತ್ತಿದ್ದೇವೆ. ಅಪಚಾರ ನಿಲ್ಲಿಸಿದರೆ ನಾವು ಹೋರಾಟ ಮಾಡುವಂತಹ ಅಗತ್ಯತೆ ಇರುವುದಿಲ್ಲ ಎಂದರು.

ತಾಯಿಗೆ ಅಪಮಾನ ಮಾಡಿದರೆ ಸುಮ್ಮನಿರ್ತೀರಾ

ನಾನು ಮೈಸೂರಿನ ಎಲ್ಲಾ ನಾಗರಿಕರನ್ನು ಪ್ರಾರ್ಥಿಸುತ್ತೇನೆ. ಆಷಾಢ ಶುಕ್ರವಾರ ಬಂತೆಂದರೆ ಒಬ್ಬರ ಮೇಲೆ ಒಬ್ಬರು ಬಿದ್ದು ಬೆಟ್ಟಕ್ಕೆ ಹೋಗುತ್ತೀರಿ. ನಿಮ್ಮ ಕಷ್ಟ ಸುಖಕ್ಕೂ ತಾಯಿ ಚಾಮುಂಡಿ ಬಳಿಗೆ ಹೋಗುತ್ತೀರಿ. ಜಂಬೂ ಸವಾರಿಯಲ್ಲಿ ತಾಯಿ ಚಾಮುಂಡೇಶ್ವರಿ ಮೆರವಣಿಗೆಯಲ್ಲಿ ಹೋಗುವುದನ್ನು ನೋಡಬೇಕೆಂದು ಬಯಸುತ್ತೀರಿ. ನಿಮ್ಮ ತಾಯಿಗೆ ಅವಮಾನ ಮಾಡುವಂತಹ ಇಂತಹ ಘಟನೆ ನಡೆಯುತ್ತಿರುವ ಸಂದರ್ಭದಲ್ಲಿ ಏಕೆ ಮಾತನಾಡುತ್ತಿಲ್ಲ. ನಿಮ್ಮ ಸ್ವಂತ ತಾಯಿಗೆ ನಿಂದಿಸಿದರೆ ಸುಮ್ಮನಿರುತ್ತೀರಾ? ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಕುರ್ಚಿಯಲ್ಲಿ ಯಾರೂ ಬೇಕಾದರೂ ಕುಳಿತಿರಬಹುದು. ಇಂದು ಸಿದ್ದರಾಮಯ್ಯ ಇದ್ದಾರೆ. ನಾಳೆ ಇನ್ನಾರಾದರೂ ಬರಬಹುದು. ಆದರೆ ತಾಯಿ ಚಾಮುಂಡಿಗೆ ಯಾರೂ ಬಂದರೂ ಧಕ್ಕೆ ಮಾಡುವಂತಹ ಪ್ರಯತ್ನಕ್ಕೆ ಯಾರೂ ಕೈ ಹಾಕಬಾರದು. ಅಂತಹ ಒಂದು ಸಂದೇಶವನ್ನು ನಾವು ಕೊಡಬೇಕು. ಅದಕ್ಕಾಗಿ ಅಂದು ಬೆಳಗ್ಗೆ 8ಕ್ಕೆ ಎಲ್ಲರೂ ತಾವರೆಕಟ್ಟೆ ಬಳಿಗೆ ಬರಬೇಕೆಂದು ನಾಗರಿಕರಲ್ಲಿ ಮನವಿ ಮಾಡಿದರು.

ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆ ಸರಿಯಲ್ಲ

ಸಿದ್ದರಾಮಯ್ಯನವರೇ, ನೀವು ರಾಜ್ಯದ ಮುಖ್ಯಮಂತ್ರಿ ಇದ್ದೀರಿ. ಅ.15ರಂದು ಬಂದು ತಾಯಿ ಚಾಮುಂಡಿಗೆ ಪುಷ್ಪಾರ್ಚನೆ ಮಾಡುತ್ತೀರಿ. ಅ.13ರಂದು ಯಾರೂ ಏನೂ ಬೇಕಾದರೂ ಮಾಡಿಕೊಂಡು ಹೋಗಲಿ ಎಂದು ಬಿಟ್ಟುಬಿಟ್ಟರೆ ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಪ್ರಹಾರ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಒಳ್ಳೆಯದಲ್ಲ. ನೀವು ಮುಖ್ಯಮಂತ್ರಿ ಆಗಿ ಇದಕ್ಕೆಲ್ಲಾ ಅವಕಾಶ ಮಾಡಿಕೊಡಬಾರದು. ತಾಯಿ ಚಾಮುಂಡಿಯ ಅಪ್ಪಟ ಭಕ್ತೆ ನಿಮ್ಮ ಮನೆಯಲ್ಲೇ ಇದ್ದಾರೆ. ಅವರು ಒಪ್ಪುತ್ತಾರಾ? ಎಂದು ಕೇಳಿ ಎಂದು ಕುಟುಕಿದರು.

ವಿ.ಶ್ರೀನಿವಾಸ ಪ್ರಸಾದ್ ಅವರನ್ನೂ ಚಲೋ ಚಾಮುಂಡಿ ಹೋರಾಟಕ್ಕೆ ಆಹ್ವಾನಿಸುತ್ತೀರಾ? ಎಂಬುದಕ್ಕೆ ಪ್ರತಿಕ್ರಿಯಿಸಿ, ಶ್ರೀನಿವಾಸ ಪ್ರಸಾದ್ ಸಾಹೇಬರು ನಮ್ಮ ನಾಯಕರು. ಎಲ್ಲರೂ ಬರುತ್ತಾರೆ. ಜಾತ್ಯಾತೀತ ಮತ್ತು ಧರ್ಮಾತೀತವಾಗಿ ಎಲ್ಲರೂ ಕೈಜೋಡಿಸುತ್ತಾರೆ. ಶ್ರೀನಿವಾಸ ಪ್ರಸಾದ್ ಸಾಹೇಬರ ಮಾರ್ಗದರ್ಶನವನ್ನು ಪ್ರತಿ ವಿಚಾರದಲ್ಲಿ ನಾವು ಪಡೆದುಕೊಳ್ಳುತ್ತೇವೆ ಎಂದರು.

ಮಹಿಷನ ಅವರ ಮನೆಯಲ್ಲಿ ಪ್ರಾರ್ಥಿಸಲಿ

ಪತ್ರಿಕಾಗೋಷ್ಠಿಯಲ್ಲಿ ನನ್ನ ಬಗ್ಗೆ ಏಕವಚನದಲ್ಲಿ ಮಾತನಾಡುತ್ತಿದ್ದಾರೆ. ಅವರಿಗೆ ಎಚ್ಚರಿಕೆ ನೀಡುತ್ತೇನೆ. ವಾಪಸ್ಸು ಕೊಟ್ಟರೆ ಅದೇ ಭಾಷೆಯಲ್ಲೇ ಕೊಡುತ್ತೇನೆ. ಗೌರವಯುತವಾಗಿ ಮಾತನಾಡುವುದನ್ನು ಕೂಡ ಕಲಿತುಕೊಳ್ಳಬೇಕು. ಅವರಿಗೆ ಮಹಿಷನನ್ನು ಪ್ರಾರ್ಥನೆ ಮಾಡಬೇಡಿ ಎಂದು ನಾನು ಹೇಳಿಲ್ಲ. ಅವರ ಮನೆಯಲ್ಲಿ ಮಾಡಿಕೊಳ್ಳಲಿ.

ಒಬ್ಬ ಸಂಸದರಾಗಿ ಸಂಘರ್ಷಕ್ಕೆ ಕರೆ ಕೊಡುವುದು ಎಷ್ಟು ಸರಿ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸಂಘರ್ಷ ಮಾಡಿಕೊಂಡೇ ನಾವು ಪಕ್ಷ ಕಟ್ಟಿರೋದು. ದೇಶವನ್ನೂ ಕಟೋದು. ಬಾರ್ಡರ್‌ನಲ್ಲಿ ಹೋಗಿ ಚೀನಾ, ಪಾಕಿಸ್ತಾನದವರು ಬರುತ್ತಾರೆ, ನಾವು ಸಂಘರ್ಷ ಮಾಡಲು ಆಗಲ್ಲ ಎನ್ನಲಾದೀತೇ. ಗಡಿ ಕಾಯಬೇಕಾದರೂ ಸಂಘರ್ಷ ಮಾಡಬೇಕಾಗುತ್ತದೆ. ಧರ್ಮ ರಕ್ಷಣೆಗೂ ಸಂಘರ್ಷ ಮಾಡಬೇಕಾಗುತ್ತದೆ. ಇದು ತಾಯಿ ಆತ್ಮಗೌರವದ ಪ್ರಶ್ನೆ. ಅದನ್ನು ಉಳಿಸಲು ಸಂಘರ್ಷ ಮಾಡಲು ಸಿದ್ಧವಾಗಿದ್ದೇವೆ ಎಂದರು.

ಚಲೋ ಚಾಮುಂಡಿ ಬೆಟ್ಟ ಹೋರಾಟಕ್ಕೆ ಪೊಲೀಸರ ಅನುಮತಿಗೆ ಮನವಿ ಮಾಡಿದ್ದೇವೆ. 2019ರಲ್ಲಿ ವಿ.ಸೋಮಣ್ಣ ಸಾಹೇಬರು ಮಹಿಷ ದಸರಾ ನಿಲ್ಲಿಸಿದ್ದರು. ಧಾರ್ಮಿಕ ಆಚರಣೆಗೆ ಸಂವಿಧಾನದಲ್ಲಿ ಅವಕಾಶವಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ಸಂವಿಧಾನದಲ್ಲಿ ಬೇರೆಯವರ ಧಾರ್ಮಿಕ ಭಾವನೆಗೆ ಧಕ್ಕೆ ತರಬಾರದು ಎಂದಿದೆ. ಮಹಿಷನದ್ದು ಯಾವ ಧರ್ಮ. ಬೌದ್ಧ ಧರ್ಮ ಯಾವಾಗ ಹುಟ್ಟಿತು. ಮಹಿಷ ಯಾವಾಗ ಬೌದ್ಧ ಬಿಕ್ಕು ಆದ ಎಂಬುದು ನನಗೆ ಅರ್ಥವಾಗುತ್ತಿಲ್ಲ ಎಂದರು.

ಈ ವಿಚಾರದಲ್ಲಿ ಸಂವಾದ ಆದಲ್ಲಿ ನಾನು ಸೋಲಿಸುತ್ತೇನೆ. ವಿಚಾರ ಇರಬೇಕು. ಆದರೆ ಉಗುಳು ಇರಬಾರದು. ವೈಚಾರಿಕವಾಗಿ ಚರ್ಚೆಗೆ ಬಂದರೆ ಅವರೊಂದಿಗೆ ಚರ್ಚೆ ಮಾಡಬಹುದು. ವಿಚಾರವಿಲ್ಲದೆ, ಬರೀ ಉಗುಳುವವರ ಬಳಿ ಚರ್ಚೆ ಸಾಧ್ಯವೇ? ಎಂದು ಪ್ರಶ್ನೆಯೊಂದಕ್ಕೆ ಮರು ಪ್ರಶ್ನೆ ಹಾಕಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಉಪ ಮೇಯರ್ ರೂಪಾ, ಬಿಜೆಪಿ ಮುಖಂಡರಾದ ಮೈ.ವಿ.ರವಿಶಂಕರ್, ಮೋಹನ್, ವಾಣೀಶ್, ಸೋಮಸುಂದರ್ ಮತ್ತಿತರರು ಹಾಜರಿದ್ದರು.

ವೀರಪ್ಪನ್ ನಮ್ಮ ದೇವರು ಅಂತಾರೆ!

ಬಾಯಿ ಬಿಟ್ಟರೆ ಸುಳ್ಳರು. ಒಂದು ಗ್ಯಾಂಗ್ ಕಟ್ಟಿಕೊಂಡು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇವರನ್ನು ತಡೆಯದೇ ಇದ್ದರೆ ಮುಂದೊಂದು ದಿನ ಇವರು ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗಿ ವೀರಪ್ಪನ್ ನಮ್ಮ ದೇವರು ಎಂದು ಬೇಕಾದರೂ ಹೇಳಿ ಮಲೆ ಮಹದೇಶ್ವರರನ್ನು ದ್ವೇಷ ಮಾಡುತ್ತಾರೆ. ಇಂತಹ ಮನಸ್ಥಿತಿವುಳ್ಳವರು ಇವರು. ದೇವಿ ತಾಯಿ ಚಾಮುಂಡಿಯನ್ನು ದೆವ್ವ ಮಾಡಿ, ಮಹಿಷನನ್ನು ದೇವರು ಮಾಡಲು ಹೊರಟ್ಟಿದ್ದಾರೆ. ಮುಂದೊಂದು ದಿನ ವೀರಪ್ಪನ್ ಪ್ರಕೃತಿ ಸಂರಕ್ಷಕ, ಅವನೇ ನಮ್ಮ ಮೂಲನಿವಾಸಿ. ಅವನೇ ನಮ್ಮ ನಾಯಕ ಎಂದು ಬಿಂಬಿಸುತ್ತಾರೆ ಎಂದು ಕಿಡಿಕಾರಿದರು.

ಸಂಘರ್ಷಕ್ಕೆ ಸಿದ್ಧವಾಗಿದ್ದೇವೆ

ಮಹಿಷ ದಸರಾ ಮತ್ತು ಚಲೋ ಚಾಮುಂಡಿಬೆಟ್ಟ ಹೋರಾಟದಿಂದ ಸಂಘರ್ಷವಾದರೆ ಹೊಣೆ ಯಾರು ಎಂಬುದಕ್ಕೆ ಪ್ರತಿಕ್ರಿಯಿಸಿ ಸಂಘರ್ಷಕ್ಕೆ ಸಿದ್ಧವಾಗಿದ್ದೇವೆ. ಪಾಠ ಕಲಿಸಬೇಕೆಂದೇ ಅದೇ ಸಮಯಕ್ಕೆ ನಮ್ಮ ಹೋರಾಟ ನಿಗದಿ ಮಾಡಿದ್ದೇವೆ. ಅದೇ ಸಮಯಕ್ಕೆ ಮಹಿಷ ಪ್ರತಿಮೆ ಬಳಿ ಬಂದರೆ ಸಂಘರ್ಷಕ್ಕೂ ಸಿದ್ಧವಾಗಿದ್ದೇವೆ ಎಂಬ ಸಂದೇಶ ಕೊಟ್ಟೇ ಅಲ್ಲಿಗೆ ಹೋಗುತ್ತಿದ್ದೇವೆ. ಈ ಬಾರಿ ಸಂಘರ್ಷ ಆದರೂ ಪರವಾಗಿಲ್ಲ ಎಂದು ಕಿಡಿಕಾರಿದರು. ಸಂಘರ್ಷಕ್ಕೆ ಪ್ರತಾಪ್ ಸಿಂಹ ಪ್ರೇರಣೆ ನೀಡುತ್ತಿದ್ದಾರೆ. ಹಾಗಾಗಿ ಅವರನ್ನು ಬಂಧಿಸಿ ಎಂದು ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹ ಮಾಡಿದ್ದಾರೆ ಎಂಬುದಕ್ಕೆ ಪ್ರತಿಕ್ರಿಯಿಸಿ, 2009ರಲ್ಲಿ ಅವರು ಮೇಯರ್ ಆಗಿ ದಸರಾದಲ್ಲಿ ಪುಷ್ಪಾರ್ಚನೆ ಮಾಡಿದಾಗ ಮಹಿಷ ಸತ್ತಿದ್ದನೇ ಎಂದು ಪ್ರಶ್ನಿಸಿದರು.



ವಿಶ್ವಕಪ್‌ನಲ್ಲಿ ಮುಂದುವರೆದ ನ್ಯೂಜಿಲ್ಯಾಂಡ್ ಗೆಲುವಿನ ಓಟ

● ಟೂರ್ನಿಯಲ್ಲಿ ಸತತ 2ನೇ ಗೆಲುವು ದಾಖಲಿಸಿದ ಕಿವೀಸ್ ● ಮಿಚೆಲ್ ಸ್ಯಾಂಟ್ನರ್ ಪಂದ್ಯಶ್ರೇಷ್ಠ



ಹೈದರಾಬಾದ್, ಅ.9– ಮಿಚೆಲ್ ಸ್ಯಾಂಟ್ನರ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ನೆದರ್ಲೆಂಡ್ಸ್ ವಿರುದ್ಧ ನ್ಯೂಜಿಲ್ಯಾಂಡ್ 99 ರನ್‌ಗಳ ಗೆಲುವು ಗಳಿಸಿದೆ. ಆ ಮೂಲಕ ವಿಶ್ವಕಪ್ ಟೂರ್ನಿಯಲ್ಲಿ ಸತತ 2ನೇ ಜಯ ಸಾಧಿಸಿ, ಗೆಲುವಿನ ಓಟ ಮುಂದುವರೆಸಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲ್ಯಾಂಡ್ ಪರ ಇನ್ನಿಂಗ್ಸ್ ಆರಂಭಿಸಿದ ಡೆವೊನ್ ಕಾನ್ವೆ ಹಾಗೂ ವಿಲ್ ಯಂಗ್ ಮೊದಲ ವಿಕೆಟ್‌ಗೆ 67 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಕಾನ್ವೆ 1 ಸಿಕ್ಸರ್, 4 ಬೌಂಡರಿ ಒಳಗೊಂಡ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ವಿಲ್ ಯಂಗ್ ಜೊತೆಗೂಡಿದ ರಚಿನ್ ರವೀಂದ್ರ 2ನೇ ವಿಕೆಟ್‌ಗೆ 77 ರನ್‌ಗಳ ಜೊತೆಯಾಟವಾಡಿದರು. ಮತ್ತೊಂದೆಡೆ ಅರ್ಧಶತಕ ಸಿಡಿಸಿದ ವಿಲ್ ಯಂಗ್ 2 ಸಿಕ್ಸರ್, 7 ಬೌಂಡರಿ ಒಳಗೊಂಡ 70 ರನ್ ಗಳಿಸಿ ನಿರ್ಗಮಿಸಿದರು. ಕಳೆದ ಪಂದ್ಯದಲ್ಲಿ ಶತಕ ಸಿಡಿಸಿದ್ದ ಕರ್ನಾಟಕ ಮೂಲದ ರಚಿನ್ ರವೀಂದ್ರ ಇಂದು 51ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಡ್ಯಾರಿಯಲ್ ಮಿಚೆಲ್ 48, ಟಾಮ್ ಲೆಥಮ್ 53 ರನ್ ಗಳಿಸಿ ಔಟಾದರು. ಇನ್ನಿಂಗ್ಸ್‌ನ ಅಂತಿಮ ಓವರ್‌ಗಳಲ್ಲಿ ಬಿರುಸಿನ ಬ್ಯಾಟಿಂಗ್ ಮಾಡಿದ ಮಿಚೆಲ್ ಸ್ಯಾಂಟ್ನರ್ 17 ಎಸೆತಗಳಲ್ಲಿ 2 ಸಿಕ್ಸರ್, 3 ಬೌಂಡರಿ ಒಳಗೊಂಡ 36 ರನ್ ಗಳಿಸಿ ತಂಡದ ಮೊತ್ತವನ್ನು 300ರ ಗಡಿ ದಾಟಿಸಿದರು. ಉಳಿದಂತೆ ಮ್ಯಾಟ್ ಹೆನ್ರಿ 10, ಗ್ಲೆನ್ ಫಿಲಿಪ್ 4, ಮಾರ್ಕ್ ಚಾಪ್‌ಮನ್ 5 ರನ್ ಗಳಿಸಿದರು. ಅಂತಿಮವಾಗಿ ನ್ಯೂಜಿಲ್ಯಾಂಡ್ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 322 ರನ್ ದಾಖಲಿಸಿತು. ನೆದರ್ಲೆಂಡ್ಸ್ ಪರ ಬೌಲಿಂಗ್‌ನಲ್ಲಿ ಆರ್ಯನ್ ದತ್, ವ್ಯಾನ್ ಮೀಕರೆನ್, ವ್ಯಾನ್‌ಡರ್ ಮೆರ್ವೆ ತಲಾ 2, ಬಾಸ್ ಡಿ ಲೀಡೆ ಒಂದು ವಿಕೆಟ್ ಉರುಳಿಸಿದರು.

ನ್ಯೂಜಿಲ್ಯಾಂಡ್ ನೀಡಿದ 323ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 46.3 ಓವರ್‌ಗಳಲ್ಲಿ 223 ರನ್‌ಗಳಿಗೆ ಆಲೌಟ್ ಆಗುವ ಮೂಲಕ 99 ರನ್‌ಗಳ ಸೋಲು ಅನುಭವಿಸಿತು. ನೆದರ್ಲೆಂಡ್ಸ್ ಪರ ಕಾಲಿನ್ ಆಕರ್ಮನ್ 5 ಬೌಂಡರಿ ಒಳಗೊಂಡ 69ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ದೊಡ್ಡ ಇನ್ನಿಂಗ್ಸ್ ಮೂಡಿಬರಲಿಲ್ಲ. ಉಳಿದಂತೆ ವಿಕ್ರಮ್ ಜಿತ್ ಸಿಂಗ್ 12, ಮ್ಯಾಕ್ಸ್ ಒಡೌಡ್ 16, ಬಾಸ್ ಡಿ ಲೀಡೆ 18, ತೇಜ ನಿಡಮಾನೂರು 21, ಸ್ಕಾಟ್ ಎಡ್ವರ್ಡ್ 30, ಸೈಬ್ರಾಂಡ್ ಎಂಗಲ್‌ಬ್ರೆಕ್ಟ್ 29, ಆರ್ಯನ್ ದತ್ 11 ರನ್ ಗಳಿಸಿದರು. ನ್ಯೂಜಿಲ್ಯಾಂಡ್ ಪರ ಬೌಲಿಂಗ್‌ನಲ್ಲಿ ಮಿಚೆಲ್ ಸ್ಯಾಂಟ್ನರ್ 5 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು. ಮ್ಯಾಟ್ ಹೆನ್ರಿ 3, ರಚಿನ್ ರವೀಂದ್ರ ಒಂದು ವಿಕೆಟ್ ಪಡೆದರು. ನ್ಯೂಜಿಲೆಂಡ್‌ನ ಮಿಚೆಲ್ ಸ್ಯಾಂಟ್ನರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ನ್ಯೂಜಿಲ್ಯಾಂಡ್	2	2	0	0	4
ದಕ್ಷಿಣ ಆಫ್ರಿಕಾ	1	1	0	0	2
ಪಾಕಿಸ್ತಾನ್	1	1	0	0	2
ಬಾಂಗ್ಲಾದೇಶ	1	1	0	0	2
ಇಂಡಿಯಾ	1	1	0	0	2
ಆಸ್ಟ್ರೇಲಿಯಾ	1	0	1	0	0
ಅಫ್ಘಾನಿಸ್ತಾನ್	1	0	1	0	0
ನೆದರ್‌ಲ್ಯಾಂಡ್ಸ್	2	0	2	0	0
ಶ್ರೀಲಂಕಾ	1	0	1	0	0
ಇಂಗ್ಲೆಂಡ್	1	0	1	0	0

ಮೈಸೂರು ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷರಾಗಿ ಎಂ.ಸಿ. ಮಲ್ಲಿಕಾರ್ಜುನ್


ಮಲ್ಲಿಕಾರ್ಜುನ್


ಅಜಯ್‌ಕುಮಾರ್


ವಿಶ್ವನಾಥ್


ದಿನೇಶ್

ಮೈಸೂರು, ಅ. 9– ಮೈಸೂರಿನ ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಆಡಳಿತ ಮಂಡಲಿ ಚುನಾವಣೆ ಭಾನುವಾರ ನಡೆದಿದ್ದು, ಎಂ.ಸಿ.ಮಲ್ಲಿಕಾರ್ಜುನ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಅಜಯ್‌ಕುಮಾರ್ ಸಿಂಗ್, ಕಾರ್ಯದರ್ಶಿಯಾಗಿ ಡಿ. ವಿಶ್ವನಾಥ್, ಖಜಾಂಚಿಯಾಗಿ ಎಸ್.ಕೆ. ದಿನೇಶ್ ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ಆದಿತ್ಯ ಗೌಡ, ಎನ್. ರವಿಶಂಕರ್, ಕೆ.ಎಸ್.ಗುರುರಾಜ್, ಬ್ರಿಜೇಶ್ ಅರಸ್, ಆರ್. ರೋಹಿತ್, ಆರ್, ಕರಣ್, ಗಫಾರ್ ಇಕ್ಬಾಲ್ ಮತ್ತು ಎಂ.ಸಿ. ವಿಠಲ್ ಆಯ್ಕೆಯಾಗಿದ್ದಾರೆ.

ಮೈಸೂರು, ಕೊಡಗು ಸೇರಿ ಹಳೇ ಮೈಸೂರು ಭಾಗದಲ್ಲಿ ಅಕಾಲಿಕ ಮಳೆ

ಹಲವೆಡೆ ಭಾರಿ ಗುಡುಗಿನೊಂದಿಗೆ ವರುಣನ ಆರ್ಭಟ



ಮೈಸೂರು, ಅ. 9(ಬಿಎಲ್‌ಯು)– ಈ ಬಾರಿ ಮುಂಗಾರು ಕೈಕೊಟ್ಟಿದ್ದು, ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಾಗಿದೆ. ಇನ್ನೇನು ಮುಂಗಾರು ಕೊನೆಗೊಂಡಿದೆ. ಮೈಸೂರು, ಬೆಂಗಳೂರು, ಕೊಡಗು ಸೇರಿದಂತೆ ಹಲವೆಡೆ ಅಕಾಲಿಕವಾಗಿ ಸಾಧಾರಣ ಮಳೆ ಸುರಿದಿದೆ.

ಸಾಮಾನ್ಯವಾಗಿ ಮುಂಗಾರು ಮಳೆ ಜೂನ್‌ನಲ್ಲಿ ಆರಂಭವಾಗಿ ಸೆಪ್ಟೆಂಬರ್ ಅಂತ್ಯಕ್ಕೆ ಕೊನೆಗೊಳ್ಳುತ್ತದೆ. ಆದರೆ, ಈ ಬಾರಿ ಮುಂಗಾರು ಜೂನ್ ಅಂತ್ಯದಲ್ಲಿ ಆರಂಭವಾಯಿತಾದರೂ, ವಾಡಿಕೆಗಿಂತ ಹಲವು ಪಟ್ಟು ಮಳೆ ಕಡಿಮೆ ಸುರಿದಿದೆ. ಕೆರೆ–ಕಟ್ಟೆಗಳು ನೀರಿಲ್ಲದೆ ಒಣಗಿ ನಿಂತಿದ್ದರೆ, ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿದೆ. ಇನ್ನೇನು ಮುಂಗಾರು ಕೊನೆಗೊಂಡಿತು ಎನ್ನುತ್ತಿರುವಾಗಲೇ ಈಗ ಅಕಾಲಿಕವಾಗಿ ಸಾಧಾರಣ ಮಳೆ ಸುರಿದಿದ್ದು, ಈ ಮಳೆಯನ್ನು ಹವಾಮಾನ ಇಲಾಖೆ ತಜ್ಞರು ಮುಂಗಾರು ಹಿಂಪಡೆಯುವಿಕೆ ಎಂದು ಕರೆದಿದ್ದಾರೆ.

ಹಿಂದೂ ಮಹಾಸಾಗರದಲ್ಲಿ ಉಷ್ಣಾಂಶ ಹೆಚ್ಚಾದರೆ ಆಗಸದಲ್ಲಿ ಮೋಡ ಕಟ್ಟಿ, ಹೆಚ್ಚಾಗಿ ಅದು ಭಾರತದ ಕಡೆಗೆ ಗಾಳಿಯ ಮೂಲಕ ಸಾಗಿ ಈ ಭಾಗದಲ್ಲಿ ಮಳೆ ಸುರಿಯುತ್ತದೆ ಇದು ವಾಡಿಕೆ. ಆದರೆ, ಈ ಬಾರಿ ಪೆಸಿಫಿಕ್ ಸಾಗರದಲ್ಲಿ ಉಷ್ಣಾಂಶ ಹೆಚ್ಚಾದ ಕಾರಣ ಮಳೆಯ ಮೋಡಗಳು ಭಾರತದತ್ತ ಬಾರದೇ ಆಸ್ಟ್ರೇಲಿಯಾ ಹಾಗೂ ಇತರ ದೇಶಗಳ ಕಡೆ ಸಾಗಿದ್ದು, ಆ ಭಾಗದಲ್ಲಿ ಉತ್ತಮ ಮಳೆಯಾಗಿದ್ದರೆ, ಭಾರತದ ಕರ್ನಾಟಕ ಸೇರಿದಂತೆ ಹಲವೆಡೆ ಮಳೆ ಇಲ್ಲದೆ ಬರಗಾಲ ಪರಿಸ್ಥಿತಿ ಉಂಟಾಯಿತು ಎಂದು ಮೈಸೂರಿನ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಸಹ ಸಂಶೋಧಕ ಡಾ. ಸುಮಂತ್‌ಕುಮಾರ್ ತಿಳಿಸಿದ್ದು, ಹವಾಮಾನ ಇಲಾಖೆಯ ವಿಜ್ಞಾನಿಗಳ ಪ್ರಕಾರ ಮುಂದಿನ ವರ್ಷವೂ ಮುಂಗಾರು ಕೈಕೊಡಲಿದೆ ಎಂದ ಅವರು, ಹಿಂಗಾರು ಮಳೆ ಯಾವಾಗ ಸುರಿಯಲಿದೆ ಎಂಬುದರ ಬಗ್ಗೆ ನಮಗೆ ಹವಾಮಾನ ಇಲಾಖೆಯ ಕೇಂದ್ರ ಕಚೇರಿಯಿಂದ ಇನ್ನೂ ವರದಿ ಬಂದಿಲ್ಲ ಎಂದು ತಿಳಿಸಿದರು.

ಇಂದು ಮೈಸೂರು ಮತ್ತು ಬೆಂಗಳೂರು ಸೇರಿದಂತೆ ಹಲವೆಡೆ ಮಳೆ ಸುರಿದಿದೆ. ಈ ಅಕಾಲಿಕ ಮಳೆಯಿಂದಾಗಿ ವಾಹನ ಸವಾರರು ಪರದಾಡುವಂತಾಯಿತು. ಇನ್ನು ದಕ್ಷಿಣ ಕೊಡಗಿನಲ್ಲಿ ಕಳೆದ ಮೂರು ದಿನಗಳಿಂದ ತುಂತುರು ಮಳೆ ಸುರಿಯುತ್ತಿತ್ತು. ಆದರೆ, ಇಂದು ಬೆಳಗ್ಗೆ ವಿರಾಜಪೇಟೆ ಮತ್ತು ನಾಪೋಕ್ಲು ಭಾಗದಲ್ಲಿ ದಿಢೀರನೇ ಮಳೆ ಸುರಿದಿದೆ. ನಾಪೋಕ್ಲುವಿನಲ್ಲಿ ಸಂತೆ ದಿನವಾದ ಸೋಮವಾರದಂದು ಮಳೆ ನಿರೀಕ್ಷೆ ಇಲ್ಲದ ಕಾರಣ ವ್ಯಾಪಾರಸ್ಥರು ಹಾಗೂ ಗ್ರಾಹಕರು ಕೊಡೆ ಹಾಗೂ ಮಳೆಗೆ ರಕ್ಷಣೆ ಪಡೆಯುವ ಯಾವುದೇ ವಸ್ತು ತಾರದ ಕಾರಣ ಪರದಾಡುವಂತಾಯಿತು.

ಮೂರ್ನಾಡು, ಕೊಟ್ಟಮುಡಿ, ಕೊಂಡಂಗೇರಿ ಭಾಗದಲ್ಲೂ ಧಾರಾಕಾರವಾಗಿ ಮಳೆಯಾಗಿದ್ದು, ರಸ್ತೆಗಳಲ್ಲಿ ಕೆಲ ಸಮಯ ಹೊಳೆಯಂತೆ ನೀರು ಹರಿದಿದೆ. ಭಾರಿ ಗುಡುಗಿನೊಂದಿಗೆ ಸುಮಾರು 2 ಗಂಟೆಗಳ ಕಾಲ ಮಳೆ ಸುರಿದಿದ್ದು, ಇಂದು ಈ ಭಾಗದಲ್ಲಿ 1 ಇಂಚಿನಷ್ಟು ಮಳೆಯಾಗಿದೆ. ಹೀಗಾಗಿ ಹಾರಂಗಿ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿತ್ತು.


ಮೈಸೂರಿನಲ್ಲಿ ಸುರಿದ ಭಾರಿ ಮಳೆಗೆ ಮೈಸೂರು ಟಿ.ಕೆ.ಬಡಾವಣೆಯ ಬಿಎಸ್‌ಎನ್‌ಎಲ್ ಕಚೇರಿ ಎದುರಿನ ರಸ್ತೆಯಲ್ಲಿ ಮರವೊಂದು ನೆಲಕ್ಕುರುಳಿ, ಈ ಮಾರ್ಗದ ಸಂಚಾರದಲ್ಲಿ ವ್ಯತ್ಯಯವಾಗಿದೆ.

ಆಶ್ರಮ ಶಾಲೆ ವಿದ್ಯಾರ್ಥಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶಿಕ್ಷಕರು ಮುಂದಾಗಬೇಕು

ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಡಾ. ಪುಷ್ಪವತಿ ಸಲಹೆ



ಮೈಸೂರು,ಅ.9(ಎಂಟಿವೈ)– ಆಶ್ರಮ ಶಾಲೆಯ ವಿದ್ಯಾರ್ಥಿಗಳನ್ನು ಮಾನಸಿಕ, ದೈಹಿಕವಾಗಿ ಸದೃಢರನ್ನಾಗಿ ಮಾಡುವುದರೊಂದಿಗೆ ಸಮಾಜದ ಮುಖ್ಯವಾಹಿನಿಗೆ ಕೊಂಡೊಯ್ಯಲು ಶಿಕ್ಷಕರು ಮುಂದಾಗಬೇಕು ಎಂದು ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ. ಪುಷ್ಪವತಿ ಸಲಹೆ ನೀಡಿದ್ದಾರೆ.

ಮೈಸೂರಿನ ರಾಜರಾಜೇಶ್ವರಿ ನಗರದ ಬಳಿಯಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸಭಾಂಗಣದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ನಿಲಯ ಮೇಲ್ವಿಚಾರಕರು ಹಾಗೂ ಆಶ್ರಮ ಶಾಲೆಗಳ ಶಿಕ್ಷಕರುಗಳಿಗಾಗಿ 'ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಮೇಲ್ವಿಚಾರಣೆ ಮಾಡುವ ವಿಧಾನಗಳು ಮತ್ತು ಮಾನಸಿಕ ಒತ್ತಡ ನಿರ್ವಹಣೆ' ಕುರಿತ ಒಂದು ದಿನದ ಅರಿವು ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮುದಾಯದತ್ತ ಹೋಗುವುದೇ ನಮ್ಮ ಸಂಸ್ಥೆಯ ಮೂಲ ಗುರಿಯಾಗಿದೆ. ಆ ಗುರಿಯನ್ನು ತಲುಪಿ ಆರೋಗ್ಯವಾಗಿರುವ ಮಕ್ಕಳನ್ನು ದೇಶಕ್ಕೆ ಕೊಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಹಾಡಿ ಮಕ್ಕಳ ಕಡೆ ಶಿಕ್ಷಕರು ಹೆಚ್ಚು ಗಮನ ಕೊಡುವುದರ ಜೊತೆಗೆ ಅವರಲ್ಲಿ ಆತ್ಮವಿಶ್ವಾಸ ತುಂಬಬೇಕು. ನಿಮ್ಮ ಮಕ್ಕಳಂತೆ ಕಾಣಬೇಕು ಎಂದು ತಿಳಿಸಿದರು.

ಏಷ್ಯನ್ ಕ್ರೀಡೆಗಳಲ್ಲಿ ಬುಡಕಟ್ಟು ಸಮುದಾಯ ಮಕ್ಕಳು ಮುಂದೆ ಇರುತ್ತಾರೆ. ಈ ಹಿನ್ನೆಲೆಯಲ್ಲಿ ಕ್ರೀಡೆಗಳಲ್ಲಿ ಆಸಕ್ತಿಯುಳ್ಳವರನ್ನು ಗುರುತಿಸಬೇಕು. ನಿಮ್ಮ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಆಶ್ರಮ ಶಾಲೆಯ ಮಕ್ಕಳ ಹಿತಕಾಯಲು ಮುಂದಾಗಬೇಕು ಎಂದರು.


ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಎಲ್. ಶ್ರೀನಿವಾಸ್ ಮಾತನಾಡಿ, ನಮ್ಮ ಸಂಸ್ಥೆ ಈಗಾಗಲೇ 11 ಆಶ್ರಮ ಶಾಲೆಗಳ ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸಿ, ಆರೋಗ್ಯ ಸಮಸ್ಯೆ ಗುರುತಿಸಿ ಚಿಕಿತ್ಸೆ ಕೊಡಿಸಲಾಗಿದೆ. ಮುಂದಿನ ದಿನಗಳಲ್ಲಿ ಉತ್ತರ ಕರ್ನಾಟಕ ಭಾಗದ ಆಶ್ರಮ ಶಾಲೆಗಳಲ್ಲಿಯೂ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತದೆ. ಇದಕ್ಕೆ ಎಲ್ಲಾ ವೈದ್ಯರು ಆರೋಗ್ಯ ಸಂಸ್ಥೆಗಳು ಸಹಕಾರ ನೀಡಬೇಕು. ಆಶ್ರಮ ಶಾಲಾ ಮಕ್ಕಳಿಗೆ ಕ್ರೀಡಾ ಚಟುವಟಿಕೆಗಳನ್ನು ಮಾಡಲು ಕಾರ್ಯಕ್ರಮ ರೂಪಿಸುತ್ತಿದ್ದೇವೆ. ನಮ್ಮ ಎಲ್ಲಾ ತರಬೇತಿ ಕಾರ್ಯಕ್ರಮಗಳಿಗೂ ಶಿಕ್ಷಕರು ಭಾಗವಹಿಸಬೇಕು ಎಂದರು.

ಸಮಾರಂಭದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಡಾ. ರವೀಶ್ ಗಣಿ, ಡಾ.ಎಸ್.ಎನ್.ಪ್ರಶಾಂತ್, ಡಾ.ಸಂದೀಪ್, ಡಾ.ಮೋಹನ್‌ಕುಮಾರ್, ಡಾ.ಇಂದಿರಾ, ಡಾ.ಎಂ.ಎಸ್.ಗಿರೀಶ್, ತಾಲ್ಲೂಕು ಕಲ್ಯಾಣಾಧಿಕಾರಿಗಳಾದ ಬಸವರಾಜು, ನಾರಾಯಣಸ್ವಾಮಿ, ಅರುಣ್ ಪ್ರಭು, ಅಶೋಕ್ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಅ.9– ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2023–24ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಿದ ನಂತರ SSP POSTMATRIC Scholarship Portalನಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ.0821–250073 ಅನ್ನು ಸಂಪರ್ಕಿಸಬಹುದು ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಸ್ರೇಲ್‌ನಲ್ಲಿ ಸಿಲುಕಿರುವ ಹಾಸನದ ಜನರ ಕರೆತರಲು ಹೆಚ್‌ಡಿಡಿ ಪ್ರಯತ್ನ



ಹಾಸನ: ಯುದ್ಧ ಪೀಡಿತ ಇಸ್ರೇಲ್‌ನಲ್ಲಿರುವ ಜಿಲ್ಲೆಯ 25ಕ್ಕೂ ಹೆಚ್ಚು ಜನರನ್ನು ಕರೆತರಲು ಕೇಂದ್ರ ಸಚಿವರ ಜೊತೆ ಮಾತನಾಡುತ್ತೇನೆ ಎಂದು ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರು ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಸ್ರೇಲ್‌ನಲ್ಲಿ ಸಿಲುಕಿದ ಜಿಲ್ಲೆಯ ಜನರು ಸುರಕ್ಷಿತವಾಗಿದ್ದಾರೆ ಎಂಬ ಮಾಹಿತಿ ಇದೆ. ಅವರನ್ನು ಸುರಕ್ಷಿತವಾಗಿ ಕರೆತರಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ. ಈ ಸಲುವಾಗಿ ಕೇಂದ್ರದೊಂದಿಗೆ ಚರ್ಚಿಸುತ್ತೇನೆ ಎಂದು ಅವರು ಹೇಳಿದ್ದಾರೆ.

ಈ ಬಗ್ಗೆ ತಕ್ಷಣವೇ ವಿದೇಶಾಂಗ ಸಚಿವರ ಜೊತೆ ಮಾತನಾಡುತ್ತೇನೆ. ಅಲ್ಲಿ ಭಾರತದವರು ಹೆಚ್ಚು ಮಂದಿ ಇದ್ದಾರೆ. ಜಿಲ್ಲೆಯ ಸಕಲೇಶಪುರ, ಬೇಲೂರು, ಚನ್ನರಾಯಪಟ್ಟಣದ ಮಂದಿ ಅಲ್ಲಿ ಸಿಲುಕಿದ್ದಾರೆ. ಅವರ ಹೆಸರುಗಳನ್ನು ತಿಳಿದುಕೊಂಡ ತಕ್ಷಣವೇ ಯಾವ ಪ್ರದೇಶದಲ್ಲಿ ಇದ್ದಾರೆ ಎಂದು ಮಾಹಿತಿ ಪಡೆದುಕೊಂಡು ಚರ್ಚಿಸುತ್ತೇನೆ. ಈ ವಿಚಾರವಾಗಿ ರಾಜ್ಯ ಸರ್ಕಾರಕ್ಕೂ ಮನವಿ ಮಾಡುತ್ತೇನೆ ಎಂದಿದ್ದಾರೆ. ಇಸ್ರೇಲ್ ಹಾಗೂ ಹಮಾಸ್ ಉಗ್ರರ ನಡುವಿನ ಯುದ್ಧದಲ್ಲಿ ಇಲ್ಲಿಯವರೆಗೂ 1,300 ಜನ ಮೃತಪಟ್ಟಿದ್ದಾರೆ. ಯುದ್ಧ ಇನ್ನೂ ಮುಂದುವರೆದಿದ್ದು ಎರಡೂ ಕಡೆಗಳಲ್ಲೂ ಸಾವು ನೋವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ವರದಿಯಾಗಿದೆ.

ಹಿರಿಯ ಪತ್ರಕರ್ತ ಜಿ.ಎನ್. ರಂಗನಾಥ್ ರಾವ್ ನಿಧನ



ಬೆಂಗಳೂರು: ಹಿರಿಯ ಪತ್ರಕರ್ತ ಮತ್ತು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ ಜಿಎನ್ ರಂಗನಾಥ್ ರಾವ್ (83) ಅವರು ಸೋಮವಾರ ಬೆಳಗ್ಗೆ ನಿಧನರಾಗಿದ್ದಾರೆ.

ಕೆಲವು ದಿನಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ರಂಗನಾಥ್ ರಾವ್ ಇಂದು ತಮ್ಮ ಪುತ್ರ ಮತ್ತು ಮಗಳನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ಇಂದು ಸಂಜೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ನಡೆಯಿತು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ

1942ರಲ್ಲಿ ಬೆಂಗಳೂರು ಜಿಲ್ಲೆಯ ಹಾರೋಹಳ್ಳಿಯಲ್ಲಿ ಹುಟ್ಟಿದ ಜಿಎನ್ ರಂಗನಾಥ್ ಅವರು ಹೊಸಕೋಟೆ ಹಾಗೂ ಬೆಂಗಳೂರು ನಗರದಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದರು. 1962 ರಲ್ಲಿ ಸಂಯುಕ್ತ ಕರ್ನಾಟಕ ಬೆಂಗಳೂರು ಆವೃತ್ತಿಯಲ್ಲಿ ಉಪಸಂಪಾದಕರಾಗಿ ಪತ್ರಿಕೋದ್ಯಮದಲ್ಲಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದರು. ನಂತರ ಅವರು ಪ್ರಜಾವಾಣಿಗೆ ಸೇರಿಕೊಂಡು ಕಾರ್ಯನಿರ್ವಾಹಕ ಸಂಪಾದಕರಾಗಿ ನಿವೃತ್ತರಾದರು. ಬಹುಮುಖ ವ್ಯಕ್ತಿತ್ವ ಹೊಂದಿದ್ದ ಅವರು 'ನವರಂಗ' ಎಂಬ ಕಾವ್ಯನಾಮದಲ್ಲಿ ಕಾದಂಬರಿಗಳು, ಸಣ್ಣ ಕಥೆಗಳು, ನಾಟಕಗಳು, ವಿಮರ್ಶಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ ಕವಿಯಾಗಿ ಅವರು ಉದಯೋನ್ಮುಖ ಕವಿಗಳಿಗೆ ಪ್ರೋತ್ಸಾಹ ನೀಡಿದ್ದಾರೆ. ಅವರು ಮಾಧ್ಯಮಕ್ಕೆ ನೀಡಿದ ಕೊಡುಗೆಗಳನ್ನು ಪರಿಗಣಿಸಿ 2018ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.


ನೂತನವಾಗಿ ಅಸ್ತಿತ್ವಕ್ಕೆ ಬಂದ ಮೈಸೂರು ತಾಲೂಕು ನಾಯಕ ಸಂಘದ ವತಿಯಿಂದ ಮೈಸೂರು ಜಿಲ್ಲಾ ನಾಯಕ ಸಂಘದ ಜಿಲ್ಲಾಧ್ಯಕ್ಷ ರಾಮಚಂದ್ರ ಅವರನ್ನು ಸನ್ಮಾನಿಸಲಾಯಿತು. ಮೈಸೂರು ತಾಲೂಕು ನಾಯಕ ಸಂಘದ ಅಧ್ಯಕ್ಷ ಉದ್ಬೂರು ಮಹಾದೇವಸ್ವಾಮಿ, ಸಮುದಾಯದ ಹಿರಿಯರಾದ ಟೆನಿಸ್ ಗೋಪಿ, ಪತ್ರಿಕಾ ಕಾರ್ಯದರ್ಶಿ ವಿನೋದ್ ನಾಗವಾಲ, ಖಜಾಂಚಿ ಮರಿಸ್ವಾಮಿ, ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ಸಹಕಾರ್ಯದರ್ಶಿ ಸಾಹುಕಾರ್‌ಹುಂಡಿ ಮಹದೇವ್ ಇನ್ನಿತರರಿದ್ದರು.

ಕೆ. ಪ್ರಕಾಶ್‌ಗೆ ಪಿಹೆಚ್.ಡಿ



ಮೈಸೂರು, ಅ. 9– ಡಾ. ಎಂ.ಬಿ. ಸುರೇಶ ಅವರ ಮಾರ್ಗದರ್ಶನದಲ್ಲಿ ಕೆ. ಪ್ರಕಾಶ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಾಂಗ್ರೆಸ್ ಗ್ಯಾರಂಟಿಗಳ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು

ಸೇವಾದಳ ರಾಜ್ಯಾಧ್ಯಕ್ಷ ಎಂ.ರಾಮಚಂದ್ರ ಸಲಹೆ



ಮೈಸೂರು, ಅ.9(ಎಸ್‌ಪಿಎನ್)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಯಲ್ಲಿ 4 ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಈ ಯೋಜನೆಗಳು ಜನರಿಗೆ ತಲುಪಿವೆಯೇ ಎಂಬುದನ್ನು ಸೇವಾದಳದ ಸದಸ್ಯರು ಬೂತ್‌ಮಟ್ಟದಲ್ಲಿ ಪರಿಶೀಲಿಸಬೇಕು ಎಂದು ಕಾಂಗ್ರೆಸ್ ಸೇವಾದಳದ ರಾಜ್ಯಾಧ್ಯಕ್ಷ ಎಂ.ರಾಮಚಂದ್ರ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಮೈಸೂರು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇಂದಿರಾಗಾಂಧಿ ಕಾಂಗ್ರೆಸ್ ಭವನದಲ್ಲಿ ಸೋಮವಾರ ಮೈಸೂರು ಜಿಲ್ಲಾ ಕಾಂಗ್ರೆಸ್ ಸೇವಾದಳದ ವತಿಯಿಂದ ಸೇವಾದಳ ಶತಮಾನೋತ್ಸವ ಆಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ ಸೇರಿದಂತೆ ಇತರೆ ಯೋಜನೆಗಳು ಜನರ ಸಾಮಾನ್ಯರ ಜೀವನ ಸುಧಾರಿಸುತ್ತಿವೆ. ಅವು ನಿರಂತರವಾಗಿ ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು. ಜನಸಮಸ್ಯೆಗಳಿಗೆ ಸೇವಾದಳ ಕಾರ್ಯಕರ್ತರು ಸ್ಪಂದಿಸಬೇಕು ಎಂದು ಸಲಹೆ ನೀಡಿದರು.

ಸೇವಾದಳ ಸ್ಥಾಪನೆಯಾಗಿ 100 ವರ್ಷ: ಡಿ.23ಕ್ಕೆ ಕಾಂಗ್ರೆಸ್ ಸೇವಾದಳ ಸ್ಥಾಪನೆಯಾಗಿ ನೂರು ವರ್ಷವಾಗಲಿದ್ದು, ಶತಮಾನೋತ್ಸವ ಬೆಂಗಳೂರಿನಲ್ಲಿ ಆಚರಿಸಲು ಕೆಪಿಸಿಸಿ ನಿರ್ಧರಿಸಿದೆ. 10 ಸಾವಿರ ಸೇವಾದಳ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿ ಜಿಲ್ಲೆಯಲ್ಲೂ ಪೂರ್ವಭಾವಿ ಸಭೆಗಳನ್ನು ಆಯೋಜಿಸಿ, ಸಂಘಟನೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ನಾ.ಸು ಹರ್ಡಿಕರ್ ಅವರನ್ನು ಸ್ಮರಣೆ ಮಾಡಿಕೊಳ್ಳಲು ಹಲವಾರು ಕಾರಣಗಳಿವೆ. ಮೂಲತಃ ಅವರು ನಮ್ಮ ಕರ್ನಾಟಕದವರೆ ಆಗಿದ್ದು, ಇದು ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಮಾತೃ ವಿಭಾಗವಾಗಿದೆ. ಇದರಿಂದ ಹೊರಹೊಮ್ಮಿದ ಮುಖಂಡರು, ಅತ್ಯುತ್ತಮ ರಾಜಕಾರಣಿಗಳಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ಎಲ್ಲಾ ಜಿಲ್ಲೆಗಳಲ್ಲಿ ಕಾಂಗ್ರೆಸ್ ಗ್ಯಾರಂಟಿ ಬಗ್ಗೆ ಜನಾಭಿಪ್ರಾಯವನ್ನು ಕ್ರೋಢೀಕರಿಸಿ ವರದಿ ನೀಡಲು ಎಲ್ಲಾ ಜಿಲ್ಲಾ ಘಟಕಕ್ಕೆ ಸೂಚಿಸಿದ್ದಾರೆ ಎಂದು ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ ಪಕ್ಷವು ಯಾರಿಗೇ ಟಿಕೆಟ್ ನೀಡಿದರೂ, ಮೈಸೂರು – ಕೊಡಗು ಹಾಲಿ ಸಂಸದರನ್ನು ಸೋಲಿಸಲು ಪಣತೊಡಬೇಕು. ಬಿಜೆಪಿಯು, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ರಾವಣನಿಗೆ ಹೋಲಿಕೆ ಮಾಡಿದೆ. ಆ ಪಕ್ಷಕ್ಕೆ ತಕ್ಕಪಾಠ ಕಲಿಸಬೇಕು. ಮಂಗಳೂರಿನಲ್ಲಿ ಸೇವಾದಳದ ಸದಸ್ಯರೊಬ್ಬರು ಪಕ್ಷದ ಮುಖಂಡರು ಒಗ್ಗಟ್ಟಾದರೆ ಬಿಜೆಪಿ ಎದುರಿಸುವುದು ಕಷ್ಟವಲ್ಲ ಎಂದಿದ್ದಾರೆ. ಹಾಗಾಗಿ ಪಕ್ಷದ 23 ವಿಭಾಗಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್ ಮೈಸೂರು ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ಸೇವಾದಳದಲ್ಲಿ ಪಕ್ಷ ನಿಷ್ಠೆಯಿಂದ ದುಡಿದ ಪದಾಧಿಕಾರಿಗಳಿಗೆ ಮೊದಲ ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಸೇವಾದಳದಲ್ಲಿ ಸುಮಾರು 20 ವರ್ಷಗಳ ಕಾಲ ಸೇವೆ ಸಲ್ಲಿಸಿದ 5 ಸೇವಾದಳ ಪದಾಧಿಕಾರಿಗಳಿಗೆ ಸರ್ಕಾರದ ಯಾವುದಾದರೂ ನಿಗಮ ಮಂಡಳಿಗಳಲ್ಲಿ ಉನ್ನತ ಸ್ಥಾನಗಳನ್ನು ಕೊಡಬೇಕೆಂದು ಸಭಾ ನಿಲುವಳಿಯನ್ನು ಪ್ರಸ್ತಾಪಿಸಿದರು. ಇವರ ಪ್ರಸ್ತಾವನೆಗೆ ಸಭೆಯಲ್ಲಿದ್ದ ಎಲ್ಲಾ ಸೇವಾದಳದ ಪದಾಧಿಕಾರಿಗಳು ಬೆಂಬಲಿಸಿದರು.

> ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನೂರಕ್ಕೆ ನೂರರಷ್ಟು ಕೇಂದ್ರದಲ್ಲಿ ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸವಿದೆ. ಅದರಲ್ಲೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರವನ್ನು ಗೆಲ್ಲಲೇಬೇಕೆಂಬ ಇಂಗಿತವನ್ನು ವ್ಯಕ್ತಪಡಿಸಿ, ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿ ಯಾರೇ ಆದರೂ ಪಕ್ಷ ನಿಷ್ಠೆಯಿಂದ ಕಾರ್ಯಕರ್ತರು ಕೆಲಸ ಮಾಡೋಣ.
> - ಎಂ.ರಾಮಚಂದ್ರ, ಕಾಂಗ್ರೆಸ್ ಸೇವಾದಳದ ರಾಜ್ಯಾಧ್ಯಕ್ಷ

ಸಭೆಯಲ್ಲಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ನಗರ ಸೇವಾದಳದ ಅಧ್ಯಕ್ಷರಾದ ಅಶೋಕ್, ಗ್ರಾಮಾಂತರ ಸೇವಾದಳದ ಅಧ್ಯಕ್ಷ ಯೋಗೇಶ್, ರಾಜ್ಯ ಸಮಿತಿ ಪದಾಧಿಕಾರಿಗಳಾದ ಶಿವಶಂಕರ್, ಲಲಿತಾ, ಶಂಕರ್‌ಮೂರ್ತಿ, ನಗರ ಸೇವಾದಳ ಅಧ್ಯಕ್ಷ ಎಂ.ಕೆ.ಅಶೋಕ್, ಪ್ರಧಾನ ಕಾರ್ಯದರ್ಶಿ ರಮೇಶ್, ಮುಖಂಡರಾದ ನಾಗೇಶ್, ಮೋಹನ್‌ಕುಮಾರ್, ಉದಿತ್ ಗೌಡ, ಎಸ್.ಎನ್.ರಾಜೇಶ್, ಸಮೀರ್ ಅಹಮದ್, ಶಂಕರ್ ಮೂರ್ತಿ, ಸಿದ್ದರಾಜು, ರಮೇಶ್, ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ಸೇವಾದಳದ ತಾಲೂಕು ಘಟಕದ ಅಧ್ಯಕ್ಷರು ಹಾಗೂ ಜಿಲ್ಲಾ ಸಮಿತಿ ಪದಾಧಿಕಾರಿಗಳು ಭಾಗವಹಿಸಿದ್ದರು.

ಮಕ್ಕಳ ರಾಜ್ಯಮಟ್ಟದ ಹಾಕಿ ಟೂರ್ನಿ ಆರಂಭ

ರಾಷ್ಟ್ರೀಯ, ಅಂತರರಾಷ್ಟ್ರೀಯ ಹಾಕಿ ಟೂರ್ನಿಯಲ್ಲಿ ಜಿಲ್ಲೆಯ ಕ್ರೀಡಾಪಟುಗಳು ಉತ್ತಮ ಹೆಸರು ಮಾಡಿದ್ದಾರೆ



ಕುಶಾಲನಗರ, ಅ.9– ಉತ್ತರ ಕೊಡಗಿನ ಕೂಡಿಗೆಯ ಸರ್ಕಾರಿ ಕ್ರೀಡಾ ಶಾಲೆಯ ಹಾಕಿ ಟರ್ಫ್ ಮೈದಾನದಲ್ಲಿ ಸೋಮವಾರ ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಾಲಕರು ಮತ್ತು ಬಾಲಕಿಯರ ಎರಡು ದಿನಗಳ ಕಾಲ ರಾಜ್ಯಮಟ್ಟದ ಮಕ್ಕಳ ಹಾಕಿ ಟೂರ್ನಿ ಆರಂಭಗೊಂಡಿತು.

ಸುತ್ತಲೂ ಹಚ್ಚ ಹಸಿರಿನ ಪರಿಸರದ ಮಧ್ಯೆ ಸುಂದರವಾದ ಹಸಿರು ಹಾಕಿ ಟರ್ಫ್ ಮೈದಾನ ಮದುವಣಗಿತ್ತಿಯಂತೆ ಸಿಂಗಾರಗೊಂಡಿತ್ತು ಕ್ರೀಡಾ ಧ್ವಜಾರೋಹಣ ನೆರವೇರಿಸಿ ಟೂರ್ನಿಗೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲ ಎಂ. ಚಂದ್ರಕಾಂತ್, ಕ್ರೀಡೆಯು ನಮ್ಮ ದೈಹಿಕ ದೃಢತೆ ಮತ್ತು ಮಾನಸಿಕ ಆರೋಗ್ಯ ಸ್ವಾಸ್ಥ್ಯ ಕಾಪಾಡುವುದರೊಂದಿಗೆ ಶಿಸ್ತಿನ ಜೀವನ ಮತ್ತು ಉತ್ತಮ ಬದುಕನ್ನು ರೂಪಿಸಲು ಸಹಕಾರಿಯಾಗಿವೆ ಎಂದರು.

ಕೊಡಗಿನಲ್ಲಿ ಹಾಕಿ ಕ್ರೀಡೆಗೆ ನೀಡುತ್ತಿರುವ ಪ್ರೋತ್ಸಾಹದಿಂದ ಜಿಲ್ಲೆಯ ಕ್ರೀಡಾಪಟುಗಳು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಹಾಕಿ ಟೂರ್ನಿಯಲ್ಲಿ ಉತ್ತಮ ಹೆಸರು ಗಳಿಸಿದ್ದಾರೆ. ಪ್ರತಿಯೊಬ್ಬರೂ ಇಂತಹ ಕ್ರೀಡಾಕೂಟಗಳಿಗೆ ಹೆಚ್ಚಿನ ಸಹಕಾರ ನೀಡುವ ಮೂಲಕ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಬೇಕು ಎಂದರು.

ಕೂಡುಮಂಗಳೂರು ಗ್ರಾಮ ಪಂಚಾಯತಿ ಅಧ್ಯಕ್ಷ ಡಿ.ಭಾಸ್ಕರ್ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿ (ಆಡಳಿತ) ಸೌಮ್ಯ ಪೊನ್ನಪ್ಪ ಪಥ ಸಂಚಲನದ ಗೌರವ ವಂದನೆ ಸ್ವೀಕರಿಸಿ, ಕ್ರೀಡಾಪಟುಗಳಿಗೆ ಶುಭ ಹಾರೈಸಿದರು. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ (ಪ್ರಭಾರಿ) ಡಾ. ಸದಾಶಿವಯ್ಯ ಎಸ್. ಪಲ್ಲೇದ್, ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಟಿ.ಸೋಮಶೇಖರ್ ಮಾತನಾಡಿದರು. ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ವಿ.ಮಂಜೇಶ್, ವಿದ್ಯಾರ್ಥಿಗಳಿಂದ ಕ್ರೀಡಾಜ್ಯೋತಿ ಸ್ವೀಕರಿಸಿದರು. ಡಿಡಿಪಿಐ ಕಚೇರಿಯ ಶಿಕ್ಷಣಾಧಿಕಾರಿ ಮಹದೇವಸ್ವಾಮಿ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಎಚ್.ಕೆ ಕುಮಾರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಎಚ್.ಎನ್.ಮಂಜುನಾಥ್, ತಾಲೂಕು ಘಟಕದ ಅಧ್ಯಕ್ಷ ಟಿ.ಕೆ.ಬಸವರಾಜ್, ಜಿಲ್ಲಾ ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಪಿ.ಎ. ಪ್ರವೀಣ್, ಜಿಲ್ಲಾ ವೃತ್ತಿ ಶಿಕ್ಷಕರ ಸಂಘದ ಅಧ್ಯಕ್ಷ ಎ.ಪಿ. ಸೋಮಯ್ಯ, ಕೂಡಿಗೆ ಸರ್ಕಾರಿ ಕ್ರೀಡಾಶಾಲೆಯ ಮುಖ್ಯ ಶಿಕ್ಷಕ ಬಿ.ಟಿ.ದೇವಕುಮಾರ್, ಕೂಡುಮಂಗಳೂರು ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮಕುಮಾರ್, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಬಿ.ಆರ್. ಗಾಯಿತ್ರಿ, ಎಂ.ಎಲ್. ಸುಕುಮಾರಿ, ವಿವಿಧ ದೈಹಿಕ ಶಿಕ್ಷಣ ಶಿಕ್ಷಕರ ಪ್ರಮುಖರಾದ ಎ.ಎ.ಲಕ್ಷ್ಮಣ್, ಬಿ.ಟಿ.ಪೂರ್ಣೇಶ್, ಎಚ್.ಪಿ.ಕರುಂಬಯ್ಯ, ಬಿ.ಕೆ. ಶಿವಶಂಕರ್, ಎಂ.ಎಸ್.ತಮ್ಮಯ್ಯ, ಬಿಆರ್ ಪಿ.ಎಸ್.ಎನ್.ಲೋಕೇಶ್, ದೈಹಿಕ ಶಿಕ್ಷಣ ಶಿಕ್ಷಕರು ಇತರರು ಪಾಲ್ಗೊಂಡಿದ್ದರು.

ಶಿಕ್ಷಕ ಉ.ರಾ.ನಾಗೇಶ್ ಕಾರ್ಯಕ್ರಮ ನಿರ್ವಹಿಸಿದರು. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಡಾ ಸದಾಶಿವಯ್ಯ ಎಸ್. ಪಲ್ಲೇದ್ ಸ್ವಾಗತಿಸಿದರು. ತಾಲೂಕು ಶಿಕ್ಷಣ ಪರಿವೀಕ್ಷಕಿ ಎಂ.ಎಲ್. ಸುಕುಮಾರಿ ವಂದಿಸಿದರು. ಕ್ರೀಡಾಕೂಟದಲ್ಲಿ ಸೋಮವಾರಪೇಟೆ ಓ.ಎಲ್.ವಿ.ಶಾಲೆಯ ವಿದ್ಯಾರ್ಥಿಗಳು ದೈಹಿಕ ಶಿಕ್ಷಣ ಶಿಕ್ಷಕ ಟಿ.ಎನ್.ಯುವರಂಜನ್ ನೇತೃತ್ವದಲ್ಲಿ ಬ್ಯಾಂಡ್ ನುಡಿಸುವ ಮೂಲಕ ಗಮನ ಸೆಳೆದರು.

ಸಿಡಿಲು ಬಡಿದು ವಿದ್ಯುತ್ ಉಪಕರಣಕ್ಕೆ ಹಾನಿ



ನಾಪೋಕ್ಲು, ಅ.9– ಸಿಡಿಲು ಬಡಿದು ಮನೆಯ ವಿದ್ಯುತ್ ಮೀಟರ್ ಬೋರ್ಡ್ ವೈರ್ ಸುಟ್ಟು ಕರಕಲಾಗಿದ್ದು, ಮನೆ ಮಂದಿ ಜೀವಾಪಾಯದಿಂದ ಪಾರಾದ ಘಟನೆ ಇಲ್ಲಿಗೆ ಸಮೀಪದ ಅಜ್ಜಿಮುಟ್ಟ ಎಂಬಲ್ಲಿ ನಡೆದಿದೆ.

ಭಾನುವಾರ ನಾಪೋಕ್ಲು ವ್ಯಾಪ್ತಿಯಲ್ಲಿ ಸಂಜೆ ಭಾರಿ ಗುಡುಗು ಸಹಿತ ಮಳೆಯಾಗಿದೆ. ಈ ಸಂದರ್ಭ ಅಜ್ಜಿಮುಟ್ಟ ನಿವಾಸಿ ಶಿವಪ್ಪ ಪೂಜಾರಿ ಎಂಬುವರ ಮನೆ ಸಮೀಪದ ಕರೆಂಟ್ ಕಂಬಕ್ಕೆ ಸಿಡಿಲು ಬಡಿದ ಕಾರಣ ಅವರ ಮನೆಗೆ ಅಳವಡಿಸಿದ್ದ ಮೀಟರ್ ಬೋರ್ಡ್ ವೈರ್‌ಗಳು ಹಾಗೂ ವಿದ್ಯುತ್ ಉಪಕರಣಗಳು ಸುಟ್ಟು ಹೋಗಿ ನಷ್ಟ ಸಂಭವಿಸಿದೆ. ಶಿವಪ್ಪನವರ ಮನೆ ಸಮೀಪದ ಅಂತೋನಿ ಎಂಬುವರ ಮನೆಗೆ ಅಳವಡಿಸಿದ್ದ ಇನ್ವರ್ಟರ್ ಕೂಡ ಸುಟ್ಟು ಹೋಗಿದೆ.

ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಮಿಸ್ಟಿಹಿಲ್ಸ್‌ನಿಂದ ಗಡಿಯಾರ ಕೊಡುಗೆ

ಮಡಿಕೇರಿ, ಅ.9– ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ರೋಟರಿ ಮಿಸ್ಟಿಹಿಲ್ಸ್ ವತಿಯಿಂದ 'ಗೋಡೆ ಗಡಿಯಾರ'ವನ್ನು ಕೊಡುಗೆಯಾಗಿ ನೀಡಲಾಯಿತು.

ಮಡಿಕೇರಿಯ ಮಹೇಶ್ ಎಂಟರ್‌ಪ್ರೈಸಸ್‌ನ ಮಾಲೀಕರಾದ ಹರೀಶ್ ಅವರು ರೋಟರಿ ಮಿಸ್ಟಿಹಿಲ್ಸ್ ಮೂಲಕ ನೀಡಿದ ಗೋಡೆ ಗಡಿಯಾರವನ್ನು ಮಿಸ್ಟಿಹಿಲ್ಸ್ ಅಧ್ಯಕ್ಷ ಪ್ರಮೋದ್ ಕುಮಾರ್ ರೈ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಚೆನ್ನಸ್ವಾಮಿಗೆ ಹಸ್ತಾಂತರಿಸಿದರು.

ತಿಮ್ಮಯ್ಯ ಮ್ಯೂಸಿಯಂ ವೀಕ್ಷಣೆಗೆ ಬರುವ ಸಂದರ್ಶಕರಿಗೆ ಪ್ರಯೋಜನವಾಗುವ ನಿಟ್ಟಿನಲ್ಲಿ ಈ ಗೋಡೆ ಗಡಿಯಾರವನ್ನು ನೀಡುತ್ತಿರುವುದಾಗಿ ದಾನಿಗಳಾದ ಹರೀಶ್ ಹೇಳಿದರು. ಈ ಸಂದರ್ಭ ರೋಟರಿ ಮಿಸ್ಟಿ ಹಿಲ್ಸ್‌ನ ನಿರ್ದೇಶಕರಾದ ಎ.ಕೆ.ವಿನೋದ್, ಅನಿಲ್ ಎಚ್.ಟಿ, ಮಹೇಶ್ ಎಂಟರ್‌ಪ್ರೈಸಸ್ ಪಾಲುದಾರ ರಂಜಿತ್, ಸಿದ್ದಿಕಿ, ಶಮಿಕ್ ರೈ, ತಿಮ್ಮಯ್ಯ ಮ್ಯೂಸಿಯಂನ ಮೋಹನ್ ಇದ್ದರು.

ಕೊಡವ ಲ್ಯಾಂಡ್ ರಾಜಕೀಯ ಸ್ವಾಯತ್ತತೆಗಾಗಿ ಸಿಎನ್‌ಸಿ ಪಾದಯಾತ್ರೆ



ಮಡಿಕೇರಿ, ಅ.9– ಸಂವಿಧಾನದ ಆರ್ಟಿಕಲ್ 244 ರ/ವಿ6 ಮತ್ತು 8ನೇ ಶೆಡ್ಯೂಲ್ ಅಡಿಯಲ್ಲಿ ಕೊಡವ ಲ್ಯಾಂಡ್ ಜಿಯೋ-ರಾಜಕೀಯ ಸ್ವಾಯತ್ತತೆಯನ್ನು ನೀಡಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ 3ನೇ ಹಂತದ ಪಾದಯಾತ್ರೆಯ ಮುಂದುವರಿದ ಭಾಗವನ್ನು ದಕ್ಷಿಣ ಕೊಡಗಿನ ಕಿರ್ನಾಲ್‌ನಾಡ್-ಗುಮ್ಮತ್ಮಾಡ್ ನಾಡ್ ಮಂದ್ (ಕಿರುಗೂರ್-ಬೆಸಗೂರ್) ಮತ್ತು ಪತ್ತ್ ಕಟ್‌ನಾಡ್ (ಬೆಕ್ಕೆಸೊಡ್ಲೂರ್-ಕಾನೂರ್) ಮಂದ್‌ನಲ್ಲಿ ನಡೆಸಿತು. ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ಕೊಡವ ಜಾಗೃತಿ ಸಭೆ ಆರಂಭಿಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, 9 ಪ್ರಮುಖ ಹಕ್ಕೊತ್ತಾಯಗಳನ್ನು ಮಂಡಿಸಿದರು.

ಕೊಡವರ ಸಾಂವಿಧಾನಿಕ ಭದ್ರತೆಗಾಗಿ ಹಕ್ಕೊತ್ತಾಯಗಳ ಕುರಿತು ಸರ್ಕಾರದ ಗಮನ ಸೆಳೆಯಲು ಐದು ಹಂತಗಳಲ್ಲಿ ಪಾದಯಾತ್ರೆ ನಡೆಸಲಾಗುತ್ತಿದೆ. ಬೇಡಿಕೆ ಈಡೇರುವವರೆಗೆ ಸಿಎನ್‌ಸಿ ಹೋರಾಟ ಮುಂದುವರೆಯಲಿದೆ. ಸರ್ವ ಕೊಡವರು ಈ ಹೋರಾಟದೊಂದಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಕೊಡವ ಲ್ಯಾಂಡ್ ಭೌಗೋಳಿಕ-ರಾಜಕೀಯ ಸ್ವಾಯತ್ತತೆ, ಕೊಡವ ಜನಾಂಗದ ನ್ಯಾಯಯುತ, ಸೂಕ್ಷ್ಮ ಸಮಗ್ರ ಕುಲಶಾಸ್ತ್ರ ಅಧ್ಯಯನ, ಕೊಡವ 'ಸಂಸ್ಕಾರ ಗನ್' ಹಕ್ಕುಗಳನ್ನು ಸಿಖ್ಖರ 'ಕಿರ್ಪಾನ್'ಗೆ ಸಮಾನವಾಗಿ ಸಂವಿಧಾನದ 25 ಮತ್ತು 26ನೇ ವಿಧಿಗಳಡಿಯಲ್ಲಿ ಕೊಡವರ 'ಧಾರ್ಮಿಕ ಸಂಸ್ಕಾರ'ವೆಂದು ರಕ್ಷಿಸುವುದು, ಮಾತೃಭಾಷೆ ಕೊಡವ ತಕ್ಕ್ ಅನ್ನು 8ನೇ ಶೆಡ್ಯೂಲ್‌ಗೆ ಸೇರಿಸುವುದು ಸೇರಿದಂತೆ 9 ಬೇಡಿಕೆಗಳ ಕುರಿತು ನಾಚಪ್ಪ ವಿವರಿಸಿದರು.

ಕೋಡೆಂಗಡ ಪವಿತ್ರಾ ಸುರೇಶ್, ಚೆಪ್ಪುಡಿರ ಪೊನ್ನಪ್ಪ, ಚೆಪ್ಪುಡಿರ ಮನೋಜ್, ಕೋಡೆಂಗಡ ವಿಠಲ್, ಚೆಪ್ಪುಡಿರ ಡಿಕ್ಕಿ, ಜಮ್ಮಡ ಮೋಹನ್, ಕಾಂಡೇರ ಸುರೇಶ್, ಪರ್ವಂಗಡ ನವೀನ್, ಅಪ್ಪೆಂಗಡ ಮಾಲೆ, ಬೊಟ್ಟಂಗಡ ಜಪ್ಪು, ಕಿರ್ನಾಳ್ ನಾಡ್ ಶರಿನ್, ಕಿರಿಯಮಾಡ ಶಾನ್, ಕಿರಿಯಮಾಡ ಸಫನ್, ಕಾಕಮಾಡ ದೀಕ್ಷಿತ್, ಚಿರಿಯಪಂಡ ಲೋಹಿತ್, ಚೇಮಿರ ಮನು, ಗಡಂಗಡ ಚಿಮ್ಮ, ಚೆಪ್ಪುಡಿರ ತಿಲಕ್, ಚೆಪ್ಪುಡಿರ ದೇವಯ್ಯ, ಇಟ್ಟೀರ ಚೆಂಗಪ್ಪ, ಕೊಕ್ಕೆಂಗಡ ಸುಂದರ್, ಕೋಡೆಂಗಡ ಅಪ್ಪಣ್ಣ, ತೀತರಮಾಡ ಗಿರೀಶ್, ಚೆಪ್ಪುಡಿರ ಮಹೇಶ್, ಪುಲ್ಲಂಗಡ ನಟೇಶ್ ಮತ್ತಿತರರು ಈ ಸಂದರ್ಭ ಉಪಸ್ಥಿತರಿದ್ದರು.

ಮಲೆಯಾಳಿ ಸಂಘದಿಂದ ಓಣಂ ಆಚರಣೆ



ವಿರಾಜಪೇಟೆ, ಅ.9– ಮಲಯಾಳಿ ಬಾಂಧವರು ತಮ್ಮ ಸಂಸ್ಕೃತಿ ಆಚಾರ ವಿಚಾರಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಓಣಂ ಹಬ್ಬವನ್ನು ಒಗ್ಗಟ್ಟಿನಿಂದ ಆಚರಿಸಿಕೊಂಡು ಬರುತ್ತಿದ್ದು ತಮ್ಮ ಮಕ್ಕಳಿಗೂ ಉತ್ತಮ ಶಿಕ್ಷಣ ನೀಡುವಂತಾಗಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ವಿರಾಜಪೇಟೆ ಸಮೀಪದ ಅಮ್ಮತ್ತಿ ಒಂಟಿಯಂಗಡಿ ಹಿಂದು ಮಲಯಾಳಿ ಸಂಘದ ವತಿಯಿಂದ ಒಂಟಿಯಂಗಡಿ ಕಣ್ಣಂಗಾಲ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ ಓಣಂ ಆಚರಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ಎಲ್ಲಾ ಜನಾಂಗ ಬಾಂಧವರು ಅವರವರ ಪದ್ಧತಿ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕ್ರೀಡಾ ಸ್ಪರ್ಧೆ, ಉತ್ಸವ ಹಾಗೂ ಹಬ್ಬಗಳನ್ನು ಒಗ್ಗಟ್ಟಿನಿಂದ ಆಚರಿಸುತ್ತಿರುವುದು ಶ್ಲಾಘನೀಯ ಎಂದರು. ಈ ಸಂದರ್ಭ ವೇದಿಕೆಯಲ್ಲಿ ಓಣಂ ಹಬ್ಬ ಆಚರಣೆ ದಿನ ಸ್ಥಳೀಯ ಶಾಲೆಗಳಿಗೆ ರಜೆ ನೀಡಬೇಕೆಂದು ಶಾಸಕ ಪೊನ್ನಣ್ಣ ಅವರಿಗೆ ಹಿಂದು ಮಲಯಾಳಿ ಸಂಘದ ಮುಖಂಡರು ಮನವಿ ಸಲ್ಲಿಸಿದರು. ಈ ವೇಳೆ ಶಾಸಕ ಪೊನ್ನಣ್ಣ ಅವರು ಮಾತನಾಡಿ, ಓಣಂ ಹಬ್ಬದ ವೇಳೆ ಶಾಲೆಗೆ ರಜೆ ನೀಡುವಂತೆ ಮಲಯಾಳಿ ಸಂಘದ ಅನೇಕರಿಂದ ಮನವಿ ಬಂದಿದೆ. ಮುಂದಿನ ವರ್ಷ ಶಾಲೆಗೆ ರಜೆ ನೀಡುವಂತೆ ಸರಕಾರದ ಆದೇಶ ಬರಲಿದೆ ಎಂದರು.

ಮೊದಲಿಗೆ ಮಾಜಿ ಶಾಸಕ ಕೆ.ಜಿ.ಬೋಪಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹಿಂದೂ ಮಲಯಾಳಿ ಸಮಾಜ ಬಾಂಧವರು ಹಿಂದಿನಿಂದಲೂ ಅವರ ಸಂಪ್ರದಾಯದಂತೆ ಉಡುಗೆ ತೊಡುಗೆ ಧರಿಸುವ ಮೂಲಕ ಓಣಂ ಹಬ್ಬವನ್ನು ಹಿಂದಿನಿಂದಲೂ ಜಿಲ್ಲೆ ಮತ್ತು ತಾಲೂಕುಗಳಲ್ಲಿ ಆಚರಿಸಿಕೊಂಡು ಬರುತ್ತಿದ್ದರು. ಇತ್ತೀಚೆಗೆ ಹೋಬಳಿ ಮಟ್ಟದಲ್ಲಿಯು ಓಣಂ ಆಚರಿಸುವ ಮೂಲಕ ಅನೇಕತೆಯಲ್ಲಿ ಏಕತೆಯನ್ನು ಕಾಣುತ್ತಾ, ಸಾಂಸ್ಕೃತಿಕ ಹಿನ್ನೆಲೆ ಹೂವಿನ ರಂಗೋಲಿ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಒಗ್ಗಟ್ಟು ಪ್ರದರ್ಶನ ತೋರುತ್ತಿದೆ ಎಂದರು.

ಅಮ್ಮತ್ತಿ ಒಂಟಿಯಂಗಡಿಯ ಹಿಂದು ಮಲಯಾಳಿ ಸಂಘದ ಅಧ್ಯಕ್ಷ ಸಿ.ಕೆ.ನಂದ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕಣ್ಣಂಗಾಲ ಗ್ರಾಪಂ ಅಧ್ಯಕ್ಷೆ ರೀಷ್ಮಾ ರಂಜಿತ್, ಉಪಾಧ್ಯಕ್ಷೆ ರಜನಿ ಕುಟ್ಟಪ್ಪ, ಮಲಯಾಳಿ ಸಮಾಜದ ಗೌರವ ಅಧ್ಯಕ್ಷ ಕೆ.ಪಿ.ಪುಷ್ಕರನ್, ಕಾರ್ಯದರ್ಶಿ ಶಶಿಕುಮಾರ್, ಖಜಾಂಚಿ ಕೆಬಾಬು, ಹಿರಿಯ ಸದಸ್ಯರಾದ ಪಿ.ಕೆಭಾಸ್ಕರನ್, ಪಿ.ಎನ್.ಶಶಿ, ಎಸ್‌ಎನ್‌ಡಿಪಿ ಘಟಕದ ವಿ.ಕೆ.ಲೋಕೇಶ್, ಮುತ್ತಪ್ಪ ದೇವಸ್ಥಾನ ಸಮಿತಿ ಅಧ್ಯಕ್ಷ ಪಿ.ಎನ್.ಅಚ್ಚುತನ್, ಕೆ.ಕೆ.ಕನ್‌ಸ್ಟ್ರಕ್ಷನ್ ಸಿ.ಕೆ.ಶಿಜು, ಕಾಂಗ್ರೆಸ್‌ನ ಗೋಪಾಲ ಕೃಷ್ಣ ಉಪಸ್ಥಿತರಿದ್ದರು. ಎಂ.ಎಂ. ಶಶಿಧರನ್ ಸ್ವಾಗತಿಸಿದರೆ, ಕೆ.ಕೆ.ಸನಿಲ್ ವಂದಿಸಿದರು.

ಇದಕ್ಕೂ ಮೊದಲು ಚಾಮುಂಡಿ ಪೈಸಾರಿ ಶ್ರೀ ಅಯ್ಯಪ್ಪ ದೇವಸ್ಥಾನದಿಂದ ಮಹಾಬಲಿಯ [ಮಾವೇಲಿ] ಮೆರವಣಿಗೆಯಲ್ಲಿ ಚಂಡೆ ಮೇಳದೊಂದಿಗೆ ಕಲಾ ತಂಡಗಳು ಭಾಗವಹಿಸಿದ್ದವು. ಮೊದಲಿಗೆ ಮಹಿಳಾ ಘಟಕದ ಪ್ರೇಮಾ ಕೃಷ್ಣನ್ ಪೊಕಳಂ ಸ್ಪರ್ಧೆ ಉದ್ಘಾಟಿಸಿದರು. ಸಂಘದ ಉಪಾಧ್ಯಕ್ಷ ಟಿ.ಎನ್.ಶ್ರೀನಿವಾಸ್ ಕ್ರೀಡಾ ಸ್ಪರ್ಧೆ ಉದ್ಘಾಟಿಸಿದರು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮಧ್ಯಾಹ್ನ ಓಣಂ ಸದ್ಯ, ಬಳಿಕ ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಹಗ್ಗ-ಜಗ್ಗಾಟ, ಮಕ್ಕಳಿಗೆ ವಿವಿಧ ಕ್ರೀಡಾ ಸ್ಪರ್ಧೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.



ನಾಳೆ ಚಾಮರಾಜನಗರಕ್ಕೆ ಲೋಕಾಯುಕ್ತ ಅಧಿಕಾರಿಗಳ ಭೇಟಿ

ಚಾಮರಾಜನಗರ, ಅ.9– ಲೋಕಾಯುಕ್ತ ಅಧಿಕಾರಿಗಳು ಅಕ್ಟೋಬರ್ 11 ರಂದು ಚಾಮರಾಜನಗರ ಪಟ್ಟಣದ ಪ್ರವಾಸಿಮಂದಿರದಲ್ಲಿ ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ.

ಅಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಂದ ದೂರು ಅರ್ಜಿ ಸ್ವೀಕರಿಸುವರು. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕ ಕೆಲಸ ಮಾಡಿಕೊಡಲು ಲಂಚದ ಬೇಡಿಕೆ, ಸರ್ಕಾರಿ ಕೆಲಸಗಳಲ್ಲಿ ಅನಗತ್ಯ ವಿಳಂಬ, ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ಹಾಗೂ ನೌಕರರ ವಿರುದ್ಧ ಲೋಕಾಯುಕ್ತ ಕಾಯ್ದೆಯಡಿ ಸಾರ್ವಜನಿಕರು ದೂರುಗಳನ್ನು ನಿಗದಿತ ನಮೂನೆ-1 ಮತ್ತು 2ರಲ್ಲಿ ನೀಡಬಹುದು. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ವಿಭಾಗದ ಜಿಲ್ಲಾ ಪೊಲೀಸ್ ಉಪಾಧೀಕ್ಷಕರಾದ ಕೆ.ಟಿ. ಮ್ಯಾಥ್ಯೂಸ್ ಥಾಮಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ್ಯೇಷ್ಠತಾ ಆಧಾರದ ಮೇಲೆ ತುಂಡುಗುತ್ತಿಗೆ ಕಾಮಗಾರಿಗಳನ್ನು ನೀಡುವಂತೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಅ. 9– ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಬರುವ ಎಲ್ಲಾ ತುಂಡು ಗುತ್ತಿಗೆ ಕಾಮಗಾರಿಗಳನ್ನು ಸಮಾನವಾಗಿ, ಜ್ಯೇಷ್ಠತಾ ಆಧಾರದ ಮೇಲೆ ಎಲ್ಲಾ ಗುತ್ತಿಗೆದಾರರಿಗೂ ನೀಡಬೇಕು ಎಂದು ಆಗ್ರಹಿಸಿ ಚಾಮರಾಜನಗರ ಪರಿಶಿಷ್ಟ ಜಾತಿ ಮತ್ತು ಪಂಗಡ ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಚಾಮರಾಜನಗರ ಸಿವಿಲ್ ಗುತ್ತಿಗೆದಾರರ ಹಿತರಕ್ಷಣಾ ಸಮಿತಿ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿ, ಜಿಪಂ ಉಪ ಕಾರ್ಯದರ್ಶಿ ಸರಸ್ವತಿ ಅವರ ಮೂಲಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ ಸಂಘದ ಅಧ್ಯಕ್ಷ ಸಿ.ಕೆ.ಮಂಜುನಾಥ್ ಮಾತನಾಡಿ, ಇಲ್ಲಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಬರುವ 5 ಲಕ್ಷ ಮಿತಿಗೊಳಪಡಿಸಿ ಬರುವ ಎಲ್ಲಾ ಗುತ್ತಿಗೆ ಕಾಮಗಾರಿಗಳನ್ನು ಸಮಾನವಾಗಿ ಎಲ್ಲಾ ಗುತ್ತಿಗೆದಾರರುಗಳಿಗೆ ಜ್ಯೇಷ್ಠತಾ ಆಧಾರದ ಮೇಲೆ ಹಂಚಿಕೆ ಮಾಡಬೇಕು. ಇದರಲ್ಲಿ 3ನೇ, 4ನೇ ದರ್ಜೆ ಗುತ್ತಿಗೆದಾರರುಗಳಿಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು.

ಅಧಿಕಾರಿಗಳು ಕೆಲವೇ ಕೆಲವು ಗುತ್ತಿಗೆದಾರರಿಗೆ ಮಾತ್ರ ತುಂಡು ಗುತ್ತಿಗೆಯನ್ನು ನೀಡುತ್ತಿದ್ದಾರೆ. ಇದರಿಂದ ಗುತ್ತಿಗೆ ಪರವಾನಗಿ ಮಾಡಿಕೊಂಡು ಬರುವ ಹೊಸ ಗುತ್ತಿಗೆದಾರರು ವರ್ಷಕ್ಕೆ ಒಂದು ಕಾಮಗಾರಿಯನ್ನು ಮಾಡದಿರುವಂತಹ ಪರಿಸ್ಥಿತಿ ಉಂಟಾಗಿದೆ. ಇದರಿಂದ ಸಣ್ಣ ಗುತ್ತಿಗೆದಾರರರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್‌ನಿಂದ ಬರುವ ಅನುದಾನಗಳು ಹಾಗೂ ಶಾಸಕರು, ಸಂಸದರ ನಿಧಿಗಳಿಂದ ಬರುವ ಅನುದಾನ ಹಾಗೂ ಸರ್ಕಾರದ ವಿವಿಧ ಲೆಕ್ಕಶೀರ್ಷಿಕೆಯಿಂದ ಬರುವ ಅನುದಾನಗಳ ಕಾಮಗಾರಿಗಳನ್ನು ಸಮಾನವಾಗಿ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಕಾಮಗಾರಿಗಳನ್ನು ನೀಡಿರುವ ಗುತ್ತಿಗೆದಾರರ ಕಾಮಗಾರಿಯ ವಿವರ ಮಾಹಿತಿಯನ್ನು ನಾಮಫಲಕದಲ್ಲಿ ಪ್ರಕಟಣೆಗೊಳಿಸಬೇಕು. ಪಂಚಾಯತ್ ರಾಜ್ ಇಂಜಿನಿಯರ್ ವಿಭಾಗದಲ್ಲಿ ಕೆಲವು ಹೊರಗುತ್ತಿಗೆ ನೌಕರರು, ಇಂಜಿನಿಯರ್ ಸಹಾಯಕರೇ ಹೆಚ್ಚು ಗುತ್ತಿಗೆ ಕೆಲಸಗಳನ್ನು ನೀಡುತ್ತಿದ್ದಾರೆ. ಅಂತಹ ನೌಕರರನ್ನು ತೆಗೆದು ಹಾಕಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಗುತ್ತಿಗೆದಾರರಾದ ರಂಗನಾಯಕ ಕಣ್ಣೇಗಾಲ, ಬಿಸಲವಾಡಿ ಉಮೇಶ್, ಕಾವುದವಾಡಿ ಗುರು, ಕೃಷ್ಣಮೂರ್ತಿ, ಶ್ರೀನಿವಾಸೌಡ. ಚಾ.ಗು.ನಾಗರಾಜು, ಪರ್ವತ್‌ರಾಜ್, ಬಿ.ಎಲ್.ಮಹದೇವಸ್ವಾಮಿ, ಬಸವಣ್ಣ, ಶಿವಬಸಪ್ಪ, ನಾಗೇಶ್, ಬಸವರಾಜು, ಸೋಮಸುಂದರ್, ಶಿವನಾಗಣ್ಣ, ಕಾರ್ ನಾಗೇಶ್, ಶಿವಕುಮಾರ್, ವೈಪಿ.ರಾಜೇಂದ್ರ, ಎಸ್. ರವಿ ಇತರರು ಭಾಗವಹಿಸಿದ್ದರು.

ಬ್ಲಾಕ್‌ಮೇಲ್ ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧ ಕ್ರಮಕ್ಕೆ ಆಗ್ರಹ



ಚಾಮರಾಜನಗರ, ಅ. 9– ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸಂಘವನ್ನು ಬ್ಲಾಕ್‌ಮೇಲ್ ಮಾಡುತ್ತಿರುವ ಗುತ್ತಿಗೆದಾರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಎಸ್‌ಸಿ, ಎಸ್‌ಟಿ ಗುತ್ತಿಗೆದಾರರು ಹಾಗೂ ಸಿವಿಲ್ ಗುತ್ತಿಗೆದಾರರ ಸಂಘದ ವತಿಯಿಂದ ಜಿಪಂ ಉಪ ಕಾರ್ಯದರ್ಶಿ ಸರಸ್ವತಿ ಅವರ ಮೂಲಕ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಲೋಕೋಪಯೋಗಿ ಇಲಾಖೆಯಲ್ಲಿ ತುಂಡು ಗುತ್ತಿಗೆ ಕಾಮಗಾರಿಗಳು ಅನುಮೋದನೆಗೊಂಡಿದ್ದು, ಈ ಕಾಮಗಾರಿಗಳು ಕಾನೂನು ಚೌಕಟ್ಟಿನೊಂದಿಗೆ ಎಸ್‌ಸಿ, ಎಸ್‌ಟಿ, ಸಾಮಾನ್ಯ ಗುತ್ತಿಗೆದಾರರಿಗೆ ಅಧಿಕಾರಿ ವರ್ಗದವರು ಸಮರ್ಪಕವಾಗಿ ಹಂಚಿಕೆ ಮಾಡಿರುತ್ತಾರೆ. ಆದರೆ ಗುತ್ತಿಗೆದಾರ ಸಿ.ಕೆ.ಮಂಜುನಾಥ್ ಇತರರು ಜಿಲ್ಲಾಡಳಿತ ಭವನದ ಎದುರು ಉದ್ದೇಶಪೂರ್ವಕವಾಗಿ ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡುವುದು, ಬೇರೆ ವರ್ಗದ ಅಧಿಕಾರಿಗಳನ್ನು ಎಸ್‌ಸಿ, ಎಸ್‌ಟಿ ವರ್ಗದವರಿಗೆ ಅನ್ಯಾಯ ಮಾಡುತ್ತೀರಾ ಎಂದು ಹೆದರಿಸುವ ಕೆಲಸ ಮಾಡುತ್ತಿದ್ದಾರೆ. ಈತನ ಜೊತೆ ಮೂರು ನಾಲ್ಕು ಗುತ್ತಿಗೆದಾರರು ಸೇರಿಕೊಂಡು ಅಧಿಕಾರಿಗಳು, ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ವಿರುದ್ಧ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ. ಇವರ ಮೇಲೆ ಕಾನೂನು ಶಿಸ್ತು ಕ್ರಮಕೈಗೊಳ್ಳಬೇಕು ಎಂದು ಮನವಿಯಲ್ಲಿ ಸಂಘದ ಅಧ್ಯಕ್ಷ ಅಂಬ್ಯನಪುರ ಶಿವಕುಮಾರ್ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಗುತ್ತಿಗೆದಾರರಾದ ನಲ್ಲೂರು ಮಹದೇವಸ್ವಾಮಿ, ಸಿ.ಕೆ. ರವಿಕುಮಾರ್, ಲೋಕೇಶ್, ಚನ್ನಪ್ಪ, ಎಸ್.ಆರ್.ಗೋವಿಂದರಾಜು, ಉತ್ತುವಳ್ಳಿ ಕಾಂತರಾಜು, ಕುಂಭೇಶ್ವರ ಸ್ವಾಮಿ ಇತರರು ಭಾಗವಹಿಸಿದ್ದರು.

ಕಾವೇರಿ ಕಿಚ್ಚು: ಕರ್ನಾಟಕ ಸೇನಾಪಡೆಯಿಂದ ಪೊರಕೆ ಚಳವಳಿ



ಚಾಮರಾಜನಗರ, ಅ.9– ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರು ನಿಲ್ಲಿಸುವಂತೆ ಕರ್ನಾಟಕ ಸೇನಾಪಡೆ ವತಿಯಿಂದ ಪ್ರತಿಭಟನೆ ನಡೆಯುತ್ತಿದ್ದು, ಇಂದು ಕೂಡ ಪೊರಕೆ ಚಳುವಳಿ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಚಾ.ರಂ. ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಪೊರಕೆ ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಅಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆತಡೆ ನಡೆಸಿ ಕೇಂದ್ರ, ರಾಜ್ಯ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ, ತಮಿಳುನಾಡು ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ಕಳೆದ 1 ತಿಂಗಳಿನಿಂದಲೂ ತಮಿಳುನಾಡಿಗೆ ಕಾವೇರಿ ನೀರು ಹರಿಸಬಾರದೆಂದು ನಮ್ಮ ಸಂಘಟನೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸುತ್ತಿದ್ದು ಇಂದು ಪೊರಕೆ ಚಳವಳಿ ನಡೆಸಲಾಗಿದೆ. ರಾಜ್ಯ ಸರ್ಕಾರ ಕೂಡಲೇ ನೀರನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ಚಾ.ವೆಂ.ರಾಜ್ ಗೋಪಾಲ್, ಗು.ಪುರುಷೋತ್ತಮ್, ಲಿಂಗರಾಜು, ನಂಜುಂಡಸ್ವಾಮಿ, ಕೃಷ್ಣಯ್ಯ, ರವಿಚಂದ್ರಪ್ರಸಾದ್ ಕಹಳೆ, ಆಟೋ ನಾಗೇಶ್, ಸೋಮವಾರಪೇಟೆ ಮಂಜು, ಇತರರು ಭಾಗವಹಿಸಿದ್ದರು.

ಸಭೆ ಮುಂದೂಡಿಕೆ

ಚಾಮರಾಜನಗರ, ಅ.9– ಲೋಕಸಭಾ ಸದಸ್ಯ ವಿ. ಶ್ರೀನಿವಾಸಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಅ.11ರಂದು ನಿಗದಿಯಾಗಿದ್ದ ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದು ಮುಂದಿನ ಸಭೆಯ ದಿನಾಂಕವನ್ನು ನಂತರ ತಿಳಿಸಲಾಗುವುದೆಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮಹಿಷ ದಸರಾಕ್ಕೆ ಸಹಸ್ರಾರು ಮಂದಿ ಭಾಗವಹಿಸಲು ಜ್ಞಾನಪ್ರಕಾಶ್‌ಸ್ವಾಮೀಜಿ ಮನವಿ



ಚಾಮರಾಜನಗರ, ಅ. 9– ರಾಜ್ಯದ ಪ್ರಗತಿಪರ ಚಿಂತಕರು, ಜಿಲ್ಲಾ ಮತ್ತು ತಾಲೂಕು ಮಟ್ಟದ ದಲಿತ ಸಂಘಟನೆಗಳು ಹಾಗೂ ಅಂಬೇಡ್ಕರ್ ಸಂಘಟನೆಗಳ ಸಹಯೋಗದಲ್ಲಿ ಅ.13 ರಂದು ಮೈಸೂರಲ್ಲಿ ನಡೆಯುವ ಮಹಿಷ ದಸರಾಗೆ ಜಿಲ್ಲೆಯಿಂದ ಎಲ್ಲಾ ದಲಿತಪರ ಸಂಘಟನೆಗಳು, ಸಂಘ, ಸಂಸ್ಥೆಗಳ ಮುಖ್ಯಸ್ಥರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸುವಂತೆ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್‌ಸ್ವಾಮೀಜಿ ಮನವಿ ಮಾಡಿದರು.

ನಗರದ ಕರಿನಂಜನಪುರ ರಸ್ತೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಮಹಿಷ ದಸರಾ ಮಹೋತ್ಸವ ಪೂರ್ವಭಾವಿಯಲ್ಲಿ ಅವರು ಮಾತನಾಡಿದರು. ಅಂದು 9.30ಕ್ಕೆ ಮೈಸೂರು ಚಾಮುಂಡಿಬೆಟ್ಟದ ಮಹಿಷಾಸುರನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ನಂತರ ಚಾಮುಂಡಿಬೆಟ್ಟದ ಮಹಾದ್ವಾರದ ಬಳಿಯಿಂದ ವಿವಿಧ ವೇಷಭೂಷಣ ಸಾಂಸ್ಕೃತಿಕ ಕಲಾ ತಂಡಗಳು ಮತ್ತು ಕಲಾವಾದ್ಯಗಳು, ಜಾತ್ಯಾತೀತ ಮಹನೀಯರ ಸ್ತಬ್ಧಚಿತ್ರಗಳು ತಾವರೆಕಟ್ಟೆಯಿಂದ ಕುರುಬಾರಹಳ್ಳಿ ವೃತ್ತ, ಸಿದ್ಧಾರ್ಥ ಬಡಾವಣೆ, ನಜರ್‌ಬಾದ್, ಹಾರ್ಡಿಂಜ್ ವೃತ್ತ ಮುಖಾಂತರ ಮೆರವಣಿಗೆಯಲ್ಲಿ ಪುರಭವನದ ಭವ್ಯ ವೇದಿಕೆಯಲ್ಲಿ ಸಮಾವೇಶಗೊಳ್ಳಲಾಗುವುದು.

ನಾಡಿನ ಹಿರಿಯ ಸಾಹಿತಿಗಳು, ಮಾಜಿ ಸಚಿವೆ ಬಿ.ಟಿ.ಲಲಿತಾನಾಯಕ್ ಮಹಿಷ ದಸರಾ ಉದ್ಘಾಟಿಸಲಿದ್ದಾರೆ. ಇತಿಹಾಸ ತಜ್ಞ ತಲಕಾಡು ಚಿಕ್ಕರಂಗೇಗೌಡರು ವಿಶೇಷ ಉಪನ್ಯಾಸ ಮಾಡಲಿದ್ದಾರೆ. ನಾಡಿನ ಅನೇಕ ಚಿಂತಕರು ಭಾಗವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ಮಹಿಷ ದಸರಾ ಸಮಿತಿ ಅಧ್ಯಕ್ಷ, ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ಕೆ.ಎಂ.ನಾಗರಾಜು, ಸಿ.ಕೆ.ಮಂಜುನಾಥ್, ಸಿ.ಎಂ.ಶಿವಣ್ಣ, ವಕೀಲರಾದ ಪ್ರಸನ್ನ ಕುಮಾರ್, ಮಧುಸೂದನ್, ಬಸವಣ್ಣ, ಶಿವನಾಗಣ್ಣ, ತಾಪಂ ಮಾಜಿ ಸದಸ್ಯ ರೇವಣ್ಣ, ಕೆಂಪರಾಜು, ರವಿಚಂದ್ರ ಪ್ರಸಾದ್, ಕುಮಾರ್, ಸಂಘಸೇನ, ಬಂಗಾರಸ್ವಾಮಿ, ಸೋಮಣ್ಣ, ನಾಗಶೇಖರ ಇತರರು ಭಾಗವಹಿಸಿದ್ದರು.

ಇಂದು ನಗರದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಜಾಥಾ

ಚಾಮರಾಜನಗರ, ಅ.9– ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಅ.10ರಂದು ಬೆಳಗ್ಗೆ 10 ಗಂಟೆಗೆ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರಿಗೆ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಜಾಥಾ ಏರ್ಪಡಿಸಿದ್ದು, ನಗರದ ಚಾಮರಾಜೇಶ್ವರ ದೇವಸ್ಥಾನದಿಂದ ಜಿಲ್ಲಾಡಳಿತ ಭವನದವರೆಗೆ ಜಾಥಾ ನಡೆಯಲಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಇಲ್ಲೊಂದು ಶಾಶ್ವತ ಪರಿಹಾರವಿದೆ...!

ಸಮುದ್ರ ಸೇರುವ ಸನ್ನಿವೇಶವಿದೆ. ಲಿಂಗನಮಕ್ಕಿ ಅಣೆಕಟ್ಟೆಯ ನೀರಿನ ಸಂಗ್ರಹ ಸಾಮರ್ಥ್ಯ 152 ಟಿಎಂಸಿ ಅಡಿಗಳಷ್ಟಿದ್ದು, ವರ್ಷವಿಡೀ ಹಲವು ಬಾರಿ ತುಂಬಿ, ಬರಿದಾಗುತ್ತದೆ. ಈ ಅಣೆಕಟ್ಟೆಯಲ್ಲಿ ಭರ್ತಿಯಾಗುವ ನೀರನ್ನು ಸಮುದ್ರಕ್ಕೆ ಬಿಡುವುದರ ಬದಲು ಒಮ್ಮೆಗೆ ತಮಿಳುನಾಡಿಗೆ ಸರಬರಾಜು ಮಾಡಿದರೆ, ಕರ್ನಾಟಕ ತನ್ನೆಲ್ಲಾ ನೀರನ್ನು ಕೆಆರ್‌ಎಸ್ ಅಣೆಕಟ್ಟೆಯಲ್ಲೇ ಉಳಿಸಿಕೊಳ್ಳಬಹುದು. ಈಗ ಪ್ರಶ್ನೆ ಏನೆಂದರೆ 'ಇದನ್ನು ಏಕೆ ಮಾಡಲಾಗುತ್ತಿಲ್ಲ?' ಆದರೆ, ಇಲ್ಲಿ ಸಮಸ್ಯೆ ಎಂದರೆ ಲಿಂಗನಮಕ್ಕಿ ಅಣೆಕಟ್ಟೆ ಸಮುದ್ರ ಮಟ್ಟದಿಂದ 570 ಮೀಟರ್ ಎತ್ತರದಲ್ಲಿದೆ. ಜೊತೆಗೆ ಕರ್ನಾಟಕದ ಹೆಚ್ಚಿನ ಭಾಗಗಳ ಭೂಮಿಯು 800 ಮೀಟರ್‌ಗಳಿಗೂ ಎತ್ತರದಲ್ಲಿದೆ. ಕೆಆರ್‌ಎಸ್ ಅಣೆಕಟ್ಟೆ ಕೂಡ 810 ಮೀಟರ್ ಎತ್ತರದಲ್ಲಿದೆ. ಗುರುತ್ವಾಕರ್ಷಣೆ ದೃಷ್ಟಿಯಿಂದ ಲಿಂಗನಮಕ್ಕಿ ಅಣೆಕಟ್ಟೆಯಿಂದ ನೀರನ್ನು ಕೆಆರ್‌ಎಸ್ ಇಲ್ಲವೇ ಕಾವೇರಿ ನದಿಗೆ ಹರಿಸಲಾಗದು.

ಇಲ್ಲಿದೆ ಪರಿಹಾರ: ಕೆಆರ್‌ಎಸ್‌ನಿಂದ ಬಿಡುಗಡೆಯಾದ ಕಾವೇರಿ ನೀರು ನಂತರ ಶಿವನಸಮುದ್ರಕ್ಕೆ ಹರಿಯುತ್ತದೆ. ಅಲ್ಲದೆ, 620 ಮೀಟರ್ ಎತ್ತರದಿಂದ 430 ಮೀಟರ್ ಕೆಳ ಮಟ್ಟಕ್ಕೆ ಧುಮುಕುತ್ತದೆ. ಲಿಂಗನಮಕ್ಕಿಯಿಂದ ಶಿವನಸಮುದ್ರದವರೆಗೆ 300 ಕಿ.ಮೀ. ಅಂತರಕ್ಕೆ ಭೂಗತ ಸುರಂಗ ಮಾರ್ಗ ಕೊರೆದು ಗುರುತ್ವಾಕರ್ಷಣೆ ಮೂಲಕವೇ ಲಿಂಗನಮಕ್ಕಿಯಿಂದ 430 ಮೀಟರ್‌ನಷ್ಟು ಕೆಳಭಾಗದ ಕಾವೇರಿ ಕಣಿವೆಗೆ ನೀರನ್ನು ಪೂರೈಸಲು ಸಾಧ್ಯವಿದೆ. ಜೊತೆಗೆ ಇದರಿಂದ ತಮಿಳುನಾಡಿಗೂ ನೀರು ಹರಿಸಬಹುದು. ಈ ಸುರಂಗ ಮಾರ್ಗ ಬೃಹತ್ ಯೋಜನೆಯಾಗಿದೆ. ಇದಕ್ಕೆ ಸೂಕ್ತ ಅಧ್ಯಯನ, ಸಾಕಷ್ಟು ಸಮಯ, ಹಣ ಮತ್ತು ಉತ್ಕೃಷ್ಟ ಇಂಜಿನಿಯರಿಂಗ್ ನೈಪುಣ್ಯತೆಯ ಅಗತ್ಯವಿದೆ. ಆದರೆ, ಈ ಉದ್ದೇಶಿತ ಯೋಜನೆಯಿಂದ ಎರಡೂ ರಾಜ್ಯಗಳ ನೀರಿನ ಸಮಸ್ಯೆಗಳನ್ನು ಪರಿಹರಿಸಬಹುದು. ಲಿಂಗನಮಕ್ಕಿ ಅಣೆಕಟ್ಟೆಯ ಯಥೇಚ್ಛ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತಿದೆ. ಪ್ರಸ್ತುತ ವಿದ್ಯುತ್ ಉತ್ಪಾದನೆಗೆ ನಾನಾ ಮಾರ್ಗಗಳಿವೆ. ಜೊತೆಗೆ ವಿದ್ಯುತ್ ಉತ್ಪಾದಿಸಿದ ನಂತರ ಶುದ್ಧ ನೀರನ್ನು ಸಮುದ್ರಕ್ಕೆ ಹರಿಸುವುದು ಜಾಣತನವಲ್ಲ. ಇಸ್ರೇಲ್ ಮತ್ತು ಸೌದಿ ಅರೇಬಿಯಾದಂತಹ ದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸಿ ಸಮುದ್ರದ ನೀರಿನಿಂದ ಶುದ್ಧ ನೀರು ಉತ್ಪಾದಿಸಲಾಗುತ್ತದೆ. ಆದರೆ ನಮ್ಮಲ್ಲಿ ಅದೇ ವಿದ್ಯುತ್ ಉತ್ಪಾದಿಸಲು ನಾವು ಶುದ್ಧ ನೀರನ್ನು ಸಮುದ್ರಕ್ಕೆ ಹರಿಸುತ್ತಿದ್ದೇವೆ.

ಸರ್ ಎಂವಿ ಉದ್ಗರಿಸಿದ್ದರು!: ಜೋಗ ಜಲಪಾತವನ್ನು ಕಂಡು ಜನರು, ಆಹಾ... ಅದ್ಭುತ ಎಂದು ಬಣ್ಣಿಸಿದರೆ, ಸರ್ ಎಂ.ವಿಶ್ವೇಶ್ವರಯ್ಯ ಮಾತ್ರ 'ಎಂತಹ ವ್ಯರ್ಥ' ಎಂದು ಉದ್ಗರಿಸಿದ್ದರು. ಮಾತ್ರವಲ್ಲ, ಅಲ್ಲಿ ಮಹಾತ್ಮ ಗಾಂಧಿ ವಿದ್ಯುತ್ ಸ್ಥಾವರ ಸ್ಥಾಪಿಸಿದರು. 'ವಿದ್ಯುತ್ ಉತ್ಪಾದಿಸಿದ ನಂತರ ಶುದ್ಧ ನೀರನ್ನು ಸಮುದ್ರಕ್ಕೆ ಹರಿಸಿ ವ್ಯರ್ಥ ಮಾಡುವುದರ ಬದಲು ನಮ್ಮ ಜಮೀನುಗಳಿಗೆ ನೀರುಣಿಸಲು ಬಳಸಬಹುದು' ಎಂದು ಸರ್ ಎಂ.ವಿಶ್ವೇಶ್ವರಯ್ಯನವರು ಹೇಳಿದ ಮಾತು ಸ್ಮರಿಸಿಕೊಳ್ಳುವ ಸಮಯ ಈಗ ಬಂದಿದೆ.

ರಾಷ್ಟ್ರವ್ಯಾಪಿ ಜಾತಿಗಣತಿ ಗ್ಯಾರಂಟಿ

ಪತ್ರಕರ್ತರು ಮತ್ತು ಬರಹಗಾರರ ಮೇಲೆ ನಡೆಸಿದ ದಾಳಿ ಹಾಗೂ ಭಯೋತ್ಪಾದನಾ ವಿರೋಧಿ ಕಾಯ್ದೆಗಳಡಿ ಪ್ರಕರಣ ದಾಖಲಿಸಿರುವುದನ್ನು ಸಿಡಬ್ಲ್ಯೂಸಿ ಖಂಡಿಸಿದೆ. ಕೇಂದ್ರ ಸರ್ಕಾರದ ನಿರ್ಧಾರ ಹಾಗೂ ಕ್ರಮಗಳನ್ನು ಪ್ರಶ್ನಿಸುವವರ ವಿರುದ್ಧ ಮೋದಿ ಸರ್ಕಾರ ವ್ಯಾಪಕವಾಗಿ ಕಾನೂನು ಹಾಗೂ ಕೇಂದ್ರೀಯ ಸಂಸ್ಥೆಗಳ ದುರ್ಬಳಕೆ ಮಾಡಿಕೊಂಡಿದೆ. ಇಂತಹ ಬಲವಂತದ ಹಾಗೂ ಕಾನೂನುಬಾಹಿರ ಕ್ರಮಗಳು ಮಾಧ್ಯಮಗಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ. ಸರ್ಕಾರದ ಹೊಣೆಗಾರಿಕೆಯನ್ನು ಪ್ರಶ್ನಿಸುವ ಪತ್ರಕರ್ತರು ಹಾಗೂ ರಾಜಕಾರಣಿಗಳ ಮೂಲಭೂತ ಹಕ್ಕನ್ನು ಮೊಟಕುಗೊಳಿಸುತ್ತದೆ ಎಂದು ಸಿಡಬ್ಲ್ಯೂಸಿ ಸಭೆ ತಿಳಿಸಿದೆ.

ಮಣಿಪುರದಲ್ಲಿ ಸಾಂವಿಧಾನಿಕ ಸರ್ಕಾರದ ವ್ಯವಸ್ಥೆ ಕುಸಿದು ಬಿದ್ದಿರುವುದು ಹಾಗೂ ಅಮಾನವೀಯ ದುರಂತ ಮುಂದುವರೆದಿರುವ ಬಗ್ಗೆ ಸಭೆ ಆತಂಕ ವ್ಯಕ್ತಪಡಿಸಿದ್ದು, ಕಳೆದ 5 ತಿಂಗಳಿಂದಲೂ ಗಲಭೆ ನಡೆಯುತ್ತಿದ್ದರೂ ಪ್ರಧಾನಮಂತ್ರಿಗಳು ಮಣಿಪುರದ ಜನರನ್ನು ಹಾಗೂ ತಮ್ಮ ಸಾಂವಿಧಾನಿಕ ಕರ್ತವ್ಯಗಳನ್ನು ನಿರ್ಲಕ್ಷಿಸಿದ್ದಾರೆ. ಮಣಿಪುರ ಬಿಕ್ಕಟ್ಟನ್ನು ಬಗೆಹರಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಅಲ್ಲಿನ ಮುಖ್ಯಮಂತ್ರಿಯನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕೆಂದು ಆಗ್ರಹಿಸಿದೆ. ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ನೇತೃತ್ವದ ರಾಜ್ಯ ಸರ್ಕಾರಗಳು ಜನರಿಗೆ ಪರಿಹಾರ ನೀಡುವ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿವೆ. ಆದರೆ, ಪ್ರಜಾಪ್ರಭುತ್ವಕ್ಕೆ ಒದಗಿರುವ ಗಂಡಾಂತರ ಹಾಗೂ ದಿನೇ ದಿನೆ ಬಿಗಡಾಯಿಸುತ್ತಿರುವ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ದೀರ್ಘಾವಧಿಯ ಪರಿಹಾರ ಜನರಿಗೆ ಅಗತ್ಯವಾಗಿದ್ದು, ಕೇಂದ್ರ ಹಾಗೂ ರಾಜ್ಯಗಳಲ್ಲಿ ಜನವಿರೋಧಿ ಬಿಜೆಪಿ ಸರ್ಕಾರಗಳನ್ನು ಅಧಿಕಾರದಿಂದ ಕಿತ್ತೊಗೆಯುವುದು. ಈ ಗುರಿ ಸಾಧನೆಗಾಗಿ ಸಿಡಬ್ಲ್ಯೂಸಿ ತನ್ನ ಎಲ್ಲಾ ಸದಸ್ಯರು ಹಾಗೂ ಬೆಂಬಲಿಗರು ಮುಂದಿನ ರಾಜ್ಯ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳಲ್ಲಿ ಒಗ್ಗಟ್ಟಿನಿಂದ ದೃಢ ಸಂಕಲ್ಪ ಹಾಗೂ ಸಮರ್ಪಣಾ ಭಾವದಿಂದ ಶ್ರಮಿಸುವಂತೆ ಕರೆ ನೀಡಿದೆ.

ಪ್ಯಾಲೆಸ್ಟೈನ್ ಬೆಂಬಲಿಸಿ ಕಾಂಗ್ರೆಸ್ ನಿರ್ಣಯ

ಪ್ಯಾಲೆಸ್ಟೈನ್ ಜನರ ಭೂಮಿ, ಸ್ವ ಆಡಳಿತ, ಸ್ವಾಭಿಮಾನ ಮತ್ತು ಘನತೆಯಿಂದ ಬದುಕುವ ಹಕ್ಕುಗಳಿಗಾಗಿ ಸಿಡಬ್ಲ್ಯೂಸಿ ಸುದೀರ್ಘಾವಧಿಯ ಬೆಂಬಲವನ್ನು ಪುನರುಚ್ಚರಿಸುತ್ತದೆ. ಕದನ ವಿರಾಮ ಮತ್ತು ಪ್ರಸ್ತುತ ಸಂಘರ್ಷಕ್ಕೆ ಕಾರಣವಾಗಿರುವ ಸಮಸ್ಯೆಗಳು ಸೇರಿದಂತೆ ಎಲ್ಲಾ ವಿಷಯಗಳ ಬಗ್ಗೆ ಮಾತುಕತೆಗಳನ್ನು ಪುನರಾರಂಭಿಸಲು ಕರೆ ನೀಡಲಾಗಿದೆ ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಬರೀ ಉತ್ತರನ ಪೌರುಷ...!

ಸಿದ್ದರಾಮಯ್ಯ ಮುಖ್ಯಮಂತ್ರಿ ಎನ್ನುತ್ತಾರೆ. ಇನ್ನು ಡಿ.ಕೆ. ಶಿವಕುಮಾರ್‌ಗೆ ಎಲ್ಲಿ ಎರಡೂವರೆ ವರ್ಷ ಮುಖ್ಯಮಂತ್ರಿ ಸ್ಥಾನ ಸಿಗುತ್ತದೆ ಎಂದು ಪ್ರಶ್ನಿಸಿದರು. ಐದು ಗ್ಯಾರಂಟಿಗಾಗಿ ಎಲ್ಲಾ ಅಭಿವೃದ್ಧಿ ಯೋಜನೆ ಸ್ಥಗಿತವಾಗಿರುವ ಈ ಸರ್ಕಾರ ಬೇಕಾ? ಅಧಿಕಾರಕ್ಕೆ ಬಂದು ಐದು ತಿಂಗಳಾದರೂ ಅಭಿವೃದ್ಧಿಗೆ ಹಣವಿಲ್ಲ. ಬಹುಮತ ಗಳಿಸಿದ ಸಂತೋಷದಲ್ಲಿರುವ ಸರ್ಕಾರ ಐದು ಗ್ಯಾರಂಟಿ ಅನುಷ್ಠಾನದ ಜಪ ಮಾಡುತ್ತಿದೆ.

ಬಸವ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಆತ್ಮಾವಲೋಕನ ಮಾಡಿಕೊಂಡು ರೈತರ ಉದ್ಧಾರ ಆಗದೆ, ದೇಶ ಉದ್ಧಾರ ಆಗಲ್ಲ ಎಂದಿದ್ದಾರೆ. ಆದರೆ ರಾಜ್ಯದಲ್ಲಿ ಭೀಕರ ಬರಗಾಲ ಇದೆ. 40 ಲಕ್ಷ ಹೆಕ್ಟೇರ್‌ನಲ್ಲಿ ನಾಲ್ಕು ಸಾವಿರ ಕೋಟಿ ರೂ.ಬೆಳೆ ನಷ್ಟವಾಗಿದೆ ಎಂದು ಸರ್ಕಾರವೇ ಹೇಳಿದ್ದರೂ ಇನ್ನೂ ಒಂದು ನಯಾಪೈಸೆ ಪರಿಹಾರ ಧನ ಬಿಡುಗಡೆಯಾಗಿಲ್ಲ ಎಂದು ಆರೋಪಿಸಿದರು.

ರೈತರ ಬಗ್ಗೆ ಭಾಷಣ ಮಾಡಿದರೆ ಸಾಲದು. ಏನು ಮಾಡಿದ್ದೀರಿ ಎಂಬುದನ್ನು ಮುಖ್ಯಮಂತ್ರಿ ಹೇಳಬೇಕು. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ 7 ಗಂಟೆ ಬದಲು ಎರಡು ಗಂಟೆ ವಿದ್ಯುತ್ ನೀಡಲಾಗುತ್ತಿದೆ. ಹೊಸ ಸಂಪರ್ಕಕ್ಕೆ 10 ಸಾವಿರ ಇದ್ದದ್ದು ಈಗ ನಾಲ್ಕೈದು ಲಕ್ಷ ರೂ.ಗೆ ಏರಿಕೆಯಾಗಿದೆ. ಕೃಷಿ ಜಮೀನಿನಲ್ಲಿ ಮನೆ ನಿರ್ಮಿಸಿದರೆ ನಿರಂತರ ಜ್ಯೋತಿ ವಿದ್ಯುತ್ ಸಿಗಲ್ಲ. ಆಸ್ಪತ್ರೆ, ಶಾಲೆ, ರಸ್ತೆಗೆ ಹಣವಿಲ್ಲ. ಪಾಪದ ಹಣದಿಂದ ಸರ್ಕಾರ ನಡೆಸಬೇಕಾ? ಎಂತಹ ಪರಿಸ್ಥಿತಿಯಲ್ಲಿ ಇದ್ದೇವೆ? ಒಂದು ಲೈಟ್ ಕಂಬ ಹಾಕಲು ಇಂಧನ ಸಚಿವರ ಮನೆಗೆ ಹೋಗಬೇಕಾದ ಸ್ಥಿತಿ ಇದೆ ಎಂದು ಕಾಂಗ್ರೆಸ್ ಶಾಸಕರೇ ಹೇಳುತ್ತಿದ್ದಾರೆ ಎಂದು ಟೀಕಿಸಿದರು. ಅನ್ನಭಾಗ್ಯ ಅಕ್ಕಿ ಎಲ್ಲಿ ಕೊಟ್ಟಿದ್ದೀರಿ? ಕೇಂದ್ರದ ಐದು ಕೆಜಿ ಅಕ್ಕಿ ಬಿಟ್ಟರೆ ಒಂದೇ ಒಂದು ಕಾಳು ಸ್ವಂತ ಅಕ್ಕಿ ಕೊಟ್ಟಿಲ್ಲ. 170 ರೂ. ಕೊಟ್ಟಿದ್ದೀರಿ, ದೇಶದಲ್ಲಿ 80 ಕೋಟಿ ಜನರು ಪ್ರಧಾನಿ ನರೇಂದ್ರ ಮೋದಿ ಕೊಟ್ಟ ಅಕ್ಕಿಯಿಂದ ಊಟ ಮಾಡುತ್ತಿದ್ದಾರೆ.

200 ಯೂನಿಟ್ ಉಚಿತ ವಿದ್ಯುತ್ ಘೋಷಣೆ ಮಾಡಿ, ಸರಾಸರಿ 58 ಯೂನಿಟ್ ವಿದ್ಯುತ್ ಉಚಿತವಾಗಿ ಕೊಡಲಾಗುತ್ತಿದೆ. ಇದು ಕೂಡಾ ಸುಳ್ಳು ಗ್ಯಾರಂಟಿಯಾಗಿದೆ. ಗೃಹ ಲಕ್ಷ್ಮೀ ಯೋಜನೆ ಯಜಮಾನ, ಯಜಮಾನಿ ಇಲ್ಲದ ತಬ್ಬಲಿ ಮಕ್ಕಳಿಗೆ ಇಲ್ಲ. ಫ್ರೀ ಬಸ್ ಅಂತಾರೆ, ಆದರೆ ವಿದ್ಯಾರ್ಥಿಗಳಿಗೆ ಬಸ್ ಸಿಗುತ್ತಿಲ್ಲ. ಹೊಸ ಬಸ್ ಖರೀದಿ ಮಾಡುತ್ತೇವೆ ಎನ್ನುತ್ತಾರೆ, ಅಲ್ಲಿಯವರೆಗೆ ಮಕ್ಕಳ ಗತಿ ಏನು ಎಂದು ಪ್ರಶ್ನಿಸಿದರು.

ಸಾಲ ಮನ್ನಾ ಚಿಂತನೆ

ಲಕ್ಷ್ಮಣ ಸವದಿ ನೇತೃತ್ವದ ಸಮಿತಿ ತಿಂಗಳೊಳಗೆ ವರದಿ ನೀಡಲಿದೆ. ವರದಿ ಬಂದ ನಂತರ ಠೇವಣಿದಾರರ ಹಾಗೂ ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಎಲ್ಲಾ ಸಂಸ್ಥೆಗಳಲ್ಲೂ ಅವ್ಯವಹಾರ ಆಗಿಲ್ಲ. ಬಹಳಷ್ಟು ಒಳ್ಳೆಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಕೆಲವು ಸಹಕಾರಿ ಸಂಸ್ಥೆಗಳಲ್ಲಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸರ್ಕಾರ ಕಾನೂನು ರೀತಿ ಕ್ರಮ ಜರುಗಿಸುತ್ತಿದೆ. ನ್ಯಾಯಾಲಯಗಳಲ್ಲಿ ವಿಚಾರಣೆ ಬಾಕಿ ಇರುವ ಸಂಸ್ಥೆಗಳಲ್ಲಿ ಕ್ರಮ ಕೈಗೊಳ್ಳುವುದು ವಿಳಂಬವಾಗಿದೆ. ರೈತರ ಹಾಗೂ ಠೇವಣಿದಾರರ ಅನ್ಯಾಯ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಸಹಕಾರಿ ವಲಯದಲ್ಲಿ ಪಾರದರ್ಶಕತೆ ತರಲು ಡಿಜಿಟಲೀಕರಣ ಸಹಕಾರಿಯಾಗಲಿದೆ. ಹೀಗಾಗಿ ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ ಕ್ರಮ ಸ್ವಾಗತಾರ್ಹವಾಗಿದೆ ಎಂದರು.

ಸರಳ ಸಪ್ತಾಹ : ನವೆಂಬರ್ 14ರಿಂದ 20ರವರೆಗೆ 70ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಆಚರಿಸಲಾಗುವುದು. ತೀವ್ರ ಬರದ ಹಿನ್ನೆಲೆಯಲ್ಲಿ ಅದ್ಧೂರಿಯಾಗಿ ಆಚರಿಸದೆ, ಸರಳವಾಗಿ ಸಾಂಕೇತಿಕವಾಗಿ ಆಚರಿಸಲಾಗುವುದು. ಸಪ್ತಾಹ ಆಚರಣೆ ಬಗ್ಗೆ ಸಹಕಾರಿ ಮುಖಂಡರು ಸಲಹೆ ಕೊಟ್ಟಿದ್ದಾರೆ. ಪೂರ್ವ ಸಿದ್ಧತೆ ಕುರಿತಂತೆ ಸಭೆ ನಡೆಸಿ ಸಲಹೆ ಪಡೆಯಲಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಗುರುತಿಸಿ ಸಹಕಾರ ರತ್ನ ಪ್ರಶಸ್ತಿಗೆ ಆಯ್ಕೆ ಮಾಡುವ ಪ್ರಕ್ರಿಯೆ ಆರಂಭವಾಗಿದೆ ಎಂದರು. ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಹಾಗೂ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಪ್ರತಿದಿನವೂ ಒಂದೊಂದು ಶೀರ್ಷಿಕೆಯಡಿ ಸಪ್ತಾಹ ಹಮ್ಮಿಕೊಳ್ಳಲಾಗುವುದು. ಸಪ್ತಾಹದ ಉದ್ಘಾಟನೆ ಹಾಗೂ ಸಮಾರೋಪದ ಸ್ಥಳ ಇನ್ನೂ ನಿಗದಿಯಾಗಿಲ್ಲ. ಅರ್ಥಪೂರ್ಣವಾಗಿ ಸಪ್ತಾಹ ಆಚರಿಸಲು ಎಲ್ಲಾ ಸಹಕಾರಿಗಳು ಭಾಗವಹಿಸಿ, ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಅಭಿಮನ್ಯುಗೆ ಮರದ ಅಂಬಾರಿ ಹೊರಿಸಿ ಮಳೆಯಲ್ಲೇ ತಾಲೀಮು

ಆಹ್ಲಾದಕರ ವಾತಾವರಣದಲ್ಲಿ ಸರಾಗವಾಗಿ ಸಾಗಿದ ಸಾರಥಿ

ಮೈಸೂರು, ಅ.9(ಎಸ್‌ಬಿಡಿ)– ದಸರಾ ಗಜ ಪಡೆಯ ಸಾರಥಿ ಅಭಿಮನ್ಯುಗೆ ಮರದ ಅಂಬಾರಿ ಹೊರಿಸಿ ತಾಲೀಮು ಆರಂಭಿಸಲಾಯಿತು.

ಧಾರಾಕಾರ ಮಳೆ ನಡುವೆಯೂ ಸೋಮವಾರ ಸಂಜೆ ರಾಜವಂಶಸ್ಥರ ನಿವಾಸದ ಬಳಿಯ ಕ್ರೇನ್ ಹಾಗೂ ಮರದ ಅಂಬಾರಿಗೆ ಪೂಜೆ ಸಲ್ಲಿಸಲಾಯಿತು. ನಂತರ ಮರದ ಅಂಬಾರಿಯನ್ನು ಕ್ರೇನ್ ಮೂಲಕ ಮೇಲೆತ್ತಿ ಅಭಿಮನ್ಯುಗೆ ಕಟ್ಟಲಾಯಿತು. ಇದೇ ವೇಳೆ ಅಂಬಾರಿ ಆನೆ ಹಾಗೂ ಕುಮ್ಕಿ ಆನೆಗಳಿಗೆ ಪೂಜೆ ಸಲ್ಲಿಸಲಾಯಿತು.

ಬಳಿಕ ಸಂಜೆ 5.45ಕ್ಕೆ ಮರದ ಅಂಬಾರಿ ಹೊತ್ತು ಅಭಿಮನ್ಯು ಹೆಜ್ಜೆ ಹಾಕಿದ. ಮಳೆಯ ಆರ್ಭಟಕ್ಕೆ ಕಿಂಚಿತ್ತೂ ವಿಚಲಿತವಾಗದೆ ಜಂಬೂಸವಾರಿ ಮಾರ್ಗದಲ್ಲಿ ಗಾಂಭೀರ್ಯದಿಂದ ಹೆಜ್ಜೆ ಹಾಕಿ, ಸಂಜೆ 6.15ಕ್ಕೆ ಬನ್ನಿಮಂಟಪ ತಲುಪಿದ. ಎಲ್ಲಾ ಆನೆಗಳೂ ನಿರಾಯಾಸವಾಗಿ ಹಿಂಬಾಲಿಸಿದವು. ಒಟ್ಟಾರೆ ಮೊದಲ ದಿನದ ಅಂಬಾರಿ ಹೊರುವ ತಾಲೀಮು ಯಶಸ್ವಿಯಾಗಿ ನೆರವೇರಿತು.



ಆರಂಭದಲ್ಲಿ ಸಿಎಫ್ ಮಾಲತಿ ಪ್ರಿಯಾ, ಮೈಸೂರು ಡಿಸಿಎಫ್ ಸೌರಭ್ ಕುಮಾರ್, ಹುಣಸೂರು ಡಿಸಿಎಫ್ ಸೀಮಾ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಮುಜೀಬ್ ಮತ್ತಿತರರು ಪೂಜೆ ಸಲ್ಲಿಸಿದರು. ಇದೇ ವೇಳೆ ಮೆರವಣಿಗೆಗೆ ಚಾಲನೆ ದೊರೆತಾಗ ಗನ್ನರಿಗೆ ಸೆಲ್ಯೂಟ್ ಮಾಡುವ ತಾಲೀಮು ಕೂಡ ನಡೆಸಲಾಯಿತು. ಮಳೆಯಲ್ಲಿ ಗಾದಿ ಹಾಗೂ ನಮ್ದಾ ನೆನೆಯದಂತೆ ಪ್ಲಾಸ್ಟಿಕ್ ಹೊದಿಕೆ ಹಾಕಲಾಗಿತ್ತು. ಇಷ್ಟು ದಿನ ಅಭಿಮನ್ಯುಗೆ 600 ಕೆ.ಜಿ ತೂಕದ ಮರಳು ಮೂಟೆ ಹೊತ್ತು ತಾಲೀಮು ನಡೆಸಿದ್ದ ಅಭಿಮನ್ಯುಗೆ ಇಂದಿನಿಂದ 6 ದಿನ 280 ಕೆ.ಜಿ. ಮರದ ಅಂಬಾರಿ ಹಾಗೂ ಸುಮಾರು 500 ಕೆಜಿ ಮರಳು ಮೂಟೆ ಹೊರಿಸಲಾಗುತ್ತದೆ.

ಜಂಬೂಸವಾರಿಗೆ ಇನ್ನು 15 ದಿನಗಳು ಮಾತ್ರ ಬಾಕಿ ಇರುವುದರಿಂದ ಮಳೆಯಲ್ಲೇ ಮರದ ಅಂಬಾರಿ ಹೊರಿಸಿ ತಾಲೀಮು ಆರಂಭಿಸಲಾಗಿದೆ. ಒಂದು ವೇಳೆ ಜಂಬೂಸವಾರಿ ದಿನ ಹೀಗೆ ಜೋರು ಮಳೆಯಾದರೆ ಆನೆಗಳು ಹೇಗೆ ವರ್ತಿಸಬಹುದು ಎಂಬುದನ್ನು ಗಮನಿಸುವ ಉದ್ದೇಶದಿಂದ ನಿಗದಿಯಂತೆ ಮರದ ಅಂಬಾರಿ ತಾಲೀಮು ನಡೆಸಲಾಯಿತು. ಆದರೆ ಭಾರಿ ಮಳೆಯಲ್ಲೂ ಮರದ ಅಂಬಾರಿ ಹೊತ್ತಿದ್ದ ಅಭಿಮನ್ಯು ಹಾಗೂ ಇತರೆ ಆನೆಗಳು ನಿರಾಯಾಸವಾಗಿ ತಾಲೀಮು ಪೂರೈಸಿದವು. ರಸ್ತೆ ಇಕ್ಕೆಲಗಳ ಅಂಗಡಿ ಮುಂಗಟ್ಟಿನಲ್ಲಿ ನಿಂತಿದ್ದವರು ಹಾಗೂ ವಾಹನ ಸವಾರರು ಮರದ ಅಂಬಾರಿ ತಾಲೀಮನ್ನು ಕಣ್ತುಂಬಿಕೊಂಡರು.

ಮೈಸೂರು ದಸರಾದಲ್ಲಿ ಹೆಲಿರೈಡ್, ಲೇಸರ್ ಶೋ, ವಿಂಟೇಜ್ ಕಾರ್ ರ‍್ಯಾಲಿ ಆಯೋಜನೆ

● ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಸವಿತಾ ಮಾಹಿತಿ ● 300 ಪ್ರವಾಸಿಮಿತ್ರರ ನಿಯೋಜನೆ ● ಏರ್‌ಪೋರ್ಟ್‌ಗಳಲ್ಲಿ ಪ್ರಚಾರ ● ಯುವ ಪೀಳಿಗೆ ಆಕರ್ಷಣೆಗೆ ಸ್ಟ್ರೀಟ್ ಫೆಸ್ಟ್



ಮೈಸೂರು, ಅ.9(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಹೆಲಿರೈಡ್ ಸೇರಿದಂತೆ ಹಲವು ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ತಿಳಿಸಿದರು.

ಲಲಿತಮಹಲ್ ಪ್ಯಾಲೇಸ್ ಬಳಿ ಗಾಳಿಪಟ ಸ್ಪರ್ಧೆ, ಮೈಸೂರು ಅರಮನೆಯಲ್ಲಿ ಲೇಸರ್ ಶೋ, ವಿಂಟೇಜ್ ಕಾರ್ ರ‍್ಯಾಲಿ, ಚಾಮುಂಡಿಬೆಟ್ಟ ಚಾರಣ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಮೈಸೂರು ದಸರಾ ಮಹೋತ್ಸವದ ಬಗ್ಗೆ ಮಾಹಿತಿ ನೀಡಲು ಈಗಾಗಲೇ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಎಲ್‌ಇಡಿ ಸ್ಕ್ರೀನ್ ಮೂಲಕ ಮಾಹಿತಿ ನೀಡಲಾಗುತ್ತಿದೆ. ಜೊತೆಗೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ವೆಬ್‌ಸೈಟ್ ಮೂಲಕ ಕೂಡ ಮಾಹಿತಿ ನೀಡಲಾಗಿದೆ ಎಂದು ಸವಿತಾ ಹೇಳಿದರು.

ದಸರಾ ವೇಳೆ ಪ್ರವಾಸಿಗರಿಗೆ ಮಾಹಿತಿ ನೀಡಿ ಮಾರ್ಗದರ್ಶನ ನೀಡಲು 300 ಪ್ರವಾಸಿಮಿತ್ರರನ್ನು ನಿಯೋಜಿಸಲಾಗುತ್ತಿದೆ. ಈ ಮೂಲಕ ಪ್ರವಾಸಿಗರಿಗೆ ಯಾವುದೇ ತೊಂದರೆ ಆಗದಂತೆ ಸಮರ್ಪಕ ಮಾಹಿತಿ ನೀಡುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ಬ್ರ್ಯಾಂಡಿಂಗ್ ಮೈಸೂರು ಲೋಗೋ ಹಾಗೂ ಘೋಷವಾಕ್ಯ ಅಥವಾ ಟೈಟಲ್ ನೀಡಲು ಸ್ಪರ್ಧೆ ಆಯೋಜಿಸಲಾಗಿತ್ತು. ಟೈಟಲ್ ಹಾಗೂ ಲೋಗೋ ರೂಪಿಸಿ ನೀಡಲು 28 ದಿನ ಕಾಲಾವಕಾಶ ನೀಡಲಾಗಿತ್ತು. ಇದರಲ್ಲಿ 45 ಮಂದಿ ಲೋಗೋ ಹಾಗೂ ಟೈಟಲ್ ನೀಡಿದ್ದರು. ಅಂತಿಮವಾಗಿ ಉತ್ತಮವಾಗಿರುವ ಲೋಗೋ ಮತ್ತು ಟೈಟಲ್ ಅನ್ನು ಆಯ್ಕೆ ಮಾಡಿ ಎಲ್ಲಾ ಕಡೆ ಬಳಸಲಾಗುವುದು ಎಂದು ಸವಿತಾ ವಿವರಿಸಿದರು.

ಮೈಸೂರಿನ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ ಅಕ್ಟೋಬರ್ 22 ರಂದು ಸ್ಟ್ರೀಟ್ ಫೆಸ್ಟ್ ಆಯೋಜಿಸಲಾಗುವುದು. ಆದರೆ ಈ ಬಗ್ಗೆ ಇನ್ನೆರಡು ದಿನದಲ್ಲಿ ಅಂತಿಮ ತೀರ್ಮಾನ ಮಾಡಲಾಗುವುದು. ಮಧ್ಯಾಹ್ನ 3 ರಿಂದ 10.30 ಗಂಟೆ ತನಕ ನಡೆಯುವ ಸ್ಟ್ರೀಟ್ ಫೆಸ್ಟ್‌ನಲ್ಲಿ ಜಾನಪದ ಕಲಾತಂಡಗಳ ಪ್ರದರ್ಶನ ಸೇರಿದಂತೆ ಹಲವು ರೀತಿಯ ಮನೋರಂಜನೆ ಕಾರ್ಯಕ್ರಮ ಏರ್ಪಡಿಸಲಾಗುವುದು. ಪ್ರಮುಖವಾಗಿ ಯುವಕ ಯುವತಿಯರನ್ನು ಆಕರ್ಷಿಸಲು ಈ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಸವಿತಾ ವಿವರಿಸಿದರು.



ಮೈಸೂರಿನ ಬಸವ ಜಯಂತಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಸಮಿತಿಯ ಎಲ್ಲಾ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಲ್ಲಾ ಪದಾಧಿಕಾರಿಗಳನ್ನು ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಹಡಜನ ಟಿ.ಲಿಂಗರಾಜು ನೇತೃತ್ವದಲ್ಲಿ ಕಾರ್ಯಕ್ರಮ ಸಮಿತಿ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಡಿ.ಪಿ.ಸುರೇಶ್, ವೇದಿಕೆ ಅಧ್ಯಕ್ಷ ಕೇರ್ಗಳ್ಳಿ ಬಸವರಾಜು, ಮಾಧ್ಯಮ ಕಾರ್ಯದರ್ಶಿ ದಾರಿಪುರ ಡಿ.ಚಂದ್ರಶೇಖರ್, ಕೋಶಾಧ್ಯಕ್ಷ ಎನ್.ಜಿ.ಗಿರೀಶ್, ಗುರುಸ್ವಾಮಿ, ವೃಷಬೇಂದ್ರ, ಪರಶಿವಮೂರ್ತಿ, ಸಿ.ಜಿ.ಮುತ್ತಣ್ಣ, ಅಂಬಳೆ ಶಿವಣ್ಣ, ಗೆಜ್ಜಗಳ್ಳಿ ಶಂಕರ್, ಡಿ.ಎ.ಮಹದೇವಸ್ವಾಮಿ, ಕಾವಿ ಬಸಪ್ಪ, ಪೆಂಡಾಲ್ ಮಹೇಶ್, ಸಿ.ಜಿ ಶಿವಶಂಕರ್, ಸರ್ವಮಂಗಳ, ಶಿವಮಣಿ, ಇಂದಿರಾ ಮಹೇಶ್ ಅವರನ್ನು ನಿಕಟಪೂರ್ವ ಅಧ್ಯಕ್ಷ ಎಲ್.ಎಸ್.ಮಹದೇವಸ್ವಾಮಿ, ಸಿ.ಗುರುಸ್ವಾಮಿ, ಮಾದಹಳ್ಳಿ ನಂಜುಂಡಸ್ವಾಮಿ, ಕಾಮಗೆರೆ ನಾಗೇಂದ್ರ, ಶಿವು ಅವರು ಸನ್ಮಾನಿಸಿದರು.

ಸಾರ್ವಜನಿಕರಿಗೆ ಸುರಕ್ಷಿತ ಔಷಧಿ ಖಾತರಿ

ರಾಜ್ಯ ಹೆಚ್ಚುವರಿ ಔಷಧ ನಿಯಂತ್ರಕ ಡಾ.ಅಮರೇಶ್ ತುಂಬಗಿ ಭರವಸೆ



ಮೈಸೂರು, ಅ.9(ಎಸ್‌ಬಿಡಿ)– ಸಾರ್ವಜನಿಕರಿಗೆ ಸುರಕ್ಷಿತ ಔಷಧಿ ಕಲ್ಪಿಸುವುದು ಬಹಳ ಮುಖ್ಯ ಎಂದು ರಾಜ್ಯ ಹೆಚ್ಚುವರಿ ಔಷಧ ನಿಯಂತ್ರಕ ಡಾ.ಅಮರೇಶ್ ತುಂಬಗಿ ಹೇಳಿದರು.

ಔಷಧ ನಿಯಂತ್ರಣ ಇಲಾಖೆಯಿಂದ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಿಶ್ವ ಔಷಧ ತಜ್ಞರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ಸುರಕ್ಷಿತ ಔಷಧಗಳನ್ನು ಬಯಸುತ್ತಾರೆ. ಈ ನಿಟ್ಟಿನಲ್ಲಿ ಸರ್ಕಾರವೂ ಬೆಂಬಲ ನೀಡುತ್ತಿದೆ. ಹಾಗೆಯೇ ಎಲ್ಲಾ ವೈದ್ಯರೂ ರೋಗಿಗಳ ಹಿತದೃಷ್ಟಿಯಿಂದ ಬಹಳ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು. ಸುರಕ್ಷಿತ ಔಷಧಿಗೆ ಸಲಹೆ ನೀಡಬೇಕು ಎಂದರು.

ಸಾರ್ವಜನಿಕರು ವೈದ್ಯರನ್ನು ದೇವರಂತೆ ಕಾಣುತ್ತಾರೆ. ಗುಣಪಡಿಸುತ್ತಾರೆ ಎಂಬ ನಂಬಿಕೆಯಿಂದ ಆಸ್ಪತ್ರೆಗೆ ಬರುತ್ತಾರೆ. ಈ ಸಂದರ್ಭದಲ್ಲಿ ರೋಗಿಗಳನ್ನು ವಿಚಾರಿಸಿ, ಆತ್ಮಸ್ಥೈರ್ಯ ತುಂಬಬೇಕು. ಸೂಕ್ತ ಚಿಕಿತ್ಸೆ ನೀಡಬೇಕು. ಕೋವಿಡ್ ನಂತರ ಆರೋಗ್ಯ ಕ್ಷೇತ್ರದಲ್ಲಿ ಭಾರತದ ಸಾಧನೆ ಜಗತ್ತಿನ ಗಮನ ಸೆಳೆದಿದ್ದು, ವೈದ್ಯರು ಲಭ್ಯವಿರುವ ಸೇವೆ, ಸೌಕರ್ಯಗಳನ್ನು ಉಪಯೋಗಿಸಿಕೊಂಡು ಜನರ ಜೀವ ಉಳಿಸಬೇಕು ಎಂದು ತಿಳಿಸಿದರು.

ಅಬಕಾರಿ ಉಪ ಅಧೀಕ್ಷಕ ಎನ್.ಟಿ. ಆನಂದ್‌ಕುಮಾರ್ ಮಾತನಾಡಿ, ಅಬಕಾರಿ ಹಾಗೂ ವೈದ್ಯಕೀಯ ಕ್ಷೇತ್ರ ಬೇರೆ ಬೇರೆಯಾದರೂ ಔಷಧಗಳ ರಫ್ತು ಸಂದರ್ಭದಲ್ಲಿ ಪರವಾನಗಿ ಕೊಡುವಲ್ಲಿ, ಸಮಸ್ಯೆಗೆ ಕ್ರಮ ಕೈಗೊಳ್ಳುವಲ್ಲಿ ಮತ್ತು ಸುರಕ್ಷತೆಯ ವಿಚಾರದಲ್ಲಿ ಉಭಯ ಇಲಾಖೆಗಳು ಪಾಲುದಾರಿಕೆ ಹೊಂದಿವೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ನಿರ್ದೇಶಕ ಆರ್.ಮಹೇಶ್ ಮಾತನಾಡಿ, ಅಗತ್ಯ ಪ್ರಮಾಣದಷ್ಟು ಔಷಧಿ ನೀಡಿದರಷ್ಟೇ ರೋಗಿಗಳು ಶೀಘ್ರ ಗುಣಮುಖವಾಗಲು ಸಾಧ್ಯ. ಹಾಗಾಗಿ ಔಷಧಿ ಪ್ರಮಾಣದ ಬಗ್ಗೆಯೂ ವೈದ್ಯರು ನಿಗಾ ವಹಿಸಬೇಕು. ಆರೋಗ್ಯಯುತ ಸಮಾಜಕ್ಕಾಗಿ ಎಲ್ಲರೂ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕಿದೆ ಎಂದು ಹೇಳಿದರು.

ಇದೇ ವೇಳೆ ಜೆಎಸ್‌ಎಸ್ ಔಷಧ ಕೇಂದ್ರದ ಕೆಲ ಸಿಬ್ಬಂದಿ ಹಾಗೂ ಔಷಧ ತಜ್ಞರನ್ನು ಸನ್ಮಾನಿಸಲಾಯಿತು. ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ. ಮಧು, ಆಸ್ಪತ್ರೆಯ ಔಷಧ ಕೇಂದ್ರ ಪ್ರಭಾರಾಧಿಕಾರಿ ಡಾ.ಕೆ.ಮೃತ್ಯುಂಜಯ ಮತ್ತಿತರರು ಭಾಗವಹಿಸಿದ್ದರು.

ತಮಿಳುನಾಡಿನ ಪಟಾಕಿ ಕಾರ್ಖಾನೆಯಲ್ಲಿ ಅಗ್ನಿ ಅವಘಡ; 9 ಮಂದಿ ಸಾವು

ಚೆನ್ನೈ: ಪಟಾಕಿ ಕಾರ್ಖಾನೆಯೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ 9 ಮಂದಿ ಮೃತಪಟ್ಟು, ಐವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಮಿಳು ನಾಡಿನ ಅರಿಯಲೂರು ಜಿಲ್ಲೆಯ ವೆಟ್ರಿ ಯೂರು ಬಳಿ ಇರುವ ವೀರಗಾಲೂರು ಬಳಿ ಸಂಭವಿಸಿದೆ.

ಬೆಂಕಿ ಹೊತ್ತಿಕೊಳ್ಳಲು ನಿಖರ ಕಾರಣ ಏನೆಂಬುದನ್ನು ಪೊಲೀಸ್ ಅಧಿಕಾರಿಗಳು ಪತ್ತೆ ಹಚ್ಚುತ್ತಿದ್ದಾರೆ. ಘಟನೆ ಬೆಳಗ್ಗೆ 10 ಗಂಟೆ ಸುಮಾರಿಗೆ ಸಂಭವಿಸಿದ್ದು, ಅಗ್ನಿ




ಶಾಮಕದಳದವರು ಬೆಂಕಿ ನಂದಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಸಂತಾಪ ಸೂಚಿಸಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಮೃತಪಟ್ಟವರಿಗೆ ತಲಾ 5 ಲಕ್ಷ ರೂ., ಗಂಭೀರವಾಗಿ ಗಾಯಗೊಂಡಿರುವವರಿಗೆ ತಲಾ 1 ಲಕ್ಷ ರೂ., ಸಣ್ಣಪುಟ್ಟ ಗಾಯಗಳಾಗಿರುವವರಿಗೆ 50 ಸಾವಿರ ರೂ. ಪರಿಹಾರವನ್ನು ಘೋಷಿಸಿದ್ದಾರೆ.

ಅಗ್ನಿ ಅವಘಡದಲ್ಲಿ ಗಾಯಗೊಂಡಿರುವವರನ್ನು ತಂಜಾವೂರಿನ ವೈದ್ಯಕೀಯ ಕಾಲೇಜಿಗೆ ದಾಖಲಿಸಲಾಗಿದ್ದು, ವಿಶೇಷ ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ. ಘಟನಾ ಸ್ಥಳಕ್ಕೆ ಸಚಿವರಾದ ಶಿವಶಂಕರ್ ಹಾಗೂ ಗಣೇಶನ್‌ರನ್ನು ನಿಯೋಜಿಸಿದ್ದು, ರಕ್ಷಣಾ ಕಾರ್ಯ ಹಾಗೂ ಪರಿಹಾರ ಚಟುವಟಿಕೆಗಳನ್ನು ತ್ವರಿತಗೊಳಿಸಲು ಸೂಚಿಸಲಾಗಿದೆ ಎಂದು ಸಿಎಂ ಎಂ.ಕೆ.ಸ್ಟಾಲಿನ್ ತಿಳಿಸಿದ್ದಾರೆ.

ಜೀವ ಬೆದರಿಕೆ: ಶಾರೂಕ್ ಖಾನ್‌ಗೆ Y+ ಭದ್ರತೆ

ಮುಂಬೈ: 'ಪಠಾಣ್' ಮತ್ತು 'ಜವಾನ್' ಚಿತ್ರದ ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವ ಬಾಲಿವುಡ್ ನಟ ಶಾರುಖ್ ಖಾನ್ ಅವರಿಗೆ ಕೊಲೆ ಬೆದರಿಕೆಗಳು ಬರುತ್ತಿವೆ ಎಂದು ನಟ ದೂರು ನೀಡಿದ ಹಿನ್ನೆಲೆಯಲ್ಲಿ ಮುಂಬೈ ಪೊಲೀಸರು ಅವರಿಗೆ Y+ ಭದ್ರತೆಯನ್ನು ಒದಗಿಸಿದ್ದಾರೆ.



Y+ ಭದ್ರತೆ ಅಡಿಯಲ್ಲಿ, ಶಾರೂಕ್ ಖಾನ್ ಅವರಿಗೆ ದಿನಪೂರ್ತಿ 24 ಗಂಟೆಗಳ ಕಾಲ ಆರು ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿ ಇರುತ್ತಾರೆ. ಇದಕ್ಕೂ ಮುನ್ನ ಶಾರೂಕ್ ಖಾನ್ ಇಬ್ಬರು ಭದ್ರತಾ ಸಿಬ್ಬಂದಿಯ ರಕ್ಷಣೆಯಲ್ಲಿದ್ದರು.

ಶಾರೂಕ್ ಖಾನ್ ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರಕ್ಕೆ ಪತ್ರ ಬರೆದು ತಮ್ಮ ಚಿತ್ರ ಯಶಸ್ವಿಯಾದ ನಂತರ ತನಗೆ ಕೊಲೆ ಬೆದರಿಕೆಗಳು ಬರುತ್ತಿವೆ ಎಂದು ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಸರ್ಕಾರ ಶಾರೂಕ್ ಖಾನ್ ಅವರಿಗೆ ಭದ್ರತೆ ಹೆಚ್ಚಿಸಿದೆ.

ಈ ಹಿಂದೆ, ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನಿಂದ ಬೆದರಿಕೆಯ ನಂತರ ಕಳೆದ ವರ್ಷ ನಟ ಸಲ್ಮಾನ್ ಖಾನ್‌ಗೆ Y+ ಭದ್ರತೆಯನ್ನು ಒದಗಿಸಲಾಗಿತ್ತು.

ರಣಾಂಗಣವಾಗಿರುವ ಇಸ್ರೇಲ್‌ನಲ್ಲಿ ಮೈಸೂರು ಕುಟುಂಬಕ್ಕೆ ಅಭಯ ಆಶ್ರಯ!

ಮೈಸೂರು, ಅ.9(ಎಸ್‌ಬಿಡಿ)– ಹಮಾಸ್ ಬಂಡುಕೋರರ ದಾಳಿಯಿಂದ ಇಸ್ರೇಲ್‌ನ ದಕ್ಷಿಣ ಭಾಗ ರಣಾಂಗಣವಾಗಿದ್ದು, ಇಲ್ಲಿನ ರೆಹೋವೋತ್ ನಗರದಲ್ಲಿರುವ ಮೈಸೂರಿನ ಕುಟುಂಬ ಸುರಕ್ಷಿತವಾಗಿದೆ.

ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು ದೇವನೂರು ಗ್ರಾಮದ ಶಾಂತಮೂರ್ತಿ ಹಾಗೂ ಗೌರಮ್ಮ ಅವರ ಪುತ್ರ ಚೇತನ್, ಮೈಸೂರಿನ ಊಟಿ ರಸ್ತೆ ಜೆಎಸ್‌ಎಸ್ ಕಾಲೇಜಿನಲ್ಲಿ ಎಂ.ಎಸ್ಸಿ ಬಳಿಕ ಪುಣೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಅಂಡ್ ರೀಸರ್ಚ್‌ನಲ್ಲಿ ಪಿಹೆಚ್.ಡಿ ಪೂರೈಸಿದ ಬಳಿಕ ಉನ್ನತ ಅಧ್ಯಯನಕ್ಕೆ 2 ವರ್ಷದ ಹಿಂದೆ ಇಸ್ರೇಲ್‌ಗೆ ತೆರಳಿದ್ದಾರೆ. ಅಲ್ಲಿನ ವೈಜ್‌ಮನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ರಸಾಯನಶಾಸ್ತ್ರ ವಿಭಾಗದಲ್ಲಿ ಸಂಶೋಧನೆ ನಡೆಸುತ್ತಿರುವ ಚೇತನ್, ಕಳೆದ ಮಾರ್ಚ್‌ನಲ್ಲಿ ಪತ್ನಿ ಶಿಲ್ಪಾಶ್ರೀ ಹಾಗೂ ಒಂದೂವರೆ ವರ್ಷದ ಮಗುವನ್ನು ತಮ್ಮೊಂದಿಗೆ ಕರೆದೊಯ್ದಿದ್ದಾರೆ. ಅಲ್ಲಿನ ಸದ್ಯದ ಪರಿಸ್ಥಿತಿ ಬಗ್ಗೆ ಚೇತನ್ 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.

ನಾವಿರುವ ರೆಹೋವೋತ್ ನಗರ, ಹಮಾಸ್ ಬಂಡುಕೋರರು ಮುತ್ತಿಗೆ ಹಾಕಿರುವ ಗಾಜಾ ಪಟ್ಟಿಯಿಂದ ಸುಮಾರು 55 ಕಿ.ಮೀ. ದೂರದಲ್ಲಿದೆ. ಸದ್ಯ ಹಮಾಸ್ ಇಲ್ಲಿಯವರೆಗೆ ಬರಲು ಸಾಧ್ಯವಾಗಿಲ್ಲ. ಆದರೆ ಮೊನ್ನೆ ನಮ್ಮ ಮನೆಯಿಂದ 250 ಮೀಟರ್ ದೂರದಲ್ಲಿ ಮಿಸೈಲ್ ಬಿದ್ದು,



2–3 ಕಾರುಗಳು ಧ್ವಂಸವಾಗಿದ್ದು, ಅದೃಷ್ಟವಶಾತ್ ಸಾವು–ನೋವು ಸಂಭವಿಸಿಲ್ಲ. ಹಮಾಸ್ ಹಾಗೂ ಇಸ್ರೇಲ್ ಸೈನಿಕರ ನಡುವೆ ಕದನ ಮುಂದುವರೆದಿದೆ. ಗಾಜಾದಲ್ಲಿ ಮಿಸೈಲ್ ಉಡಾವಣೆ ಮಾಡಿದಾಗ ನಮಗೂ ಬೆಳಕು ಗೋಚರಿಸುತ್ತದೆ. ಆದರೆ ಆತಂಕಪಡಬೇಡಿ ಎಂದು ಸ್ಥಳೀಯರು ಧೈರ್ಯ ತುಂಬುತ್ತಿದ್ದಾರೆ. ನಮ್ಮ ಇನ್‌ಸ್ಟಿಟ್ಯೂಟ್ ವತಿಯಿಂದಲೂ ಜೂಮ್ ಮೀಟಿಂಗ್ ಮೂಲಕ ಅಗತ್ಯ ಮಾಹಿತಿ ನೀಡುತ್ತಿದ್ದಾರೆ. ಒಂದು ವೇಳೆ ಮಿಸೈಲ್ ದಾಳಿಯಾದರೆ ಏನೆಲ್ಲಾ ಕ್ರಮ ವಹಿಸಬೇಕು ಎಂದು ಮಾರ್ಗದರ್ಶನ ಮಾಡುತ್ತಿದ್ದಾರೆ. ವಿದೇಶಿ ವಿದ್ಯಾರ್ಥಿಗಳ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಸದ್ಯ ರೆಹೋವೋತ್ ನಗರದ ಜನಜೀವನ ಯಥಾಸ್ಥಿತಿಯಲ್ಲಿದೆ. ಅಗತ್ಯ ವಸ್ತುಗಳಿಗೆ ಯಾವುದೇ ತೊಂದರೆಯಾಗಿಲ್ಲ. ಪೋಸ್ಟ್‌ಪೇಯ್ಡ್ ಸಿಮ್‌ಗೆ ಒಂದು ತಿಂಗಳ ಉಚಿತ ಸೇವೆ ಕಲ್ಪಿಸಿದ್ದಾರೆ. ಮಿಸೈಲ್‌ಗಳು ಸಮೀಪಿಸುವ 90 ಸೆಕೆಂಡ್ ಮುಂಚಿತವಾಗಿ ಸೈರನ್ ಬರುತ್ತದೆ. ಆಗ ತಕ್ಷಣ ಸುರಕ್ಷಿತ ಕೊಠಡಿಗೆ ತೆರಳುವಂತೆ ತಿಳಿಸಲಾಗಿದೆ. ಗೋಡೆಗೆ ಸ್ಟೀಲ್ ಮೆಟಲ್ ಬಳಸಿ ಮಿಸೈಲ್ ದಾಳಿಯಾದರೂ ಸುರಕ್ಷಿತವಾಗಿರುವಂತೆ ನಿರ್ಮಿಸಲಾಗಿದೆ. ಸದ್ಯ ಭಾರತಕ್ಕೆ ಕರೆಸಿಕೊಳ್ಳುವ ಸಂಬಂಧ ಈವರೆಗೆ ಯಾವುದೇ ಸೂಚನೆ ಬಂದಿಲ್ಲ. ಆತಂಕಕ್ಕೆ ಒಳಗಾಗದಂತೆ ನಿರಂತರವಾಗಿ ತಿಳಿಸಲಾಗುತ್ತಿದೆ ಎಂದರು.

ಹಮಾಸ್ ದಾಳಿಯಾಗಿರುವ ಪ್ರದೇಶದಲ್ಲಿ ನಿರಾಶ್ರಿತರಾದವರು ಹಾಗೂ ಹೋರಾಟ ನಡೆಸುತ್ತಿರುವ ಸೈನಿಕರಿಗೆ ರೆಹೋವೋತ್ ನಗರದಿಂದ ಆಹಾರ ಪೂರೈಸಲಾಗುತ್ತಿದೆ. ನಾವೂ ಸೇರಿದಂತೆ ಎಲ್ಲರೂ ಶಕ್ತಿಯನುಸಾರ ಸಹಾಯ ಮಾಡುತ್ತಿದ್ದೇವೆ. ಆಹಾರ ಇನ್ನಿತರ ಅತ್ಯಗತ್ಯ ವಸ್ತುಗಳನ್ನು ನೀಡಲು ಬೇಸ್‌ಗೆ ಬರುವಂತೆ ಸೈನಿಕರು ಸೂಚಿಸುತ್ತಾರೆ. ಹಾಗೆಯೇ ತುಂಬಾ ಜನ ವಂತಿಕೆ ನೀಡುತ್ತಿದ್ದಾರೆ. ಸದ್ಯ ನಾವು ಸುರಕ್ಷಿತವಾಗಿದ್ದು, ಆಗಾಗ್ಗೆ ಕುಟುಂಬದವರಿಗೆ ಕರೆ ಮಾಡಿ, ಮಾತನಾಡುತ್ತಿರುತ್ತೇವೆ ಎಂದು ತಿಳಿಸಿದರು.

ಬೇಹುಗಾರಿಕೆ ವೈಫಲ್ಯ

ಇಸ್ರೇಲ್‌ನ ಒಟ್ಟು ಜನಸಂಖ್ಯೆ 1 ಕೋಟಿ ಇರಬಹುದು. ಇದರಲ್ಲಿ ಶೇ.60–70ರಷ್ಟು ಯಹೂದಿಗಳಿದ್ದಾರೆ. ಗಾಜಾದಲ್ಲಿ ಇಸ್ರೇಲ್ ಯಹೂದಿಗಳು ಹಬ್ಬ ಆಚರಿಸುವ ಸಂದರ್ಭದಲ್ಲಿ ಹಮಾಸ್‌ಗಳು ದಾಳಿ ನಡೆಸಿದ್ದಾರೆ. ಮಹಿಳೆಯರ ಮೇಲೆ ಅಮಾನುಷವಾಗಿ ದೌರ್ಜನ್ಯವೆಸಗಿದ್ದಾರೆ. ಪುಟ್ಟ ಮಕ್ಕಳು, ವಯೋವೃದ್ಧರನ್ನು ಅಪಹರಿಸಿದ್ದಾರೆ. ನಮ್ಮ ಸಂಸ್ಥೆಯ ಜರ್ಮನ್ ಯಹೂದಿಯೊಬ್ಬ ನಾಪತ್ತೆಯಾಗಿದ್ದಾರೆ. ತುಂಬಾ ಜನರನ್ನು ಶೂಟ್ ಮಾಡಿ, ಸಾಯಿಸಿದ್ದಾರೆ. ಮನಬಂದಂತೆ ಕ್ರೌರ್ಯವೆಸಗುತ್ತಿದ್ದಾರೆ. ಇದಕ್ಕೆಲ್ಲಾ ಇಲ್ಲಿನ ಬೇಹುಗಾರಿಕೆ ವೈಫಲ್ಯವೇ ಕಾರಣ ಎನ್ನಲಾಗುತ್ತಿದೆ. ಇದರಿಂದಲೇ ಹೆಚ್ಚು ಸಂಖ್ಯೆಯ ಹಮಾಸ್‌ಗಳು ನುಗ್ಗಿದ್ದಾರೆ. ಸದ್ಯ ಗಾಜಾ ಪರಿಸ್ಥಿತಿ ಘನಘೋರವಾಗಿದೆ. ಇಸ್ರೇಲ್ ಸೈನಿಕರು ಹೋರಾಟ ಮುಂದುವರೆಸಿದ್ದಾರೆ. ಬೇರೆ ಭಾಗದ ಜನ ಸೈನಿಕರು ಹಾಗೂ ನಿರಾಶ್ರಿತರಿಗೆ ನೆರವಾಗುತ್ತಿದ್ದಾರೆ ಎಂದು ಚೇತನ್ ಹೇಳಿದರು.

ನೀರು ಹರಿಸುವ ಆದೇಶಕ್ಕೆ ತಡೆ ನೀಡಿ; ಸಂಕಷ್ಟ ಸೂತ್ರ ರೂಪಿಸುವ ಜರೂರು

ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್‌ಗೆ ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಮನವಿ



ಮೈಸೂರು, ಅ.9(ಎಸ್‌ಪಿಎನ್)– ಬರಗಾಲದ ಸಂಕಷ್ಟದಲ್ಲಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಮಂಡಳಿ ನೀಡಿರುವ ಆದೇಶಕ್ಕೆ ತಡೆ ನೀಡಬೇಕು ಎಂದು ಒತ್ತಾಯಿಸಿ, ರೈತ ಮುಖಂಡ ಕುರುಬೂರು ಶಾಂತಕುಮಾರ್ ನೇತೃತ್ವದ ಕರ್ನಾಟಕ ಜಲ ಸಂರಕ್ಷಣಾ ಸಮಿತಿಯ ಸದಸ್ಯರು, ನವದೆಹಲಿಯ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಮಳೆ ಕಡಿಮೆಯಾಗಿದೆ. 195 ತಾಲೂಕುಗಳು ಬರಗಾಲಕ್ಕೆ ತುತ್ತಾಗಿ 250ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ 38 ತಾಲೂಕುಗಳು ಬರಕ್ಕೆ ತುತ್ತಾಗಿ ರೈತರು ಯಾವುದೇ ಬೆಳೆ ಬೆಳೆದಿಲ್ಲ. ಅಲ್ಲದೆ, ಕಾವೇರಿ ವ್ಯಾಪ್ತಿಗೆ ಬರುವ ರಾಜ್ಯ ರಾಜಧಾನಿ ಬೆಂಗಳೂರಲ್ಲಿ 1.30 ಕೋಟಿ ಜನರ ಕುಡಿಯುವ ನೀರಿಗೂ ಸಂಕಷ್ಟ ಬಂದಿದೆ.

ಈ ಹಿಂದೆ ಕಾವೇರಿ ನೀರು ನಿರ್ವಹಣಾ ಮಂಡಳಿ ಪ್ರತಿನಿತ್ಯ 5 ಸಾವಿರ ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸಬೇಕೆಂದು ಆದೇಶಿಸಿತ್ತು. ಈ ಆದೇಶ ಪಾಲನೆ ಮಾಡುವ ಸಲುವಾಗಿ ತಮಿಳುನಾಡಿಗೆ ನೀರು ಬಿಡುವ ಮೂಲಕ ಜಲಾಶಯ ಬರಿದಾಗಿವೆ. ಇದರಿಂದ ಜನರಿಗೆ ಆತಂಕವಾಗಿದೆ. ಅಲ್ಲದೆ, ಬೆಂಗಳೂರು ನಗರದಲ್ಲಿ ಎರಡು ಬಾರಿ ಜನಸಾಮಾನ್ಯರೇ ಶಾಂತಿಯುತ ಬಂದ್ ಆಚರಣೆ ಮಾಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ನಾವು ನಡೆಸಿದ ಹೋರಾಟದ ನಂತರವೂ ಮಂಡಳಿ 3 ಸಾವಿರ ಕ್ಯೂಸೆಕ್ ನೀರು ಬಿಡಬೇಕೆಂಬ ಆದೇಶ ನೀಡಿರುವುದನ್ನು ಒಪ್ಪಿ, ರಾಜ್ಯ ಸರ್ಕಾರ ಮತ್ತೆ ನೀರು ಹರಿಸುತ್ತಿರುವುದನ್ನು, ತಕ್ಷಣ ನಿಲ್ಲಿಸಿ, ಕುಡಿಯುವ ನೀರು ಉಳಿಸಬೇಕು ಹಾಗೂ ಬರಗಾಲ ಸಂದರ್ಭದಲ್ಲಿ ಸಂಕಷ್ಟ ಪರಿಹಾರ ಸೂತ್ರ ರೂಪಿಸಬೇಕಿದೆ ಎಂದು ತಮ್ಮ ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಮಳೆಗೆ ಪೂರಕವಾಗುವ ಪಶ್ಚಿಮ ಘಟ್ಟಗಳ ಅರಣ್ಯ ಪ್ರದೇಶಗಳ ಸಂರಕ್ಷಿಸಲು ಕರ್ನಾಟಕ ಸರ್ಕಾರ ಕೋಟ್ಯಾಂತರ ಹಣ ಖರ್ಚು ಮಾಡುತ್ತಿದೆ. ಹಾಗಾಗಿ ನೀರಿನಲ್ಲಿ ಪಾಲು ಕೇಳುವ ತಮಿಳುನಾಡು ಸರ್ಕಾರ, ಅರಣ್ಯ ಸಂರಕ್ಷಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷ 2 ಸಾವಿರ ಕೋಟಿ ಹಣ ನೀಡುವಂತೆ ಸೂಚಿಸಲು ಒತ್ತಾಯಿಸಿದ್ದಾರೆ.

ಹೆಚ್ಚು ಮಳೆ ಬಂದಾಗ ಹೆಚ್ಚು ನೀರು ತಮಿಳುನಾಡು ಜಲಾಶಯಗಳಿಗೆ ಹರಿಯುತ್ತದೆ. ಹಾಗೆಯೇ ಕಳೆದ ವರ್ಷ ಹೆಚ್ಚು ಮಳೆ ಆದ ಕಾರಣ ಸುಮಾರು 480 ಟಿಎಂಸಿ ನೀರು ತಮಿಳುನಾಡಿಗೆ ಹರಿಸಿದಾಗ ಹೆಚ್ಚುವರಿ ನೀರನ್ನು ತಮಿಳುನಾಡು ಸರ್ಕಾರ ಸಮರ್ಪಕವಾಗಿ ಬಳಸಿಕೊಳ್ಳದೆ ವ್ಯರ್ಥವಾಗಿ, ಬಂಗಾಳಕೊಲ್ಲಿ ಸೇರಿದೆ. ಹೆಚ್ಚು ಮಳೆಯಾದ ಸಂದರ್ಭದಲ್ಲಿ ತಮಿಳುನಾಡಿಗೆ ಬಿಡಬೇಕಾದ ನೀರನ್ನು ಕರ್ನಾಟಕ ಹರಿಸಿದ ನಂತರವೂ ಹೆಚ್ಚುವರಿಯಾಗಿ ಉಳಿಯುವ ನೀರನ್ನು ವಿದ್ಯುತ್ ಉತ್ಪಾದನೆ, ಕುಡಿಯುವ ನೀರಿಗೆ ಬಳಸಿಕೊಳ್ಳಲು ಸಮಾನಂತರ ಜಲಾಶಯವನ್ನು ಕರ್ನಾಟಕದ ಮೇಕೆದಾಟುವಿನಲ್ಲಿ ನಿರ್ಮಿಸಲು ಕೂಡಲೇ ಅನುಮತಿ ನೀಡಬೇಕು. ಮೇಕೆದಾಟು ಅಣೆಕಟ್ಟು ನಿರ್ಮಾಣದಿಂದ ಸಂಕಷ್ಟಕಾಲಕ್ಕೆ 2 ರಾಜ್ಯಗಳಿಗೂ ಅನುಕೂಲವಾಗಲಿದೆ.

ಅಲ್ಲದೆ, ಕಾವೇರಿ ನೀರು ನಿರ್ವಹಣಾ ವ್ಯವಸ್ಥಾಪನಾ ಮಂಡಳಿ ಮುಖ್ಯಸ್ಥ ಎಸ್.ಕೆ. ಹಲದಾರ್ ಕಚೇರಿಯಲ್ಲಿ ಅವರ(ಎಸ್.ಕೆ. ಹಲದಾರ್)ನ್ನು ಭೇಟಿ ಮಾಡಿ, ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯೂಸೆಕ್ ನೀರು ಹರಿಸುವ ಆದೇಶದಿಂದ ಕರ್ನಾಟಕಕ್ಕೆ ಅನ್ಯಾಯ ಆಗಿದೆ. ಕರ್ನಾಟಕದಲ್ಲಿನ ನೀರಿನ ಸಂಕಷ್ಟ ಕುರಿತು ವಿವರಣೆ ನೀಡಿದ್ದಾರೆ. ಈ ವೇಳೆ ಕರ್ನಾಟಕ ಜಲ ಸಂರಕ್ಷಣಾ ಸಮಿತಿ ಸದಸ್ಯರಾದ ಗುರುದೇವ್, ನಾರಾಯಣ್, ಮೋಹನ್ ಇದ್ದರು.

ಒಂದನೇ ಪುಟದಿಂದ

ಸಿಂಹಾಸನ ಜೋಡಣೆ

ಪೂಜಾ ಕೈಂಕರ್ಯಗಳು ಜರುಗಿದವು. ಪೂಜಾ ಕಾರ್ಯ ನಡೆಯುತ್ತಿದ್ದ ಸಂದರ್ಭದಲ್ಲಿಯೇ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಸಮ್ಮುಖದಲ್ಲಿ ಸ್ಟ್ರಾಂಗ್‌ರೂಮ್ ತೆರೆಯಲಾಯಿತು.

ಜೋಡಣೆ ಆರಂಭ: ಪೂರ್ಣಾಹುತಿ ಬಳಿಕ ಅರಮನೆಯ ಸಿಬ್ಬಂದಿ ಶಸ್ತ್ರಸಜ್ಜಿತ ಪೊಲೀಸರ ಬಿಗಿ ಬಂದೋಬಸ್ತ್‌ನಲ್ಲಿ ಸ್ಟ್ರಾಂಗ್‌ರೂಮ್‌ನಲ್ಲಿರುವ ಸಿಂಹಾಸನದ ಬಿಡಿಭಾಗಗಳನ್ನು, ದರ್ಬಾರ್ ಹಾಲ್‌ಗೆ ತಂದು, ಬೆಳಗ್ಗೆ 10.05ರಿಂದ 10.35ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಸಿಂಹಾಸನವನ್ನು ಹಾಗೂ ಕನ್ನಡಿತೊಟ್ಟಿಯಲ್ಲಿ ಭದ್ರಾಸನವನ್ನು ಜೋಡಿಸಲಾಯಿತು. ಸಿಂಹಾಸನವನ್ನು 8 ಬಿಡಿ ಭಾಗಗಳಾಗಿ, ಬೆಳ್ಳಿಯ ಭದ್ರಾಸನವನ್ನು ಆರು ಬಿಡಿಭಾಗಗಳಾಗಿ ಬೇರ್ಪಡಿಸಲಾಗಿತ್ತು.


ಪಟ್ಟದ ಆನೆ, ಹಸು ಆಗಮನ: ಸಿಂಹಾಸನದ ಜೋಡಣೆಯ ಬಳಿಕ ಅರಮನೆಯ ಆನೆ ಬಾಗಿಲಿನ ಮೂಲಕ ಕಲ್ಯಾಣ ಮಂಟಪದ ಬಳಿಗೆ ಪಟ್ಟದ ಆನೆ, ಕುದುರೆ, ಹಸುಗಳನ್ನು ಕರೆತಂದು ಪೂಜಿಸಲಾಯಿತು.

ಬಿಗಿ ಭದ್ರತೆ: ಸಿಂಹಾಸನ ಹಾಗೂ ಭದ್ರಾಸನದ ಜೋಡಣೆಗಾಗಿ ನಿಯೋಜಿಸಲಾಗಿದ್ದ ಸಿಬ್ಬಂದಿಯ ಮೊಬೈಲ್ ಅನ್ನು ಒಂದೆಡೆ ಲಾಕರ್‌ನಲ್ಲಿರಿಸಲಾಗಿತ್ತು. ಅರಮನೆಯ ದರ್ಬಾರ್ ಹಾಲ್, ಕನ್ನಡಿತೊಟ್ಟಿ ಹಾಗೂ ಸ್ಟ್ರಾಂಗ್‌ರೂಮ್ ಸೇರಿದಂತೆ ಇನ್ನಿತರೆಡೆಗಳಲ್ಲಿ ಅರಮನೆಯ ಸಿಬ್ಬಂದಿ ಚಲನವಲನ ಸಂಪೂರ್ಣ ನಿರ್ಬಂಧಿಸಲಾಗಿತ್ತು. ಅಲ್ಲದೆ ಅರಮನೆಯ ಒಳಾಂಗಣದಲ್ಲಿರುವ ಎಲ್ಲಾ ಸಿಸಿ ಕ್ಯಾಮರಾಗಳಿಗೆ ಪರದೆ ಮುಚ್ಚಲಾಗಿತ್ತು. ಬಿಡಿಭಾಗಗಳನ್ನು ಸಾಗಿಸುವ ಸಿಬ್ಬಂದಿಯ ಮೇಲೆ ಹದ್ದಿನಕಣ್ಣಿಡಲಾಗಿತ್ತು. ಅಲ್ಲದೆ ಒಬ್ಬೊಬ್ಬರಿಗೂ ಶಸ್ತ್ರಸಜ್ಜಿತ ಸಿಬ್ಬಂದಿಯನ್ನು ಬೆಂಗಾವಲಿಗೆ ನಿಯೋಜಿಸಲಾಗಿತ್ತು.

ಪ್ರವೇಶ ನಿರ್ಬಂಧ: ಸಿಂಹಾಸನದ ಜೋಡಣೆಯ ಹಿನ್ನೆಲೆಯಲ್ಲಿ ಅರಮನೆಗೆ ಪ್ರವಾಸಿಗರಿಗೆ ಪ್ರವೇಶ ನಿರಾಕರಿಸಲಾಗಿತ್ತು. ಅರಮನೆಯ ಎಲ್ಲಾ ದ್ವಾರಗಳಲ್ಲಿಯೂ ಈ ಬಗ್ಗೆ ಫಲಕ ಹಾಕಲಾಗಿತ್ತು. ಅಲ್ಲದೆ ಪತ್ರಕರ್ತರು ಅರಮನೆಯ ಆವರಣವನ್ನು ಪ್ರವೇಶಿಸದಂತೆಯೂ ನಿರ್ಬಂಧ ಹೇರಲಾಗಿತ್ತು. ಸಿಂಹಾಸನ ಜೋಡಣೆಯ ವೇಳೆ ಪ್ರಮೋದಾದೇವಿ ಒಡೆಯರ್ ಅವರೊಂದಿಗೆ ಅವರ ಕಾರ್ಯದರ್ಶಿ ಲಕ್ಷ್ಮೀನಾರಾಯಣ್, ಅರಮನೆಯ ಆಡಳಿತ ಮಂಡಳಿಯ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಭದ್ರತಾ ಪಡೆಯ ಎಸಿಪಿ ಚಂದ್ರಶೇಖರ್ ಸೇರಿದಂತೆ ಕೆಲವೇ ಕೆಲವರು ಮಾತ್ರ ಉಪಸ್ಥಿತರಿದ್ದರು. ಜೋಡಣೆಯ ನಂತರ ಸಿಂಹಾಸನಕ್ಕೆ ಪರದೆ ಮುಚ್ಚಲಾಯಿತು. ದಸರಾ ಉದ್ಘಾಟನೆಯ ದಿನವಾದ ಅ.15ರಂದು ಬೆಳಗ್ಗೆ 7.05ರಿಂದ 7.45 ರೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಸಿಂಹಾಸನಕ್ಕೆ ಸಿಂಹವನ್ನು ಜೋಡಿಸಲಾಗುತ್ತದೆ. ಆ ನಂತರವಷ್ಟೇ ಖಾಸಗಿ ದರ್ಬಾರ್‌ಗೆ ಸಿಂಹಾಸನ ಸಿದ್ಧಗೊಳ್ಳಲಿದೆ.

ಅರಮನೆಯಿಂದ ಚಾಮುಂಡಿಬೆಟ್ಟ ದೇವಾಲಯದ ಆಡಳಿತ ಮಂಡಳಿಗೆ 'ಉತ್ಸವ ಮೂರ್ತಿ' ಹಸ್ತಾಂತರ

- ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಗುವ ಉತ್ಸವ ಮೂರ್ತಿ
- ದೇವಾಲಯದಲ್ಲಿ ನವರಾತ್ರಿ ವೇಳೆ ಪೂಜಿಸಲಾಗುತ್ತದೆ
- ಜಂಬೂಸವಾರಿ ದಿನ ಬೆಟ್ಟದಿಂದ ಉತ್ಸವ ಮೂರ್ತಿ ತರಲಾಗುತ್ತದೆ



ಮೈಸೂರು,ಅ.9(ಎಂಟಿವೈ)– ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಗುವ ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಸೋಮವಾರ ಅರಮನೆ ಮಂಡಳಿಯು ಚಾಮುಂಡಿ ಬೆಟ್ಟದ ದೇವಾಲಯದ ಆಡಳಿತ ಮಂಡಳಿಗೆ ಹಸ್ತಾಂತರಿಸಿತು.

ಅರಮನೆಯ ಪ್ರಾಂಗಣದಲ್ಲಿ ಪ್ರವಾಸಿಗರ ವೀಕ್ಷಣೆಗೆಂದು ಇಡಲಾಗಿದ್ದ ಮರದ ಅಂಬಾರಿಯೊಳಗೆ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನಿಟ್ಟು ಪೂಜಿಸಲಾಗುತ್ತಿತ್ತು. ಅರಮನೆ ವೀಕ್ಷಣೆಗೆ ಬರುವ ಪ್ರವಾಸಿಗರು ಉತ್ಸವ ಮೂರ್ತಿಯನ್ನು ಭಕ್ತಿಯಿಂದ ವೀಕ್ಷಿಸುತ್ತಿದ್ದರು. ನವರಾತ್ರಿ ವೇಳೆ 16ರಿಂದ 20 ದಿನ ಹೊರತುಪಡಿಸಿದರೆ, ಉಳಿದ ದಿನ ಅರಮನೆಯಲ್ಲೇ ಇರುವ ಈ ಉತ್ಸವ ಮೂರ್ತಿ ವಿಶಿಷ್ಟವಾದ ಮೂರ್ತಿಯಾಗಿದೆ.

ಅರಮನೆಯಲ್ಲಿದ್ದ ಉತ್ಸವ ಮೂರ್ತಿಯನ್ನು ಇಂದು ಬೆಳಗ್ಗೆ ಅರಮನೆ ಮಂಡಳಿಯ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಚಾಮುಂಡಿಬೆಟ್ಟದ ದೇವಾಲಯದ ಆಡಳಿತ ಮಂಡಳಿ ಆಡಳಿತಧಿಕಾರಿ ಕೃಷ್ಣ ನೇತೃತ್ವದ ಸಿಬ್ಬಂದಿಯ ತಂಡಕ್ಕೆ ಹಸ್ತಾಂತರಿಸಿದರು. ಈ ಉತ್ಸವ ಮೂರ್ತಿಗೆ ನವರಾತ್ರಿಯಲ್ಲಿ ಬೆಟ್ಟದ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಜಂಬೂಸವಾರಿ ದಿನ ಬೆಳಗ್ಗೆ ಚಾಮುಂಡಿಬೆಟ್ಟದಿಂದ ತೆರದ ವಾಹನದಲ್ಲಿ ಮೆರವಣಿಗೆ ಮೂಲಕ ಸಂಗೊಳ್ಳಿರಾಯಣ್ಣ (ಕುರುಬಾರಹಳ್ಳಿ) ವೃತ್ತ, ಇಟ್ಟಿಗೆಗೂಡು ಮಾರ್ಗವಾಗಿ ಜಯಮಾರ್ತಾಂಡ ದ್ವಾರದ ಮೂಲಕ ಅರಮನೆಗೆ ತರಲಾಗುತ್ತದೆ. ಆ ನಂತರ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಿ, ಆನೆಯ ಮೇಲಿಟ್ಟು ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ.

ಮೂರ್ತಿಯ ವೈಶಿಷ್ಟ್ಯ: ಅರಸರ ಆಳ್ವಿಕೆ ಅಂತ್ಯದಲ್ಲಿ ಜಯಚಾಮರಾಜ ಒಡೆಯರ್ ಅವರು ಚಿನ್ನದ ಅಂಬಾರಿಯಲ್ಲಿ ಕುಳಿತು ಜಂಬೂಸವಾರಿಯಲ್ಲಿ ಸಾಗುತ್ತಿದ್ದರು. ನಂತರ ಅಂಬಾರಿಯಲ್ಲಿ ಭುವನೇಶ್ವರಿ ವಿಗ್ರಹವನ್ನಿಟ್ಟು ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತಿತ್ತು. ನಂತರ ಚಾಮುಂಡೇಶ್ವರಿ ದೇವಾಲಯದ ಆಡಳಿತ ಮಂಡಳಿ ಸಹಕಾರ ಪಡೆದು ದೇವಾಲಯದ ವತಿಯಿಂದಲೇ 1990ರಲ್ಲಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಸಿದ್ಧಪಡಿಸಲಾಯಿತು. ಎರಡೂವರೆ ಅಡಿ ಎತ್ತರವಿರುವ ಈ ಮೂರ್ತಿಗೆ 8 ಕೈಗಳಿವೆ. ಮಹಿಷಾಸುರ ಮರ್ಧಿನಿಯ ಅವತಾರದಲ್ಲಿ ಅಣಿಗೊಳಿಸಲಾಗಿದೆ. ದೇವಿಯ ಪಾದದಡಿ ಮಹಿಷಾಸುರ ಬಿದ್ದಿದ್ದು ಈ ಉತ್ಸವ ಮೂರ್ತಿ ವಿಶಿಷ್ಟ ಹಾಗೂ ಶಕ್ತಿ ಸ್ವರೂಪಿಣಿ ಮೂರ್ತಿಯಾಗಿದೆ.

ಕರೋಕೆ ಟ್ರ್ಯಾಕ್ ಹಾಡುಗಳ ಕಾರ್ಯಕ್ರಮಕ್ಕೆ ಅವಕಾಶ ನೀಡದಂತೆ ಮನವಿ



ಮೈಸೂರು, ಅ.9–ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆಯಲ್ಲಿ ಕರೋಕೆ ಟ್ರ್ಯಾಕ್ ಹಾಡುಗಳ ಕಾರ್ಯಕ್ರಮಗಳಿಗೆ ಅವಕಾಶ ಕೊಟ್ಟು ಮೈಸೂರು ಸಂಗೀತ ಪರಂಪರೆಗೆ ಕಳಂಕ ತರಬಾರದೆಂದು ಮೈಸೂರು ಪೊಲೀಸ್ ಅಧೀಕ್ಷಕರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಿಗೆ ಮೈಸೂರು ಆರ್ಟಿಸ್ಟ್ ಅಸೋಸಿಯೇಷನ್ ವತಿಯಿಂದ ಮನವಿ ಸಲ್ಲಿಸಲಾಯಿತು.

ಈ ವೇಳೆ ಮೈಸೂರು ಆರ್ಟಿಸ್ಟ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಗುರುದತ್ ಮಾತನಾಡಿ, ಮೈಸೂರು ದಸರಾ ಸಂಗೀತ ಪರಂಪರೆಗೆ ನೂರಾರು ವರ್ಷದ ಇತಿಹಾಸವಿದೆ. ಹಿಂದೂಸ್ಥಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಜನಪದ, ವಾದ್ಯಗೋಷ್ಠಿ, ತಾಳವಾದ್ಯ, ಹಾಡುಗಾರಿಕೆ, ಭಾವಗೀತೆ, ಭಕ್ತಿಗೀತೆ, ದೇವರನಾಮ, ನೃತ್ಯರೂಪಕ, ಭರತನಾಟ್ಯ, ರಂಗಗೀತೆ, ರೈತ ಗೀತೆ, ನಾಡಗೀತೆ ಹೀಗೆ ಯಾವುದೇ ಕಲಾ ಪ್ರಕಾರ ಕಾರ್ಯಕ್ರಮಗಳು ನಡೆದರೂ ಪಕ್ಕವಾದ್ಯ ಕಲಾವಿದರೊಂದಿಗೆ ಆಯೋಜಿತ್ತಾ ಬರಲಾಗಿದೆ. ಸಹಸ್ರಾರು ಕಲಾವಿದರು ಇದರ ಮೇಲೆ ಅವಲಂಭಿತರಾಗಿದ್ದಾರೆ. ಅಷ್ಟೇ ಅಲ್ಲದೇ ಕೋಟ್ಯಾಂತರ ಕಲಾಭಿಮಾನಿಗಳು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ಕಲಾವಿದರ ತವರೂರು ಮೈಸೂರಿನ ಕಲಾಕ್ಷೇತ್ರಕ್ಕೆ ಮೈಸೂರು ಮಹಾರಾಜರ ಕೊಡುಗೆ ಅಪಾರವಾದುದು. ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಪ್ರಾಸೋದ್ಯಮ ಇಲಾಖೆ ಅದನ್ನು ಬೆಳೆಸಲು ಮುಂದಾಗಬೇಕೇ ಹೊರತು ಮೈಸೂರಿನ ಪಾರಂಪರಿಕ ಸಂಸ್ಕೃತಿಯನ್ನು ಹಾಳು ಮಾಡುವ ಅವೈಜ್ಞಾನಿಕ ಕರೋಕೆ ಗೀತೆಗಳ ಗಾಯನಕ್ಕೆ ಸರ್ಕಾರ ಪ್ರೋತ್ಸಾಹಿಸಬಾರದು. ಮಡಿಕೇರಿ ದಸರಾ, ಮಂಗಳೂರು, ಶಿವಮೊಗ್ಗ ಸರ್ಕಾರಿ ವೇದಿಕೆಯಲ್ಲಿ ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಹೇಳಿದರು. ಮೈಸೂರು ಆರ್ಟಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ರಘುನಾಥ್ ಮಾತನಾಡಿ, ಹಾಡುಗಾರಿಕೆ ಸಂಗೀತ ಪ್ರತಿಯೊಬ್ಬರಲ್ಲೂ ಬರಬೇಕು. ಅದಕ್ಕೆ ಶ್ರದ್ದೆ ಕಲಿಕಾ ವಿಧಾನ ರಾಗ ತಾಳ ಬಹಳ ಮುಖ್ಯ. ಹವ್ಯಾಸಿ ಕಲಾವಿದರು ಕಾರ್ಯಕ್ರಮಗಳನ್ನು ಅವರಿಗೆ ಉಪಯುಕ್ತವಾದ ರೀತಿಯಲ್ಲಿ ಆಯೋಜಿಸಲಿ ಯಾವ ವಿರೋಧವಿಲ್ಲ. ಆದರೆ ಸರ್ಕಾರಿ ವೇದಿಕೆಗಳಲ್ಲಿ ಮತ್ತು ವೃತ್ತಿಪರ ಕಲಾವಿದರಿಂದ ನಡೆಯುವ ಕಾರ್ಯಕ್ರಮಗಳಲ್ಲಿ ಕಲಾಶ್ರೀಮಂತಿಕೆಯ ಸಂಗೀತದ ಇತಿಹಾಸವಿರುವ ಮೈಸೂರು ದಸರಾ ಸಾಂಸ್ಕೃತಿಕ ವೇದಿಕೆಗಳಲ್ಲಿ ಕರೋಕೆ ಬಳಸಬಾರದು. ಇದರ ಬಗ್ಗೆ ಜಿಲ್ಲಾಡಳಿತ, ಕನ್ನಡ ಸಂಸ್ಕೃತಿ ಇಲಾಖೆ ಎಚ್ಚೆತ್ತುಕೊಳ್ಳಬೇಕಿದೆ. ಕರೋಕೆ ಬಂದ ನಂತರ ಸಾವಿರಾರು ಕಲಾವಿದರು ಕಾರ್ಯಕ್ರಮಗಳಿಲ್ಲದೆ ಮನೆಯಲ್ಲಿದ್ದಾರೆ. ಈಗ ಸರ್ಕಾರಿ ಕಾರ್ಯಕ್ರಮಗಳಲ್ಲೂ ಕೂಡ ಕರೋಕೆಯನ್ನು ಬಳಸಲು ಅವಕಾಶ ಕೊಟ್ಟರೆ ಮುಂದೊಂದು ದಿನ ವಾದ್ಯ ಕಲಾವಿದರುಗಳೇ ಇಲ್ಲದಂತಾಗುತ್ತಾರೆ. ಸಂಗೀತವೇ ಜೀವನ ಸಂಗೀತದಲ್ಲೇ ನನ್ನ ಬದುಕು ಕಟ್ಟಿಕೊಳ್ಳಬೇಕೆಂದು ಆಶಿಸುವ ಅನೇಕ ಕಲಾವಿದರಿಗೆ ಇದು ಬಹಳ ದೊಡ್ಡ ಮಾರಕವಾಗಿದೆ. ಈಗಾಗಲೇ ನೂರಾರು ಕಲಾವಿದರು ಸಂಗೀತ ಕ್ಷೇತ್ರವನ್ನು ಬಿಡುವ ಪರಿಸ್ಥಿತಿ ಬಂದಿದೆ. ಹೊಸದಾಗಿ ನಾನು ಸಂಗೀತ ಕ್ಷೇತ್ರದಲ್ಲಿ ಬೆಳೆಯಬೇಕು ಎಂದು ಮನಸ್ಸಿರುವವರು ಕೂಡ ನಮ್ಮ ಈ ಸಂಗೀತ ಕ್ಷೇತ್ರಕ್ಕೆ ಬರಲು ಹೆದರುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.


ರೋಷನ್ ಸೂರ್ಯ, ರಾಜೇಶ್ ಪಡಿಯರ್, ಹರ್ಷ ಪ್ರಭಾಕರ್, ರವಿಕುಮಾರ್, ಪ್ರದೀಪ್, ರವಿಕಿರಣ್, ಹನುಮಂತ ಮತ್ತಿತರರು ಉಪಸ್ಥಿತರಿದ್ದರು.

ಇನ್ನು 43 ತಾಲೂಕಲ್ಲಿ ಬರ

ಮೈಸೂರು,ಅ.9(ಎಸ್‌ಪಿಎನ್)– 2023–24ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಬರಪೀಡಿತ 21 ತಾಲೂಕು ಮತ್ತು ಸಾಧಾರಣ ಬರಪೀಡಿತ 22 ತಾಲೂಕುಗಳ ಪಟ್ಟಿ ಸೇರಿದಂತೆ ಒಟ್ಟು 43 ತಾಲೂಕುಗಳನ್ನು ಬರಪೀಡಿತ ಎಂದು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಹಾಗೂ ನೊಂದಣಿ ಮತ್ತು ಮುದ್ರಣ) ಜಂಟಿ ಕಾರ್ಯದರ್ಶಿ ಟಿ.ಸಿ.ಕಾಂತರಾಜ್ ಆದೇಶಿಸಿದ್ದಾರೆ.

2023ರ ಮುಂಗಾರಿನಲ್ಲಿ 21 ತಾಲೂಕಿನಲ್ಲಿ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾಲೂಕು, ಯಳಂದೂರು, ಮೈಸೂರು ಜಿಲ್ಲೆಯ ಕೆ.ಆರ್.ನಗರ, ಹಾಸನ ಜಿಲ್ಲೆಯ ಹಾಸನ ತಾಲೂಕು, ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. 2023ರ ಮುಂಗಾರಿನಲ್ಲಿ 22 ತಾಲೂಕುಗಳಾದ ಹಾಸನ ಜಿಲ್ಲೆಯ ಬೇಲೂರು, ಹೊಳೆನರಸೀಪುರ, ಸಕಲೇಶಪುರ, ಚನ್ನರಾಯಪಟ್ಟಣ, ಕೊಡಗು ಜಿಲ್ಲೆಯ ಸೋಮವಾರಪೇಟೆ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ಸೇರಿದಂತೆ 22 ತಾಲೂಕುಗಳು ಸಾಧಾರಣ ಬರ ಪೀಡಿತ ಎಂದು ಘೋಷಿಸಿದ್ದಾರೆ.

ಟೋಲ್‌ನಿಂದ ಸಣ್ಣ ವಾಹನಗಳಿಗೆ ಮುಕ್ತಿ ದೊರಕದಿದ್ದರೆ ಟೋಲ್ ಬೂತ್‌ಗಳಿಗೆ ಬೆಂಕಿ



ನವದೆಹಲಿ: ಸಣ್ಣ ವಾಹನಗಳಿಗೆ ಟೋಲ್ ಪಾವತಿಯಿಂದ ಮುಕ್ತಿ ಕೊಡಿಸಲು ತಮ್ಮ ಕಾರ್ಯಕರ್ತರು ನಡೆಸಲು ಮುಂದಾಗಿರುವ ಹೋರಾಟವನ್ನು ಹತ್ತಿಕ್ಕಿದರೆ, ಟೋಲ್ ಬೂತ್‌ಗಳಿಗೆ ಬೆಂಕಿ ಹಚ್ಚಲಾಗುವುದು ಎಂದು ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಟೋಲ್ ಬೂತ್‌ಗಳು ರಾಜ್ಯದಲ್ಲಿರುವ ರಾಜಕಾರಣಿಗಳಿಗೆ ಜೀವನೋಪಾಯದ ಮಾರ್ಗವಾಗಿದೆ ಎಂದು ಆರೋಪಿಸಿದ್ದಾರೆ. ಮುಂದಿನ ಕೆಲವು ದಿನಗಳಲ್ಲಿ ನಾನು ಸಿಎಂ ಶಿಂಧೆ ಭೇಟಿಗೆ ಸಮಯ ಕೇಳಿದ್ದೇನೆ. ಸಭೆಯಲ್ಲಿ ಏನಾಗಲಿದೆಯೋ ಕಾದು ನೋಡೋಣ. ಡಿಸಿಎಂ ಫಡ್ನವಿಸ್ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು ಎಂಎನ್‌ಎಸ್ ಕಾರ್ಯಕರ್ತರು ಪ್ರತಿ ಟೋಲ್ ಬೂತ್ ಬಳಿ ನಿಂತು ಮೂರು ಚಕ್ರದ ವಾಹನಗಳು, ದ್ವಿಚಕ್ರ ವಾಹನಗಳು ಹಾಗೂ ನಾಲ್ಕು ಚಕ್ರದ ವಾಹನಗಳಿಗೆ ಟೋಲ್ ಚಾರ್ಜ್ ತೆಗೆದುಕೊಳ್ಳದಂತೆ ಆಗುವುದನ್ನು ಖಾತ್ರಿಪಡಿಸಿಕೊಳ್ಳಲಿದ್ದಾರೆ. ಒಂದು ವೇಳೆ ನಮ್ಮ ಕಾರ್ಯಕರ್ತರನ್ನು ತಡೆದರೆ, ನಾವು ಟೋಲ್‌ಗಳಿಗೆ ಬೆಂಕಿ ಹಚ್ಚಲಿದ್ದೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಸಣ್ಣ ವಾಹನಗಳಿಗೆ ಟೋಲ್ ಪಾವತಿಯಿಂದ ವಿನಾಯಿತಿ ನೀಡಲಾಗಿದೆ ಎಂದು ಭಾನುವಾರ ಫಡ್ನವಿಸ್ ನೀಡಿದ್ದ ಹೇಳಿಕೆಯನ್ನು ಠಾಕ್ರೆ ಉಲ್ಲೇಖಿಸಿದ್ದರು.

ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದಿವೆ, ಆದರೆ, ಮಹಾರಾಷ್ಟ್ರವನ್ನು ಟೋಲ್ ಮುಕ್ತ ಮಾಡುವ ಭರವಸೆಯನ್ನು ಯಾರೂ ಜಾರಿಗೆ ತಂದಿಲ್ಲ, ಟೋಲ್ ಬೂತ್‌ಗಳು ಅನೇಕ ರಾಜಕಾರಣಿಗಳಿಗೆ ಜೀವನಾಧಾರವಾಗಿದೆ ಎಂದು ಠಾಕ್ರೆ ಆರೋಪಿಸಿದ್ದಾರೆ.

ಪ್ರತಿ ದಿನ, ಪ್ರತಿ ವಾರ ಮತ್ತು ಪ್ರತಿ ತಿಂಗಳು ಟೋಲ್ ಬೂತ್‌ಗಳಲ್ಲಿ ಸಂಗ್ರಹಿಸಿದ ಹಣದಿಂದ ಅವರು ಸ್ವಲ್ಪ ಪಾಲು ಪಡೆಯುತ್ತಾರೆ. ಆದ್ದರಿಂದ, ಟೋಲ್ ಬೂತ್‌ಗಳನ್ನು ಎಂದಿಗೂ ಮುಚ್ಚಲಾಗುವುದಿಲ್ಲ ಮತ್ತು ನೀವು ಎಂದಿಗೂ ಉತ್ತಮ ರಸ್ತೆಗಳನ್ನು ಪಡೆಯುವುದಿಲ್ಲ ಎಂದು ಎಂಎನ್‌ಎಸ್ ಮುಖ್ಯಸ್ಥರು ಹೇಳಿದ್ದಾರೆ.

ಫುಟ್‌ಬಾಲ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣೆ



ಮೈಸೂರು, ಅ. 9– ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್ ಹಾಗೂ ಅಶೋಕ ಫುಟ್ಬಾಲ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ಹಾರ್ಡ್ವಿಕ್ ಶಾಲೆಯ ಆವರಣದಲ್ಲಿ ನಡೆದ ಸೆವೆನ್ ಎ ಸೈಡ್ ಫುಟ್ಬಾಲ್ ಟೂರ್ನಮೆಂಟ್‌ನಲ್ಲಿ ವಿಜೇತರಾದ ತಂಡಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ್ ಹಾಗೂ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಟ್ರೋಫಿ ಹಾಗೂ ಬಹುಮಾನವನ್ನು ವಿತರಿಸಿದರು.

17 ವರ್ಷದ ಬಾಲಕರ ವಿಭಾಗದಲ್ಲಿ ಕಿಶೋರ್ ಫುಟ್ಬಾಲ್ ಕ್ಲಬ್ ಪ್ರಥಮ ಸ್ಥಾನ, ಅಶೋಕ ಫುಟ್ಬಾಲ್ ಕ್ಲಬ್ ದ್ವಿತೀಯ ಬಹುಮಾನ ಪಡೆಯಿತು. 19 ವರ್ಷದ ಬಾಲಕರ ವಿಭಾಗದಲ್ಲಿ ಲಾ ಗ್ಯಾಲಕ್ಸಿ ಕ್ಲಬ್ ಪ್ರಥಮ ಸ್ಥಾನ ಹಾಗೂ ಗಾಂಧಿನಗರದ ಅಂಬೇಡ್ಕರ್ ಫುಟ್ಬಾಲ್ ಅಸೋಸಿಯೇಷನ್ ದ್ವಿತೀಯ ಬಹುಮಾನ ಪಡೆಯಿತು. ಅಶೋಕಪುರಂ ಫುಟ್ಬಾಲ್ ಕ್ಲಬ್‌ನ ಅಧ್ಯಕ್ಷ ಮಧುಸೂದನ್ ಎಂಎಸ್, ಆಯೋಜಕರಾದ ಪ್ರಮೋದ್ ಎಂ ಎಸ್, ಅನಂತ್ ಕುಮಾರ್, ಗಿರೀಶ್ ಕುಮಾರ್, ಮೈಸೂರು ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಉಮೇಶ್ ಉಪಸ್ಥಿತರಿದ್ದರು.

ಅ.16ರಿಂದ ಮೈಸೂರು ದಸರಾ ಚಲನ ಚಿತ್ರೋತ್ಸವ

'ಓಲ್ಡ್ ಇಸ್ ಗೋಲ್ಡ್'

ಈ ಬಾರಿಯ ದಸರಾ ಚಲನ ಚಿತ್ರೋತ್ಸವದಲ್ಲಿ 'ಓಲ್ಡ್ ಇಸ್ ಗೋಲ್ಡ್' ಶೀರ್ಷಿಕೆಯಲ್ಲಿ ಹೆಸರಾಂತ ನಟರ ಸಿನಿಮಾಗಳನ್ನು ಪ್ರದರ್ಶಿಸಲಾಗುವುದು ಎಂದು ಸವಿತಾ ತಿಳಿಸಿದರು.

ವರನಟ ಡಾ.ರಾಜ್‌ಕುಮಾರ್ ಅವರ 'ಕಸ್ತೂರಿ ನಿವಾಸ', 'ಬಂಗಾರದ ಮನುಷ್ಯ', ಸಾಹಸ ಸಿಂಹ ಡಾ.ವಿಷ್ಣುವರ್ಧನ್‌ರವರ 'ನಾಗರ ಹಾವು', ರೆಬಲ್ ಸ್ಟಾರ್ ಅಂಬರೀಶ್‌ರವರ 'ಅಂತ' ಹಾಗೂ ಕರಾಟೆ ಕಿಂಗ್ ಶಂಕರ್‌ನಾಗ್‌ರವರ 'ಗೀತಾ' ಪ್ರದರ್ಶನಗೊಳ್ಳಲಿವೆ ಎಂದು ಹೇಳಿದರು.

ಇದಲ್ಲದೆ ಮಕ್ಕಳ ವಿಭಾಗದಲ್ಲಿ ಚಿಲ್ಡ್ರನ್ ಆಫ್ ಹೆವನ್, ಗಾಂಧಿ ಮತ್ತು ನೋಟು, ದಿ ಸರ್ಕಸ್ ಹಾಗೂ ವಿಶೇಷ ಸಿನಿಮಾಗಳನ್ನು ಕೂಡ ಪ್ರದರ್ಶಿಸಲಾಗುವುದು ಎಂದು ಡಾ.ಸವಿತಾ ತಿಳಿಸಿದರು. ಮಕ್ಕಳು, ಯುವಕ, ಯುವತಿಯರು ಹಾಗೂ ವೃದ್ಧರ ತನಕ ಎಲ್ಲಾ ವಯೋಮಾನದವರ ಅಭಿರುಚಿಗೆ ತಕ್ಕಂತೆ ಸಿನಿಮಾಗಳನ್ನು ಆಯ್ಕೆ ಮಾಡಿ ಪ್ರದರ್ಶನ ಮಾಡಲಾಗುವುದು ಎಂದು ಹೇಳಿದರು.

ಅ.15ರಂದು ನಡೆಯುವ ಉದ್ಘಾಟನೆಗೆ ತಾರಾ ಮೆರಗು

- 7 ದಿನಗಳ ಕಾಲ ನಡೆಯುವ ಚಿತ್ರೋತ್ಸವ
- ನಟ, ನಿರ್ದೇಶಕರ ಜೊತೆ ಸಂವಾದ
- ಹಾಸ್ಯಚಕ್ರವರ್ತಿ ನರಸಿಂಹರಾಜು 100ನೇ ಜಯಂತಿ ಸಂಭ್ರಮ
- ಹೈಟೆಕ್ ಥಿಯೇಟರ್‌ನಲ್ಲಿ ಚಿತ್ರೋತ್ಸವಕ್ಕೆ ವ್ಯವಸ್ಥೆ



ಮೈಸೂರು, ಅ.9(ಬಿಎಲ್‌ಯು)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ದಸರಾ ಚಲನ ಚಿತ್ರೋತ್ಸವ ಅಕ್ಟೋಬರ್ 16 ರಿಂದ 22ರವರೆಗೆ 7 ದಿನಗಳ ಕಾಲ ನಡೆಯಲಿದೆ ಎಂದು ದಸರಾ ಚಲನ ಚಿತ್ರೋತ್ಸವ ಉಪ ವಿಶೇಷಾಧಿಕಾರಿ ಎಂ.ಕೆ.ಸವಿತಾ ತಿಳಿಸಿದರು. ಮೈಸೂರಿನ ಮಯೂರ ಹೊಯ್ಸಳ ಹೋಟೆಲ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ಟೋಬರ್ 15 ರಂದು ಬೆಳಿಗ್ಗೆ 11.30 ಗಂಟೆಗೆ ಮೈಸೂರಿನ ಕಲಾ ಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ದಸರಾ ಚಲನ ಚಿತ್ರೋತ್ಸವಕ್ಕೆ ಚಾಲನೆ ನೀಡಲಿದ್ದಾರೆ ಎಂದರು. ದಸರಾ ಉದ್ಘಾಟಕರಾದ ಖ್ಯಾತ ಚಲನ ಚಿತ್ರ ಸಂಗೀತ ನಿರ್ದೇಶಕ ಡಾ.ಹಂಸಲೇಖ, ತಾರಾ ದಂಪತಿಗಳಾದ ಡಾರ್ಲಿಂಗ್ ಕೃಷ್ಣ, ಮಿಲನ ನಾಗರಾಜ್, ನಟಿಯರಾದ ಮಾನ್ವಿತಾ ಕಾಮತ್, ಮಯೂರಿ ಹಾಗೂ ವೈಭವಿ ಶಾಂಡಿಲ್ಯ ದಸರಾ ಚಲನಚಿತ್ರೋತ್ಸವಕ್ಕೆ ತಾರಾ ಮೆರಗು ನೀಡಲಿದ್ದಾರೆ ಎಂದು ಸವಿತಾ ಹೇಳಿದರು. ಈ ಕಾರ್ಯಕ್ರಮಕ್ಕೂ ಮುನ್ನ ಬೆಳಿಗ್ಗೆ 10 ಗಂಟೆಗೆ ಖ್ಯಾತ ಹಾಸ್ಯ ನಟರೂ ಆದ ಸಂಗೀತ ನಿರ್ದೇಶಕ ಸಾಧು ಕೋಕಿಲಾ ನೇತೃತ್ವದಲ್ಲಿ ಸಂಗೀತ ಹಾಗೂ ಮನೋರಂಜನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.


ಈ ಬಾರಿಯ ದಸರಾ ಚಲನಚಿತ್ರೋತ್ಸವದ ಸಂದರ್ಭದಲ್ಲಿ ಹಾಸ್ಯ ಚಕ್ರವರ್ತಿ ನರಸಿಂಹರಾಜು ಅವರ 100ನೇ ಜನ್ಮದಿನದ ಅಂಗವಾಗಿ ಅವರ ಪುತ್ರಿ ಸುಧಾ ನರಸಿಂಹರಾಜು ಅವರಿಗೆ ಗೌರವ ಸಮರ್ಪಣೆ ಮಾಡಲಾಗುವುದು ಎಂದು ಸವಿತಾ ವಿವರಿಸಿದರು. ಮಾರನೆ ದಿನ ಅಂದರೆ ಅ.16ರಿಂದ ಮೈಸೂರಿನ ಮಾಲ್ ಆಫ್ ಮೈಸೂರ್‌ನಲ್ಲಿರುವ ಐನಾಕ್ಸ್ ಮತ್ತು ಜಯಲಕ್ಷ್ಮಿಪುರಂನ ಡಿಆರ್‌ಸಿ ಮಲ್ಟಿಪ್ಲೆಕ್ಸ್‌ನಲ್ಲಿ ದಸರಾ ಚಲನಚಿತ್ರಗಳ ಪ್ರದರ್ಶನ ಆಯೋಜಿಸಲಾಗಿದೆ. ಐನಾಕ್ಸ್‌ನಲ್ಲಿ 3 ಪರದೆಗಳಲ್ಲಿ ಹಾಗೂ ಡಿಆರ್‌ಸಿಯ ಒಂದು ಪರದೆಯಲ್ಲಿ ಚಲನಚಿತ್ರಗಳನ್ನು ಪ್ರದರ್ಶನಗೊಳ್ಳಲಿದೆ ಎಂದು ಹೇಳಿದರು.

ಅಕ್ಟೋಬರ್ 22 ರವರೆಗೆ 7 ದಿನಗಳ ಕಾಲ ನಡೆಯುವ ದಸರಾ ಚಲನ ಚಿತ್ರೋತ್ಸವದಲ್ಲಿ 112 ಚಲನಚಿತ್ರಗಳನ್ನು ವೀಕ್ಷಿಸುವ ಅವಕಾಶ ಚಿತ್ರರಸಿಕರಿಗೆ ದೊರೆಯಲಿದೆ ಎಂದರು. ಸಾಮಾಜಿಕ ಸಂದೇಶ ಸಾರುವ ಸದಭಿರುಚಿಯ ರಾಷ್ಟ್ರ ಮಟ್ಟ ಪ್ರಶಸ್ತಿ ಪುರಸ್ಕೃತ ಚಲನಚಿತ್ರಗಳನ್ನು ಪ್ರದರ್ಶಿಸಲಾಗುವುದು. ಪ್ರಮುಖವಾಗಿ ಇದರಲ್ಲಿ ನರಸಿಂಹರಾಜು ಮುಖ್ಯ ಭೂಮಿಕೆಯಲ್ಲಿರುವ ಸತ್ಯ ಹರಿಶ್ಚಂದ್ರ, ಶ್ರೀ ಕೃಷ್ಣದೇವರಾಯ ಸೇರಿದಂತೆ ನಾಲ್ಕು ಚಿತ್ರಗಳನ್ನು ಪ್ರದರ್ಶನ ಮಾಡಲಾಗುವುದು ಎಂದು ಸವಿತಾ ಹೇಳಿದರು.

ಐನಾಕ್ಸ್‌ನಲ್ಲಿ ಆಯ್ದ ಅತ್ಯುತ್ತಮ ಕಿರುಚಿತ್ರಗಳನ್ನು ಪ್ರದರ್ಶಿಸಲಾಗುವುದು. ಈ ವೇಳೆ ಯುವ ಜನಾಂಗಕ್ಕೆ ಪ್ರೋತ್ಸಾಹ ನೀಡಲು ಕಿರುಚಿತ್ರ ಸ್ಪರ್ಧೆ ಆಯೋಜಿಸಲಾಗಿದೆ. ಕಿರುಚಿತ್ರದಲ್ಲಿ ಮೂರು ಬಹುಮಾನ, ಅತ್ಯುತ್ತಮ ಸಂಕಲನ ಮತ್ತು ಅತ್ಯುತ್ತಮ ಛಾಯಾಗ್ರಹಕರನ್ನು ಆಯ್ಕೆ ಮಾಡಿ ಬಹುಮಾನ ನೀಡಲಾಗುವುದು ಎಂದರು. ರಾಷ್ಟ್ರೀಯ ಪ್ರಶಸ್ತಿ ಪಡೆದ ಸಿನಿಮಾ ಪ್ರದರ್ಶನದ ವೇಳೆ ಆಯಾ ಸಿನಿಮಾಗಳ ನಟರು, ನಿರ್ದೇಶಕರು ಹಾಗೂ ನಿರ್ಮಾಪಕರು ಹಾಜರಿರುತ್ತಾರೆ. ಸಿನಿಮಾದ ನಂತರ ಅವರೊಡನೆ ಸಂವಾದಕ್ಕೂ ಅವಕಾಶ ಕಲ್ಪಿಸಲಾಗಿದೆ ಎಂದು ಸವಿತಾ ತಿಳಿಸಿದರು.

500 ರೂಪಾಯಿ ಪಾವತಿಸಿ ಎಷ್ಟು ಸಿನಿಮಾವಾದ್ರೂ ನೋಡಿ

ಮೈಸೂರು ದಸರಾ ಚಲನಚಿತ್ರೋತ್ಸವದಲ್ಲಿ ಪ್ರದರ್ಶನವಾಗುವ ಸಿನಿಮಾಗಳ ವೀಕ್ಷಣೆಗೆ ವಯಸ್ಕರಿಗೆ 500 ರೂಪಾಯಿ ಹಾಗೂ ವಿದ್ಯಾರ್ಥಿಗಳಿಗೆ 300 ರೂಪಾಯಿ ಪಾಸ್ ದರ ನಿಗದಿ ಮಾಡಲಾಗಿದೆ. ಒಂದೇ ಸಿನಿಮಾ ನೋಡಬೇಕೆಂದವರಿಗೆ 100 ರೂಪಾಯಿ ದರ ನಿಗದಿ ಮಾಡಲಾಗಿದೆ. ಸಿನಿಮಾ



ನೋಡುವ ಒಬ್ಬ ವ್ಯಕ್ತಿಯನ್ನು ಲಾಟರಿ ಮೂಲಕ ಆಯ್ಕೆ ಮಾಡಿ ಬಹುಮಾನ ನೀಡಲಾಗುವುದು ಎಂದು ಸವಿತಾ ತಿಳಿಸಿದರು. ಒಂದು ಬಾರಿ ನಿಗದಿ ಮಾಡಿರುವ ಹಣ ಪಾವತಿಸಿ ಪಾಸ್ ಪಡೆಯುವರು 7 ದಿನಗಳ ಕಾಲ ಎಲ್ಲಾ ಸಿನಿಮಾಗಳನ್ನು ವೀಕ್ಷಿಸಬಹುದು. ಆದರೆ ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಪಾಸ್ ಪಡೆಯುವ ಪ್ರತಿಯೊಬ್ಬರಿಗೂ ಚಲನಚಿತ್ರಗಳ ಮಾಹಿತಿ ಇರುವ ಕಿರುಹೊತ್ತಿಗೆ ಕೂಡ ನೀಡಲಾಗುವುದು ಎಂದು ಹೇಳಿದರು. ಪಾಸ್ ಪಡೆಯಲು ಆನ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ನಾಳೆಯಿಂದ ಅಕ್ಟೋಬರ್ 22ರವರೆಗೆ ಪಾಸ್ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಕ್ಯೂ.ಆರ್.ಕೋಡ್ ಬಳಸಿ ನೋಂದಣಿ ಮಾಡಿಕೊಳ್ಳಬಹುದು. ಆನ್‌ಲೈನ್‌ನಲ್ಲಿ ಪಾಸ್ ಪಡೆಯಲು ಸಾಧ್ಯವಾಗದವರು ವಾರ್ತಾ ಭವನದಲ್ಲಿ ಪಾಸ್ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಫೇಸ್ ಬುಕ್, ಇನ್ಸ್ಟಾಗ್ರಾಂ ಪೇಜ್‌ಗಳಾದ (MyDFF20230) ಫಾಲೋ ಮಾಡಬಹುದು. ಇಲ್ಲವೆ **ಮೊ.7411564510** ಸಂಪರ್ಕಿಸಬಹುದು ಎಂದು ಸವಿತಾ ಹೇಳಿದರು.

ದಸರಾ ಚಲನಚಿತ್ರೋತ್ಸವದ ಸಮಿತಿಯ ಕಾರ್ಯಾಧ್ಯಕ್ಷೆ ಕೆ.ಪ್ರಿಯದರ್ಶಿನಿ, ವಾರ್ತಾ ಇಲಾಖೆಯ ಉಪನಿರ್ದೇಶಕ ಡಿ. ಅಶೋಕ್‌ಕುಮಾರ್, ಸಹಾಯಕ ನಿರ್ದೇಶಕ ಬಿ.ಕೆ. ಹರೀಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅನಾದಿ ಕಾಲದಿಂದಲೂ ವಿಶ್ವಕರ್ಮ ಉತ್ಸವ ಆಚರಣೆ

ಮುಸ್ಕೆರೆ ಗ್ರಾಮದಲ್ಲಿ ಶ್ರೀ ಅನಂತವಿಭೂಷಿತ ಸುಜ್ಞಾನತೀರ್ಥ ಸ್ವಾಮೀಜಿ ಅಭಿಮತ



ಹೆಚ್.ಡಿ.ಕೋಟೆ, ಅ.9– ತಳ ಸಮುದಾಯಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣ ಬಹುಮುಖ್ಯ ಎಂದು ವಿಶ್ವ ಕರ್ಮ ಮಹಾಸಂಸ್ಥಾನ ಮಠದ ಶ್ರೀ ಅನಂತ ವಿಭೂಷಿತ ಸುಜ್ಞಾನತೀರ್ಥ ಸ್ವಾಮೀಜಿ ಹೇಳಿದರು.

ತಾಲೂಕಿನ ಮುಸ್ಕೆರೆ ಗ್ರಾಮದ ವಿಶ್ವಕರ್ಮ ಕಾಲೋನಿಯಲ್ಲಿ ಸೋಮವಾರ ಎಚ್.ಡಿ. ಕೋಟೆ ಮತ್ತು ಸರಗೂರು ವಿಶ್ವಕರ್ಮ ಸಮಾಜದ ವತಿಯಿಂದ ಆಯೋಜಿಸಿದ್ದ ವಿಶ್ವಕರ್ಮ ಮಹೋತ್ಸವದಲ್ಲಿ ಮಾತನಾಡಿದ ಅವರು, ಹಣದಿಂದ ಸಾಧಿಸಲಾಗದ್ದನ್ನು ವಿದ್ಯೆಯಿಂದ ಸಾಧನೆ ಮಾಡಬಹುದು. ಹಾಗಾಗಿ ಉನ್ನತ ಶಿಕ್ಷಣ ಕೊಡಿಸುವ ಮೂಲಕ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಹೊಣೆಗಾರಿಕೆ ಪೋಷಕರ ಮೇಲಿದೆ ಎಂದರು.

ವಿಶ್ವಕರ್ಮ ಮಹೋತ್ಸವ ಇತ್ತೀಚೆಗೆ ಪ್ರಾರಂಭವಾಗಿಲ್ಲ. ಪುರಾತನ ಕಾಲದಿಂದಲೂ ಆಚರಿಸಿಕೊಂಡು ಬರಲಾಗುತ್ತಿದೆ. ಆದರೆ, ಸರ್ಕಾರದಿಂದ ಇತ್ತೀಚೆಗೆ ಆಚರಿಸಲಾಗುತ್ತಿದೆ. ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ ನೀರಿನಲ್ಲಿ ವಿಸರ್ಜನೆ ಮಾಡುವ ರೀತಿ ಬೇರೆ ರಾಜ್ಯಗಳಲ್ಲಿ ವಿಶ್ವಕರ್ಮ ಮೂರ್ತಿಯನ್ನು ಪೂಜಿಸಿ ನೀರಿನಲ್ಲಿ ವಿಸರ್ಜನೆ ಮಾಡುವ ಪರಿಪಾಠ ಇದೆ ಎಂದರು.

50 ವರ್ಷಗಳ ಹಿಂದೆ ಕಾಡಾಗಿದ್ದ ಈ ಜಾಗವನ್ನು ಒಂದು ಮಾದರಿ ಗ್ರಾಮವನ್ನಾಗಿ ಪರಿವರ್ತನೆ ಮಾಡಿದ ಕೀರ್ತಿ ಮುಸ್ಕೆರೆ ಗ್ರಾಮದ ಹಿರಿಯರಾದಂತ ಅಪ್ಪಜಪ್ಪನವರಿಗೆ ಸಲ್ಲಬೇಕಾಗುತ್ತದೆ. ಮುಸ್ಕೆರೆ ಗ್ರಾಮದಲ್ಲಿ ಎಲ್ಲಾ ಸಮುದಾಯದ ಜನರು ಅನ್ಯೋನ್ಯತೆಯಿಂದ ಸಹಬಾಳ್ವೆಯಿಂದ ಬಾಳುತ್ತಿರುವುದು ನಿಜಕ್ಕೂ ಸಂತೋಷ ವಿಚಾರ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿಶ್ವಕರ್ಮ ಮೂರ್ತಿಯನ್ನು ವೀರಗಾಸೆ, ಮಂಗಳವಾದ್ಯಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಜಿ.ಎಸ್.ನಾಗರಾಜಪ್ಪ, ಪ್ರಧಾನ ಕಾರ್ಯದರ್ಶಿ ಕಲ್ಲಂಬಾಳು ಮೂರ್ತಿ, ಉಪಾಧ್ಯಕ್ಷ ಕೆಂಚನಹಳ್ಳಿ ಮಾದೇವಸ್ವಾಮಿ, ಎಂ.ಪಿ.ವಿಶ್ವನಾಥ್, ಜಿಪಂ ಮಾಜಿ ಸದಸ್ಯ ರವಿ, ಭೀಮನಹಳ್ಳಿ ಗ್ರಾಪಂ ಅಧ್ಯಕ್ಷೆ ಭಾಗ್ಯ ಯೋಗೀಶಾಚಾರ್, ಡಾ.ನಂಜುಂಡಸ್ವಾಮಿ, ಗಾಯತ್ರಮ್ಮ, ವಿನೋದಮ್ಮ ಲಕ್ಷ್ಮೀ, ಮಾದೇಗೌಡ ಜಿ. ಕೀರ್ತಿ, ಶ್ರೀಕಂಠಾಚಾರ್, ದಯಾನಂದ್, ಚಂದ್ರಾಚಾರ್, ಸುಬ್ಬಣ್ಣ, ಮಾರ್ಕಂಡಯ್ಯ, ಗಂಗಾಧರ್, ಶ್ರೀಕಂಠಾಚಾರ್, ಸಮಾಜದ ಮುಖಂಡರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ತಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಾನದಾರಿಯಲ್ಲಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಮಿಷನ್ ರಾಣಿಗಂಜ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಫೈಟರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ತೋತಾಪುರಿ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜೈಲರ್ (ತ)	4 ಪ್ರದರ್ಶನಗಳು
ಸಂಗಂ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಲಿಡೋ	
ಫೈಟರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಜ ಮಾರ್ತಾಂಡ (ಕ)	4 ಪ್ರದರ್ಶನಗಳು
ಪ್ರಭಾ	
ಲವ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಎಕ್ಸ್ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೆಳಗನಹಳ್ಳಿಯಲ್ಲಿ ಮಳೆಗೆ ಬಾಳೆ ನಾಶ



ಹೆಚ್.ಡಿ.ಕೋಟೆ: ತಾಲೂಕಿನ ಬೆಳಗನಹಳ್ಳಿ ಗ್ರಾಮದಲ್ಲಿ ಸೋಮವಾರ ಸುರಿದ ಮಳೆಯಿಂದ 100ಕ್ಕೂ ಹೆಚ್ಚು ಬಾಳೆ ಫಸಲು ಅರ್ಧಕ್ಕೆ ಮುರಿದು ಬಿದ್ದು ನಾಶವಾಗಿವೆ.

ಗ್ರಾಮದ ರೈತ ಹರೀಶ್‌ಗೆ ಸೇರಿದ ಬಾಳೆ ಫಸಲು ನಾಶವಾಗಿದೆ. ಹೆಚ್.ಡಿ.ಕೋಟೆ ಭಾಗದಲ್ಲಿ ಮಧ್ಯಾಹ್ನ ಸುಮಾರು 3 ಗಂಟೆಗೂ ಹೆಚ್ಚು ಕಾಲ ಸುರಿದ ಭಾರಿ ಮಳೆಗೆ ಹರೀಶ್ ಎರಡು ಎಕರೆ ಜಮೀನಿನಲ್ಲಿ ಬೆಳೆದಿದ್ದ ಬಾಳೆ ನಾಶವಾಗಿದ್ದು, ಈ ಬಾರಿ ಉತ್ತಮ ಇಳುವರಿಯ ನಿರೀಕ್ಷೆಯಲ್ಲಿದ್ದರು. ಹಂಪಾಪುರ ಸೇರಿದಂತೆ ತಾಲೂಕಿನ ಹಲವೆಡೆ ಧಾರಾಕಾರ ಮಳೆಯಾಗಿದೆ. ಪಟ್ಟಣ ರಸ್ತೆಬದಿಯಲ್ಲಿ ನಾಲೆಯಂತೆ ಮಳೆ ನೀರು ಹರಿಯಿತು.

ಕೊಣಸೂರಲ್ಲಿ ಆಯುಷ್ಮಾನ್‌ಭವ ಕಾರ್ಯಕ್ರಮ



ಬೆಟ್ಟದಪುರ: ಪಿರಿಯಾಪಟ್ಟಣದ ತಾಲೂಕಿನ ಬೆಟ್ಟದಪುರ ಹೋಬಳಿಯ ಕೊಣಸೂರು ಆಯುರ್ವೇದ ಚಿಕಿತ್ಸಾಲಯದಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ಆಯುಷ್ ಇಲಾಖೆ ವತಿಯಿಂದ ಆಯುಷ್ಮಾನ್‌ಭವ ಕಾರ್ಯಕ್ರಮ ಹಾಗೂ ಆರೋಗ್ಯ ತಪಾಸಣೆ ನಡೆಸಲಾಯಿತು.

ಆಯುರ್ವೇದ ಚಿಕಿತ್ಸಾಲಯದ ವೈದ್ಯಾಧಿಕಾರಿ ಡಾ.ಸತೀಶ್ ಮಾತನಾಡಿ, ಆಯುರ್ವೇದ ಮಹತ್ವ ತಿಳಿಯಲು ಜನರು ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಆಯುರ್ವೇದ ಆಸ್ಪತ್ರೆಗಳಲ್ಲಿ ವಿವಿಧ ರೋಗಗಳಿಗೆ ಹೆಚ್ಚಿನ ಚಿಕಿತ್ಸೆ ನೀಡಲಾಗುತ್ತದೆ. ಪಂಚಕರ್ಮದಂತಹ ಚಿಕಿತ್ಸೆಗಳು ತಾಲೂಕು ಆಸ್ಪತ್ರೆಗಳಲ್ಲಿ ದೊರಕುವಂತೆ ಮಾಡಲಾಗಿದೆ. ಜತೆಗೆ ಯೋಗ ತರಬೇತುದಾರರನ್ನು ನೇಮಿಸಿ ಮಕ್ಕಳಿಗೆ ಯೋಗ, ಧ್ಯಾನ ತರಗತಿಗಳನ್ನು ಆಯುಷ್ ಇಲಾಖೆ ವತಿಯಿಂದ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಕೆ.ರಾಜಶೇಖರ್, ರೈತ ಸಂಘದ ಅಧ್ಯಕ್ಷ ಆನಂದ್, ವೀರಪ್ಪ ಮಾತನಾಡಿದರು. ಅಂಗನವಾಡಿ ಕಾರ್ಯಕರ್ತೆ ಧನಲಕ್ಷ್ಮೀ, ಯೋಗ ತರಬೇತುದಾರರಾದ ಆಶಾ ಮಹದೇವರಾವ್ ಮತ್ತಿತರರು ಹಾಜರಿದ್ದರು.

ಪಂಪ್‌ಸೆಟ್‌ಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹ

ಹುಣಸೂರು: ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಲೋಡ್ ಶೆಡ್ಡಿಂಗ್ ಮಾಡಿದರೆ ಸರ್ಕಾರದ ವಿರುದ್ಧ ರೈತರು ಧಂಗೆ ಏಳುವ ದಿನ ದೂರವಿಲ್ಲ. ಆದ್ದರಿಂದ ಸಮರ್ಪಕ ವಿದ್ಯುತ್ ಪೂರೈಕೆಗೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸತ್ಯ ಎಂಎಸ್ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಆಗ್ರಹಿಸಿದ್ದಾರೆ.

ಲೋಡ್ ಶೆಡ್ಡಿಂಗ್‌ನಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದ್ದು, ರಾಗಿ, ಭತ್ತ, ಕಬ್ಬು, ಬಾಳೆ, ಹೂವು, ಹಣ್ಣು ತರಕಾರಿ ಸೇರಿದಂತೆ ವಾಣಿಜ್ಯ ಬೆಳೆಗಳಿಗೆ ಪಂಪ್‌ಸೆಟ್ ಅನ್ನು ಅವಲಂಬಿಸಿಕೊಂಡಿದ್ದು, ಲೋಡ್ ಶೆಡ್ಡಿಂಗ್‌ನಿಂದ ಬೆಳೆಗಳು ಒಣಗುತ್ತಿದೆ. ಪದೇ ಪದೆ ಲೋಡ್‌ಶೆಡ್ಡಿಂಗ್‌ನಿಂದ ತೊಂದರೆಯಾಗುತ್ತಿದೆ. ಹಿಂದಿನಂತೆ ದಿನಕ್ಕೆ ಏಳು ಗಂಟೆ ವಿದ್ಯುತ್ ಸರಬರಾಜು ಮಾಡಬೇಕು. ತಪ್ಪಿದಲ್ಲಿ ರೈತರೊಂದಿಗೆ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ.

ದಲಿತರ ನಿವೇಶನಕ್ಕಾಗಿ ತಾಪಂಗೆ ಭೂಸ್ವಾಧೀನ ದಾಖಲೆ ಹಸ್ತಾಂತರ



ತಿ.ನರಸೀಪುರ, ಅ.9– ತಾಲೂಕಿನ ಕೇತುಪುರ ಗ್ರಾಮದ ದಲಿತರ ನಿವೇಶನ ಹಂಚಿಕೆಗಾಗಿ 41 ವರ್ಷದ ಬಳಿಕ ಭೂಸ್ವಾಧೀನ ಪತ್ರವನ್ನು ತಾಲೂಕು ಪಂಚಾಯಿತಿಗೆ ಹಸ್ತಾಂತರಿಸಿರುವುದು ನಮ್ಮ ಹೋರಾಟಕ್ಕೆ ಸಂದ ಬಹುದೊಡ್ಡ ಜಯ ಎಂದು ಬಣ ರಹಿತ ದಸಂಸ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ್ ತಿಳಿಸಿದರು.

ಕೇತುಪುರ ಗ್ರಾಮದ ಆಶ್ರಯ ಮನೆ ಹಂಚಿಕೆಗಾಗಿ 1982ರಲ್ಲಿ ಮೈಸೂರು ಜಿಲ್ಲಾಧಿಕಾರಿ ಅಧಿಸೂಚನೆ ಹೊರಡಿಸಿದ್ದರು. ಆದರೆ, 4 ದಶಕಗಳಾದರೂ ಭೂಸ್ವಾಧೀನವಾಗದೇ ಹಂಚಿಕೆ ನೆನಗುದಿಗೆ ಬಿದ್ದಿತ್ತು. ನಮ್ಮ ಸಮಿತಿ ಕಳೆದ ವರ್ಷದಿಂದ ತಾಲೂಕಿನಲ್ಲಿ ದಲಿತರಿಗೆ ಸ್ಮಶಾನ ಜಾಗ ಮಂಜೂರು ಮಾಡಿಸಿ, ಮೂಲಸೌಲಭ್ಯ ಕಲ್ಪಿಸುವುದು. ಕೇತುಪುರ ದಲಿತರಿಗೆ ನಿವೇಶನ ಹಂಚಿಕೆ, ಬೇವಿನಹಳ್ಳಿ ಗ್ರಾಮದ ದಲಿತರ ನಿವೇಶನಗಳಿಗೆ ಖಾತೆ ಮಾಡಿಸಿ, ಸಾಮೂಹಿಕ ಗೃಹ ನಿರ್ಮಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹನುಮನಾಳು ಗ್ರಾಮದ ದಲಿತರ ಜಮೀನುಗಳಿಗೆ ತೆರಳುವ ರಸ್ತೆ ಒತ್ತುವರಿ ತೆರವು, ಕೆಎಸ್‌ಐಸಿ ನಿಗಮದಲ್ಲಿ ಕ್ಷುಲ್ಲಕ ಕಾರಣದಿಂದ ವಜಾಗೊಳಿಸಿದ ಹೊರಗುತ್ತಿಗೆ ಕಾರ್ಮಿಕರ ಮರುನೇಮಕ, ಹೊರಗುತ್ತಿಗೆ ಮಹಿಳಾ ಕಾರ್ಮಿಕರ ಶೋಷಣೆ ವಿರುದ್ಧ ಕ್ರಮ ಸೇರಿದಂತೆ ಹತ್ತಾರು ಪರಿಹಾರಕ್ಕಾಗಿ ನಿರಂತರ ಹೋರಾಟ ಮಾಡಿದ್ದು, ಈಗ ಅದರ ಫಲವಾಗಿ ಕೇತುಪುರ ನಿವೇಶನ ವಂಚಿತರಿಗೆ ನಿವೇಶನ ಲಭ್ಯವಾಗಲಿದೆ. ಬೇವಿನಹಳ್ಳಿ ಗ್ರಾಮದ ದಲಿತರ ನಿವೇಶನಗಳಿಗೆ ಇ–ಸ್ವತ್ತು ಮತ್ತು ಖಾತೆಯನ್ನು ಒಂದು ವಾರದೊಳಗೆ ಮಾಡಿಕೊಡದಿದ್ದರೆ ಪಂಚಾಯಿತಿಗೆ ಬೀಗ ಜಡಿಯುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಘಟನಾ ಸಂಚಾಲಕ ಮೂಡಳ್ಳಿ ಮಹಾದೇವ, ಜಿಲ್ಲಾ ಮುಖಂಡ ಯಡದೊರೆ ಸಿದ್ದರಾಜು, ತಾಲೂಕು ಸಂಚಾಲಕ ಕೇತುಪುರ ಶಿವಪ್ರಕಾಶ್, ಬೇವಿನಹಳ್ಳಿ ದಿನೇಶ್, ಕಾರ್ಮಿಕ ಮುಖಂಡ ಪ್ರದೀಪ್, ತಾಲೂಕು ಸಂಘಟನಾ ಸಂಚಾಲಕ ಸಿ.ಬಿ.ಹುಂಡಿ ನಾಗೇಶ್, ಮರಡಿಪುರ ಮಲ್ಲಿಕಾರ್ಜುನ, ಗ್ರಾಪಂ ಸದಸ್ಯ ರಾಚಪ್ಪ, ಅಶ್ವಥ್, ಶೇಖರ್, ಬೇವಿನಹಳ್ಳಿ ಲತಾ, ಸರೋಜ, ನಿಂಗರಾಜು ಹಾಜರಿದ್ದರು.

12ರವರೆಗೆ ವಾಕ್–ಶ್ರವಣ ತಪಾಸಣೆ ಶಿಬಿರ




ಕೆ.ಆರ್.ನಗರ, ಅ.9– ಲಯನ್ಸ್ ಕ್ಲಬ್ ಆಫ್ ಮೈಸೂರು, ಲಯನ್ಸ್‌ಕ್ಲಬ್ ಸೆಂಟ್ರಲ್ ಹಾಗೂ ಕಾಂಗ್ರೆಸ್ ವತಿಯಿಂದ ವಾಕ್ ಮತ್ತು ಶ್ರವಣ ದೋಷವಿರುವವರಿಗೆ ಪಟ್ಟಣದ ಪುರಸಭೆಯ ಬಯಲು ರಂಗ ಮಂದಿರದಲ್ಲಿ ಏರ್ಪಡಿಸಿದ್ದ ತಪಾಸಣೆ ಮತ್ತು ಚಿಕಿತ್ಸಾ ಉಚಿತ ಶಿಬಿರಕ್ಕೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ನಂತರ ಶಾಸಕರು ಮಾತನಾಡಿ, ಉಚ್ಚಾರಣೆ, ಭಾಷೆ ತೊಂದರೆ, ಕಲಿಕೆ, ಕಿವಿ ಕೇಳದಿರುವುದು ಸೇರಿದಂತೆ ಕಿವಿ ಮತ್ತು ಗಂಟಲು ಸಮಸ್ಯೆಗಳನ್ನು ಕಂಡುಹಿಡಿದು ಉಚಿತವಾಗಿ ಚಿಕಿತ್ಸೆ ನೀಡಿ ಸಲಕರಣೆ ನೀಡಲಾಗುವುದು. ಭೇರ್ಯ ಸಾರ್ವಜನಿಕ ಆಸ್ಪತ್ರೆ, ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರ, ಹೊಸೂರು ಬಸ್ ನಿಲ್ದಾಣ ಮತ್ತು ಹೊಸಕೋಟೆ ಗ್ರಾಮದ ಕುರ್ಜು ಆವರಣದಲ್ಲಿ ಅ.12 ರವರೆಗೆ ಶಿಬಿರ ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬಡಜನತೆಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಇಂತಹ ಆರೋಗ್ಯ ಶಿಬಿರಗಳನ್ನು ನಡೆಸಲಾಗುವುದು. ಜತೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉತ್ತಮ ಆರೋಗ್ಯ ಸೇವೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ವೈದ್ಯರು ಮತ್ತು ಆರೋಗ್ಯ ಕೇಂದ್ರದ ಸಿಬ್ಬಂದಿ ರೋಗಿಗಳೊಂದಿಗೆ ಸೌಜನ್ಯದಿಂದ ಚಿಕಿತ್ಸೆ ನೀಡುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಕ್ಲಬ್ ವತಿಯಿಂದ ಸಾರ್ವಜನಿಕ ಆಸ್ಪತ್ರೆಗೆ ಮೂರು ವ್ಹೀಲ್ ಚೇರ್‌ಗಳನ್ನು ವಿತರಿಸಲಾಯಿತು. ಕ್ಲಬ್‌ನ ಜಿಲ್ಲಾ ಗವರ್ನರ್ ಕೃಷ್ಣೇಗೌಡ, ಅಧ್ಯಕ್ಷ ದೇವೇಗೌಡ, ಕಾರ್ಯದರ್ಶಿ ಮೋಹನ್, ಪದಾಧಿಕಾರಿಗಳಾದ ಬಿ.ಎಂ. ಆಕಾಶ್, ವನಿತಾ ದೇವಯ್ಯ, ಸೋಮಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್. ಮಹದೇವ್, ಉದಯಶಂಕರ್, ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ್, ಅಡಗೂರು ಗ್ರಾಪಂ ಅಧ್ಯಕ್ಷ ಮಹದೇವ್, ಮುಖಂಡರಾದ ಪಂಚಾಕ್ಷರಿ, ಕೆ.ಎನ್.ಪ್ರಸನ್ನ, ಬ್ಯಾಡರಹಳ್ಳಿಕುಮಾರ್ ಮತ್ತಿತರರು ಹಾಜರಿದ್ದರು.

ಶಾಮಿಯಾನಕ್ಕೆ ಕಿಡಿಗೇಡಿಗಳ ಬೆಂಕಿ



ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ನೇರಳೆಕುಪ್ಪೆ ಗ್ರಾಮದಲ್ಲಿ ಸಚಿವ ಕೆ.ವೆಂಕಟೇಶ್ ಅವರ ಜನಸಂಪರ್ಕ ಕಾರ್ಯಕ್ರಮಕ್ಕೆ ಹಾಕಿದ್ದ ಶಾಮಿಯಾನಕ್ಕೆ ಭಾನುವಾರ ಮಧ್ಯರಾತ್ರಿ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ.

ಗ್ರಾಮದಲ್ಲಿ ಸೋಮವಾರ ಸಚಿವರ ಜನಸಂಪರ್ಕ ಹಾಗೂ ಅಭಿನಂದನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಇದ್ದಕ್ಕಾಗಿ ಭಾನುವಾರ ವೇದಿಕೆ ನಿರ್ಮಾಣಕ್ಕೆ ಶಾಮಿಯಾನ ಹಾಕಲಾಗಿತ್ತು. ಆದರೆ, ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಪಿರಿಯಾಪಟ್ಟಣ ಠಾಣೆ ಪೊಲೀಸರು ಹಾಗೂ ಗ್ರಾಪಂ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ನಂ.ಗೂಡಲ್ಲಿ ಗಣಪತಿ ವಿಸರ್ಜಣೆಯ ಶೋಭಯಾತ್ರೆ



ನಂಜನಗೂಡು, ಅ.9– ನಗರದ ಅರಮನೆ ಮೈದಾನದಲ್ಲಿ ಪ್ರತಿಷ್ಠಾಪಿಸಿದ್ದ ಮಹಾ ಗಣಪತಿ ವಿಸರ್ಜನೆಯ ಶೋಭಯಾತ್ರೆಯ ಭಾನುವಾರ ವಿವಿಧ ಕಲಾತಂಡ ಹಾಗೂ ಸಾವಿರಾರು ಭಕ್ತರ ನಡುವೆ ನಡೆಯಿತು.

ಅಲಂಕೃತ ವಾಹನದಲ್ಲಿ ಭಾರತಾಂಬೆಯ ಕಲಾಕೃತಿಯೊಂದಿಗೆ ಗಣಪತಿ ಮೂರ್ತಿಯನ್ನು ಕೂರಿಸಿ ವಿಶೇಷ ಪೂಜೆ ಸಲ್ಲಿಸಿ ಈಡುಗಾಯಿ ಹೊಡೆಯುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಲಾಯಿತು. ವೀರಗಾಸೆ, ಪೂಜಾ ಕುಣಿತ, ಕಂಸಾಳೆ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾತಂಡಗಳ ಪ್ರದರ್ಶನ ಮೆರವಣಿಗೆಗೆ ಮೆರಗು ನೀಡಿದವು. ಇನ್ನು ನಗಾರಿ ಸದ್ದಿಗೆ ಯುವಕರು ಕುಣಿದು ಸಂಭ್ರಮಪಟ್ಟರು.

ಯುವಕರು ಮೆರವಣಿಗೆ ಯುದ್ದಕ್ಕೂ ಕೇಸರಿ, ಓಂಕಾರ ಬಾವುಟಗಳನ್ನು ಪ್ರದರ್ಶಿಸಿ ಸಾಗಿದರು. ಯಾತ್ರೆ ಸಾಗುವ ಮಾರ್ಗದಲ್ಲಿ ಕೇಸರಿ ಬಂಟಿಂಗ್‌ಗಳು ರಾರಾಜಿಸುತ್ತಿದ್ದವು. ಹಲವೆಡೆ ಗಣಪತಿ ಮೂರ್ತಿಗೆ ಪುಷ್ಪಾರ್ಚನೆ ಮಾಡಲಾಯಿತು. ರಾಷ್ಟ್ರಪತಿ ರಸ್ತೆಯಲ್ಲಿ ಸಾಗಿದ ಶೋಭಯಾತ್ರೆ ರಾಷ್ಟ್ರೀಯ ಹೆದ್ದಾರಿ ಮಾರ್ಗವಾಗಿ ಎಂಜಿಎಸ್ ರಸ್ತೆ, ನೆಹರು ವೃತ್ತ, ಬಜಾರ್ ರಸ್ತೆ, ಅಂಗಡಿ ಬೀದಿಯಲ್ಲಿ ಸಂಚರಿಸಿ ಶ್ರೀಕಂಠೇಶ್ವರ ಸ್ವಾಮಿ ಕಪಿಲಾ ಸ್ನಾನಘಟ್ಟದಲ್ಲಿ ಧಾರ್ಮಿಕ ಪೂಜಾ ಕೈಂಕರ್ಯದೊಂದಿಗೆ ಗಣಪತಿ ಮೂರ್ತಿಯನ್ನು ವಿಸರ್ಜಿಸಲಾಯಿತು.

ನಂತರ ಭಕ್ತರಿಗೆ ಪ್ರಸಾದ ವಿನಿಯೋಗಿಸಲಾಯಿತು. ವಾರದಿಂದ ಅರಮನೆ ಮೈದಾನದಲ್ಲಿ ನಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ, ಭಕ್ತಿಯ ರಸದೌತಣ ನೀಡಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಟ್ಕರ್ ನೇತೃತ್ವದಲ್ಲಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಬೆಳೆ ನಷ್ಟದ ಆತಂಕದಲ್ಲಿ ರೈತರು



ಹುಣಸೂರು: ತಾಲೂಕಿನ ಕಟ್ಟೆಮಳಲವಾಡಿ ಅಣೆಕಟ್ಟೆಯ ಹೊಡ್ಕೆ ಕಟ್ಟೆ ಪ್ರದೇಶದ ಸಾವಿರಾರು ಎಕರೆ ನೀರಾವರಿ ಬೆಳೆ ನಷ್ಟದ ಆತಂಕದಲ್ಲಿ ರೈತರು ಕಂಗಾಲಾಗಿದ್ದಾರೆ.

ಅಣೆಕಟ್ಟೆಯಿಂದ ಹೊಡ್ಕೆಕಟ್ಟೆ ಮೂಲಕ ಕಿರ್ಸೋಡ್ಲು, ತೊಂಡಾಳು ಗ್ರಾಮದ ಸಾವಿರಾರು ಎಕರೆಗೆ ಕಾಲುವೆ ನೀರು ಹರಿಯುತ್ತದೆ. ಆದರೆ, ಕಾಲುವೆಯಲ್ಲಿ ಗಿಡಗಂಟಿಗಳು ಬೆಳೆದು ನೀರು ಮುಂದೆ ಸಾಗಲು ಸಾಧ್ಯವಾಗದೆ ಅಣೆಕಟ್ಟೆಯಿಂದ ನೀರು ಧುಮುಕಿ ಪೋಲಾಗುತ್ತಿದೆ. ಇದರಿಂದ ಕಾಲುವೆಗೆ ನೀರು ಬಾರದೆ ಹೊಡ್ಕೆಕಟ್ಟೆ ಪ್ರದೇಶದ ಸಾವಿರಾರು ಎಕರೆಯಲ್ಲಿ ಬೆಳೆದ ಭತ್ತ ಒಣಗುತ್ತಿದೆ.

ಹುಣಸೂರು ತಾಲೂಕನ್ನು ಬರಪೀಡಿತ ಪ್ರದೇಶ ಎಂದು ಸರ್ಕಾರ ಘೋಷಿಸಿದೆ. ಆದರೆ, ಇರುವ ನೀರನ್ನು ಸದ್ಬಳಕೆ ಮಾಡಿಕೊಳ್ಳಲಾಗದೆ ಹಾಗೂ ಅಧಿಕಾರಗಳ ನಿರ್ಲಕ್ಷ್ಯದಿಂದ ರೈತರು ಕಂಗಾಲಾಗಿದ್ದಾರೆ ಎಂದು ರೈತರಾದ ಮಹೇಂದ್ರ, ಶಿವಣ್ಣ, ಮೊಗಣ್ಣೆಗೌಡ, ಗಾವಡಗೆರೆ ಗ್ರಾಮದ ಸಿದ್ದಪ್ಪನಾಯಕ, ಚೆಲುವಯ್ಯ, ಕೃಷ್ಣಯ್ಯ, ಕಿರ್ಸೋಡ್ಲು ಗ್ರಾಮದ ಸ್ವಾಮಿಗೌಡ, ದೇವೇಗೌಡ, ಶಂಕರೇಗೌಡ, ತೊಂಡಾಳು ಗ್ರಾಮದ ರೈತರು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಕಾಲುವೆಯನ್ನು ದುರಸ್ತಿ ಪಡಿಸದಿಸಿ, ಬೆಳೆಗಳಿಗೆ ನೀರು ಹರಿಸತ್ತಿದ್ದರೆ ಈ ಭಾಗದ ರೈತರೊಂದಿಗೆ ಹಾರಂಗಿ ಜಲಾಶಯ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ಸತ್ಯ ಎಂಎಸ್ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಎಚ್ಚರಿಸಿದ್ದಾರೆ.

ಮಾತೃ ಅಭಿಯಾನ ಕಾರ್ಯಕ್ರಮ ಪರಿಶೀಲನೆ



ಸರಗೂರು, ಅ.9–ತಾಲೂಕಿನ ಸಾಗರೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೋಮವಾರ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ. ರವಿಕುಮಾರ್ ಭೇಟಿ ಪ್ರಧಾನಮಂತ್ರಿ ಸುರಕ್ಷಿತಾ ಮಾತೃ ಅಭಿಯಾನ (ಪಿಎಂಎಸ್‌ಎಂಎ) ಕಾರ್ಯಕ್ರಮ ಪರಿಶೀಲಿಸಿ, ಮಾಹಿತಿ ಪಡೆದರು.

ನಂತರ ಮಾತನಾಡಿದ ಅವರು, ಈ ಕಾರ್ಯಕ್ರಮ ಪ್ರತಿಂಗಳು 9 ಮತ್ತು 24ರಂದು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಉಚಿತವಾಗಿ ನಡೆಸಲಾಗುತ್ತಿದೆ. ಗರ್ಭಿಣಿಯರಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಿಂದ ವೈದ್ಯಕೀಯ ತಪಾಸಣೆ ನಡೆಸಲಾಗುವುದು. ಗರ್ಭಿಣಿಯರಲ್ಲಿ ತೊಂದರೆ ಕಂಡು ಬಂದಲ್ಲಿ ಸೂಕ್ತ ಸಲಹೆ, ಚಿಕಿತ್ಸೆ ನೀಡಲಾಗುವುದು ಎಂದರು.

ಪೌಷ್ಟಿಕ ಆಹಾರ ಸೇವನೆ, ಸುರಕ್ಷಿತ ಹೆರಿಗೆ, ತಾಯಿತನ, ಶಿಶು ಆರೈಕೆ ಬಗ್ಗೆ ಅರಿವು ಮೂಡಿಸುವುದು. ತಾಯಿ ಮತ್ತು ಶಿಶು ಮರಣವನ್ನು ತಪ್ಪಿಸುವುದು ಮಾತೃ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ.ಕಿರಣ್ ಕುಮಾರ್, ರವಿರಾಜ್ ಕೃಷ್ಣಪ್ಪ, ಸೋಮಣ್ಣ ರತ್ನ, ಅಸೀಮ ಸುಲ್ತಾನ್, ಮಾಚಿ, ಮನು, ಬಿಂದು, ಆಶಾ, ಸುನಿಲ್, ಆಶಾ ಕಾರ್ಯಕರ್ತೆಯರು, ಗರ್ಭಿಣಿಯರು ಹಾಜರಿದ್ದರು.

ಅನಧಿಕೃತ ಪ್ರಯೋಗಾಲಯಕ್ಕೆ ಬೀಗ



ಸರಗೂರು: ಪಟ್ಟಣದ ಮಹಾವೀರ ಸರ್ಕಲ್‌ನಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದ ಪ್ರಯೋಗಾಲಯಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಸೋಮವಾರ ದಿಢೀರ್ ಭೇಟಿ ನೀಡಿ ಪರಿಶೀಲಿಸಿ, ಬೀಗ ಹಾಕಿಸಿದರು.

ಪರಿಶೀಲನೆ ವೇಳೆ ಪಿಎಂ ಎಸ್‌ಎಂಎಯ ಪರವಾನಗಿ ಹಾಗೂ ಪ್ರಯೋಗಾಲಯದ ಹೆಸರಿನ ನಾಮಫಲಕ ಇಲ್ಲದೆ ಇರುವುದು ಪತ್ತೆಯಾಗಿದೆ. ನಂತರ ಪ್ರಯೋಗಾಲಯವನ್ನು ಮುಚ್ಚಿಸಲಾಯಿತು.

ಜಿಲ್ಲಾಧಿಕಾರಿ ಆದೇಶದಂತೆ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಎಲ್ಲಾ ಖಾಸಗಿ ಕ್ಲಿನಿಕ್, ಆಸ್ಪತ್ರೆ ಮತ್ತು ಪ್ರಯೋಗಾಲಯಗಳನ್ನು ಪರಿಶೀಲಿಸಲಾಗುತ್ತಿದೆ. ಪರವಾನಗಿ ಇಲ್ಲದೆ ಅನಧಿಕೃತವಾಗಿ ನಡೆಸುವಂತಿಲ್ಲ. ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳಲ್ಲಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಯ ದರಪಟ್ಟಿಯನ್ನು ಕಡ್ಡಾಯವಾಗಿ ಬೋರ್ಡ್ ಗಳಲ್ಲಿ ಹಾಕಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಸೂಚನೆ ಹಾಗೂ ಎಚ್ಚರಿಕೆ ನೀಡಿದರು.

ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ನಿತ್ಯ ದಾಸೋಹ



ನಂಜನಗೂಡು: ಪಟ್ಟಣದ ಅಯ್ಯಪ್ಪಸ್ವಾಮಿ ದೇವಾಲಯದ ಗುರುಸ್ವಾಮಿ ಮತ್ತು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಪಿ.ದೇವರಾಜಸ್ವಾಮಿ ಅವರು ದೇವಾಲಯಕ್ಕೆ ಆಗಮಿಸುವ ಭಕ್ತರಿಗೆ ನಿತ್ಯ ದಾಸೋಹ ಹಾಗೂ ಈ ಭಾಗದ ಜನರಿಗೆ ಸ್ವಾಮಿಯ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದಾರೆ.

ಪ್ರತೀ ವರ್ಷ ಜನವರಿಯಲ್ಲಿ ಅಯ್ಯಪ್ಪ ಸ್ವಾಮಿಯ ಬ್ರಹ್ಮೋತ್ಸವ ಕಾರ್ಯಕ್ರಮ ಏರ್ಪಡಿಸಿ, ಭಕ್ತರಿಗೆ ದೇವಾಲಯ ವತಿಯಿಂದ ಉಚಿತವಾಗಿ ಮಾಲಾಧಾರಣೆ ಮಾಡಿ, ಮೈಸೂರಿನ ವೆಂಕಟೇಶ್ವರ ದೇವಾಲಯದಿಂದ ನಂಜನಗೂಡಿನ ಅಯ್ಯಪ್ಪಸ್ವಾಮಿ ದೇವಾಲಯವರೆಗೆ ಪಾದಯಾತ್ರೆ ನಡೆಸುತ್ತಾರೆ. ಜತೆಗೆ ಅನೇಕ ಬಡವರಿಗೆ ನೆರವು ನೀಡುತ್ತಿದ್ದಾರೆ.

WANTED

MONTESSORI TRAINED TEACHER for Nursery Section.

Apply within 1 week

Email : srignaneshwari.vidyasamsthe@gmail.com

SRI GNANESHWARI VIDYASAMSTHE
P-1, 8th Main, Hebbal
1st Stage, Mysore-16

14ನೇ ವರ್ಷದ ಸವಿನೆನಪು




ನಾಗೇಂದ್ರ (ಗುಂಡು)

ದುಃಖತಪ್ತರು: ಮರ್ಕಿ ಮಹದೇವ, ಸರೋಜ & ಕುಟುಂಬವರ್ಗದವರು

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.

9590491194,9606783264



ಬಾಡಿಗೆಗೆ / ಭೋಗ್ಯಕ್ಕೆ ಖಾಲಿ ಜಾಗ ಬೇಕಾಗಿದೆ

1) ರಿಂಗ್ ರಸ್ತೆ ಹಿನಕಲ್ Fly Over ಇಂದ GRS Fantasy Park- 120x120 ಅಡಿ ಎಡಗಡೆ.
2) ಮೈಸೂರು ನಗರ ಮುಡಾ/ಕಾರ್ಪೋರೇಷನ್ ಮಿತಿ ಒಳಗೆ 70x70.
3) ಮಾನಂದವಾಡಿ ರಸ್ತೆಯ ಬಲಭಾಗದ ಲಿಂಕ್ ಮುಖ್ಯರಸ್ತೆ ಜಂಕ್ಷನ್‌ನಿಂದ ಮೈಸೂರು ರಿಂಗ್ ರಸ್ತೆ ಜಂಕ್ಷನ್ 100x100ft
4) ಆರ್.ಟಿ.ನಗರದಿಂದ ಜೆ.ಪಿ.ನಗರ ರಿಂಗ್ ರೋಡ್ ಎಡಭಾಗ 100x100ft.
5) ಬಂಡಿಪಾಳ್ಯದಿಂದ ಲಲಿತಾದ್ರಿಪುರ ರಿಂಗ್ ರೋಡ್ ರಸ್ತೆ 100x100ft.
6) ನಂಜನಗೂಡು City Limits - 100x100ft.

7022943099,9945445255

Nakhsha

ದಸರಾ ಧಮಾಕಾ ಆಫರ್!!

ನಿಮ್ಮ ಕನಸಿನ ಮನೆ ನಿರ್ಮಾಣ ಈಗ
₹1999/-*
ಪ್ರತಿ ಸ್ಕ್ವೇರ್ ಫೀಟ್ (ಜಿಎಸ್ಟಿ ಸೇರಿಸಿದೆ) *T&C Apply

ಉಚಿತ ಇಂಟೀರಿಯರ್ಸ್*
ಅಲ್ಮಾರಿ ಮತ್ತು ಕಿಚನ್ ಕ್ಯಾಬಿನೆಟ್‌ಗಳು
JSW ಸ್ಟೀಲ್, ಅಲ್ಟ್ರಾಟೆಕ್ ಸಿಮೆಂಟ್
ವೈಯರ್ ಕಟ್ ಬ್ರಿಕ್ಸ್

LAST 24 SLOTS AVAILABLE
:+91 70221 24411, +91 96069 66266

BUILDING CONSTRUCTION

STARTS FROM 1599 RS PER SQFT & 2 BHK INTERIOR PACKAGE 2.5 LAKHS

CALL 9988-55-4496

Big Festival **Sale** Buy 2 Get 1 Free*

BUY 2 GET 1* FREE ON ALL IN-HOUSE BRANDS

PICK THE BEST FOR UR FEET
GENTS & LADIES FOOTWEAR
2+1 OFFER RUSH

SHOE WORLD
ESTD.1998
Best Brands at Your Feet...
*T&C Apply

Shivarampet, Opp. Mannars Market, Mysore-01. Ph: **0821-2424282**

ಪ್ರೀಸ್ಕೂಲ್ ಟೀಚರ್ ಟ್ರೈನಿಂಗ್
ಮೈಸೂರು

BECOME A
TEACHER

CELEBRATION 20 YEARS ANNIVERSARY

DIPLOMA IN MONTESSORI/
PRIMARY TEACHER TRAINING
DIPLOMA IN LEARNING DISABILITY

FOR SSLC, PUC /ANY DEGREE CANDIDATE
ONLINE COURSE AVAILABLE

ADMISSION OPEN



IMKTA TEACHER TRAINING PROGRAMS
IMKTA Since 2003
INDIA MYSORE WWW.IMKTA.IN

ALPHA INTERNATIONAL SCHOOL Srirampura, Mysore **+91 7829937469**

ತಕ್ಷಣ ಬೇಕಾಗಿದ್ದಾರೆ

1. ಸೆಕ್ಯೂರಿಟಿ ಗಾರ್ಡ್ಸ್– 10th/ ಪಿಯುಸಿ (30 yrs to 50 yrs) (ಹೂಟಗಳ್ಳಿ, ಹೆಬ್ಬಾಳು, ಕುವೆಂಪುನಗರ)
2. ಹೌಸ್‌ಕೀಪಿಂಗ್ – ಮಹಿಳೆಯರು/ ಹುಡುಗರು. (ಕುವೆಂಪುನಗರ, ಮೇಟಗಳ್ಳಿ)

ESI ಮತ್ತು PF ಸೌಲಭ್ಯವಿರುತ್ತದೆ.

9739166772, 9880419847

COMMERCIAL SITES FOR SALE

NH Attached 2 Commercial Sites-Approved Layout, A Khata & Corner Sites, North Facing, 6728 Sq.ft. & 5240 Sq.ft. Rs. 1750/- per Sq.ft. & Muda Approved Commercial Site available 6200 Total Sq.ft.- Rs. 2000/- per Sq.ft.

Ph: 95131 57993, 74062 84792

neem BOND PLATINUM® ISI

PLYWOOD & DOORS

@ FACTORY DEPOT RATES
10 YEARS WARRANTY*

9845426862, 9901291267

www.sparshhospital.com

SPARSH HOSPITAL
THE TOUCH OF LIFE

ಹೆಮಟಾಲಜಿ ಕ್ಲಿನಿಕ್

ಡಾ|| ಆನಂದ್ ಕುಮಾರ್ ಕೆ

MBBS, MD Paediatrics, FIAP & FNB Paediatric Haematology and Oncology,
Fellowship Paediatric Oncology and Fellowship in Advanced Paediatric BMT (NUH, Singapore)
Consultant in Haematology, Bone Marrow Transplant & Paediatric Oncology

ಈ ಕೆಳಗಿನ ಕಾಯಿಲೆಗಳಿಂದ ನರಳುತ್ತಿರುವವರು

- ಅನೀಮಿಯಾ, ರಕ್ತದ ಹೆಚ್ಚಳ, ಕಡಿಮೆ ಹಾಗು ಅಧಿಕ ಪ್ಲೇಟ್ಲೆಟ್ ಕೌಂಟ್, ಕಡಿಮೆ ಹಾಗು ಅಧಿಕ ಬಿಳಿ ರಕ್ತಕಣಗಳ ಕೌಂಟ್, ಲ್ಯೂಕೇಮಿಯಾ, ಲಿಂಫೋಮ, ಮಲ್ಟಿಪಲ್ ಮೈಲೋಮ, ರಕ್ತಸ್ರಾವ ಮತ್ತು ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಗಳು.
- ಮಕ್ಕಳಲ್ಲಿ ಕಂಡುಬರುವ ಎಲ್ಲಾ ರೀತಿಯ ಹೆಮಟೋಲೊಜಿ ಸಮಸ್ಯೆಗಳು (ಥಲಸ್ಸೆಮಿಯ ಸೇರಿದಂತೆ), ರಕ್ತಸ್ರಾವದ ಸಮಸ್ಯೆಗಳು, ರಕ್ತಹೆಪ್ಪುಗಟ್ಟುವಿಕೆಯ ಸಮಸ್ಯೆಗಳು, ಇಮ್ಮುನೊಡಿಫಿಷಿಯನ್ಸಿ ಸಮಸ್ಯೆಗಳು, ಲ್ಯುಕೇಮಿಯಾ, ಲಿಂಫೋಮಾ ಇತರ ಅಂಗಾಂಗಗಳ ಕ್ಯಾನ್ಸರ್ ಹೊಂದಿರುವವರು.
- ಪುನರಾವರ್ತಿತ ಗರ್ಭಪಾತ ಸೇರಿದಂತೆ ಗರ್ಭಿಣಿಯರು ಮಹಿಳೆಯರಲ್ಲಿ ಕಂಡುಬರುವ ಎಲ್ಲಾ ರೀತಿಯ ಹೆಮಟಾಲೋಜಿ ಸಮಸ್ಯೆಗಳು, ಡಿವಿಟಿ, ಅನೀಮಿಯಾ, ಕಡಿಮೆ ಪ್ಲೇಟ್ಲೆಟ್ ಹೊಂದಿರುವವರು ಮಹಿಳೆಯರಲ್ಲಿ ರಕ್ತಸ್ರಾವದ ಸಮಸ್ಯೆಗಳು, ಲ್ಯುಕೇಮಿಯಾ, ಲಿಂಫೋಮಾ, ಎಪಿ ಎಲ್‌ಎ ಸಿಂಡ್ರೋಮ್.

ನೋಂದಣಿಗಾಗಿ ಕರೆಮಾಡಿ: 99162 80590 | ದಿನಾಂಕ: ಶುಕ್ರವಾರ, 13ನೇ ಅಕ್ಟೋಬರ್ 2023

ಸ್ಥಳ: ಮೆಡಾಲ್ ಕ್ಲೂಮ್ಯಾಕ್ಸ್ ಡಯಾಗ್ನೋಸ್ಟಿಕ್ಸ್, ಬಲ್ಲಾಳ್ ವೃತ್ತ | ಸಮಯ: ಮಧ್ಯಾಹ್ನ 2 ರಿಂದ ಸಂಜೆ 4 ರವರೆಗೆ

ಸೂಚನೆ: ವೈದ್ಯರು ಪ್ರತೀ ತಿಂಗಳ 2ನೇ ಶುಕ್ರವಾರ ತಪಾಸಣೆಗೆ ಲಭ್ಯರಿರುತ್ತಾರೆ

ಕುಂಚಿಟಿಗರ ಸಂಘ (ರಿ.)
ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು

ಇದರ ರಿಟರ್ನಿಂಗ್ ಅಧಿಕಾರಿರವರ ಕಾರ್ಯಲಯ
ಪತ್ರಿಕಾ ಪ್ರಕಟಣೆ

ಕುಂಚಿಟಿಗರ ಸಂಘ(ರಿ), ಮೈಸೂರು ಈ ಸಂಘದ ಕಾರ್ಯಕಾರಿ ಪರಿಷತ್ತಿಗೆ ದಿನಾಂಕ : 29-10-2023 ರಂದು ಭಾನುವಾರ ಬೆಳಗ್ಗೆ 09-00 ಗಂಟೆಯಿಂದ ಅಪರಾಹ್ನ 03-00 ಗಂಟೆಯವರೆಗೆ ಕುಂಚಿಟಿಗರ ಸಂಘ(ರಿ), ಇದರ ಧರ್ಮಪರಾಯಿಣಿ ಶ್ರೀಮತಿ ಆಲಮ್ಮನವರ ಛತ್ರ ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರಿಂದ ನಾಮಪತ್ರಗಳನ್ನು ದಿನಾಂಕ : 16-10-2023 ರಿಂದ 20-10-2023 ರವರೆಗೆ ಬೆಳಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 02-00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ: 21-10-2023 ರಂದು ಮಧ್ಯಾಹ್ನ 11-30 ಗಂಟೆಗೆ ಸಂಘದ ಕಚೇರಿಯಲ್ಲಿ ನಡೆಸಲಾಗುವುದು. ಚುನಾವಣಾ ವೇಳಾಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ ಮುಖಾಂತರ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಆಡಳಿತಾಧಿಕಾರಿ/ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- (ರಾಜು.ಬಿ) ರಿಟರ್ನಿಂಗ್ ಆಫೀಸರ್
ಕುಂಚಿಟಿಗರ ಸಂಘ (ರಿ), ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು

ದಿನಾಂಕ: 06.10.2023
ಸ್ಥಳ: ಮೈಸೂರು

21ನೇ ವರ್ಷದ ಪುಣ್ಯಸ್ಮರಣೆ



ಯಜಮಾನ್ ಲೀಡರ್ಸ್ **ಎಂ.ಜೆ.ಸಿದ್ದೇಗೌಡ್ರು**

ಮಾಜಿ ಮಂಡಲ ಉಪಪ್ರಧಾನರು, ಮರಟಿ ಕ್ಯಾತನಹಳ್ಳಿ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು

ನಿಮ್ಮ ನೆನಪಿನಲ್ಲಿರುವ:

ಶ್ರೀಮತಿ ಪುಟ್ಟತಾಯಮ್ಮ(ಬೋರಮ್ಮ), ಶ್ರೀಮತಿ ಶಾರದಮ್ಮ ಮತ್ತು ಯಜಮಾನ್ ಎಂ.ಎಸ್ ಗಂಗಾಧರರವರು, ಶ್ರೀಮತಿ ಸಾವಿತ್ರಮ್ಮ ಮತ್ತು ಎಂ.ಎಸ್.ಜಗದೀಶ್, ಪಿಎಸಿಎಸ್ ಅಧ್ಯಕ್ಷರು, ಎಂಪಿಸಿಎಸ್ ಮಾಜಿ ಅಧ್ಯಕ್ಷರು, ಎಂ.ಎಸ್. ಜಗದೀಶ್, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಶ್ರೀಮತಿ ಪುಷ್ಪಲತಾ, ಏಕಾಂಬರೀಶ್, ಶಾನ್ವಿ ಲೇಔಟ್ & ವೈಷ್ಣವಿ ಲೇಔಟ್ ಮಾಲೀಕರು, ಹೆಣ್ಣು ಮಕ್ಕಳು, ಗೌರಮ್ಮ, ಲೇ|| ರಾಮಚಂದ್ರೇಗೌಡರು, ಲಕ್ಷ್ಮಮ್ಮ ಚಲುವೇಗೌಡರು, ಅಂಕಮ್ಮ, ಸತ್ಯನಾರಾಯಣ, ದಿ|| ಶ್ರೀಮತಿ ನಿಂಗಮ್ಮ–ಯಜಮಾನ್ ಜೋಗೇಗೌಡರ ಕುಟುಂಬವರ್ಗದವರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು.

